# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೮ನೇ ಅಧಿವೇಶನ

128th Session

(23ನೇ ಏಪ್ರಿಲ್ 2015)

**(23rd APRIL 2015)**

ಸಂಪುಟ ೪೩೨ ಕ್ರಮಾಂಕ (೨)

Volume 432 No. (2)

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯಾಲಯ, ಬೆಂಗಳೂರು

**Karnataka Legislative Council,  Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೮ನೇ ಅಧಿವೇಶನ

128th Session

(23ನೇ ಏಪ್ರಿಲ್ 2015)

**(23rd APRIL 2015)**

ಸಂಪುಟ ೪೩೨ ಕ್ರಮಾಂಕ (೨)

Volume 432 No. (2)

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯಾಲಯ, ಬೆಂಗಳೂರು

**Karnataka Legislative Council, Bengaluru**

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ,
23ನೇ ಏಪ್ರಿಲ್ 2015

## ವಿಷಯಾನುಕ್ರಮಣಿಕೆ


1. ವಿಶೇಷ ಪ್ರಸ್ತಾವನೆಗಳು 3–13

ಅ) ತುರುವೇಕೆರೆ ತಾಲ್ಲೂಕಿನ ಮಲ್ಲಾಘಟ್ಟ ಕೆರೆಯಲ್ಲಿ ಸಾರ್ವಜನಿಕರು 5–6 ಲಕ್ಷ ರೂಪಾಯಿ ಮೀನು ಹಿಡಿದುಕೊಂಡಿರುವ ಬಗ್ಗೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಆ) ಹಾಸನ ತಾಲ್ಲೂಕು ದುದ್ದ ಹೋಬಳಿಯಲ್ಲಿ ಭಾರಿ ಮಳೆಯಿಂದಾಗಿರುವ ಬೆಳೆ ನಷ್ಟ ಪರಿಹಾರ ನೀಡುವ ಬಗ್ಗೆ.

ಶ್ರೀ ಪಟೇಲ್ ಶಿವರಾಂ
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಇ) ದಲಿತ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿ ವೇತನ ಸಿಗದಿರುವ ಬಗ್ಗೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಈ) ಗ್ರಾಮ ಪಂಚಾಯಿತಿ ಸದಸ್ಯರು ಗೌರವಧನ ಕೊಡುವ ಬಗ್ಗೆ.

ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಉ) ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜ್, ದಾವಣಗೆರೆ ಕಾಲೇಜು ಸಿಬ್ಬಂದಿಗಳಿಗೆ ವೇತನ ಬಿಡುಗಡೆಯಾಗದಿರುವ ಬಗ್ಗೆ.

ಶ್ರೀ ವೈ.ಎ. ನಾರಾಯಣಸ್ವಾಮಿ
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಊ) ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭೆ ಕ್ಷೇತ್ರದ ಗೋಪಾಡಿ ಗ್ರಾಮದಲ್ಲಿ ಶ್ರೀಮತಿ ಇಂದಿರಾ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿರುವ ಕುರಿತು.

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಋ)ಹಿಂದಿ ಭಾಷಾ ಶಿಕ್ಷಕರು ಮೌಲ್ಯಮಾಪನ ಬಹಿಷ್ಕಾರ ಹಾಕಿರುವ ಕುರಿತು.

ಶ್ರೀ ಅರುಣ್ ಶಹಾಪೂರ
ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

2. ಶಾಸನ ರಚನೆ 14–125

ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಮತ್ತು ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ

ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ 2015ರ
ಮುಂದುವರೆದ ಚರ್ಚೆ

ಶ್ರೀ ವಿ. ಸೋಮಣ್ಣ
ಶ್ರೀ ಎಂ.ಆರ್. ಸೀತಾರಾಂ
ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)
ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಟಿ.ಎ. ಶರವಣ
ಡಾ. ಸಿ.ಎನ್. ಅಶ್ವಥ್ ನಾರಾಯಣ
ಡಾ: ಮತ್ತಿಕಟ್ಟಿ ವೀರಣ್ಣ

3. ಸಚಿವರ ಹೇಳಿಕೆ 126–128

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಏಪ್ರಿಲ್ 2015ರಲ್ಲಿ ಅಕಾಲಿಕ ಆಲಿಕಲ್ಲಿ ಮಳೆಯಿಂದ ಹಾನಿಯಾಗಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

# ಕರ್ನಾಟಕ ವಿಧಾನ ಪರಿಷತ್ತು

*ಗುರುವಾರ, 23ನೇ ಏಪ್ರಿಲ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

## 1. ವಿಶೇಷ ಪ್ರಸ್ತಾವಗಳು

(ಅ) ವಿಷಯ: ತುರುವೇಕೆರೆ ತಾಲ್ಲೂಕಿನ ಮಲ್ಲಾಘಟ್ಟ ಕೆರೆಯಲ್ಲಿ ಸಾರ್ವಜನಿಕರು 5-6 ಲಕ್ಷ ರೂಪಾಯಿ ಮೀನು ಹಿಡಿದುಕೊಂಡಿರುವ ಬಗ್ಗೆ

– – –

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೆ, ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಮಲ್ಲಾಘಟ್ಟ ಕೆರೆಯಲ್ಲಿ ಕ್ಷೇತ್ರದ ಶಾಸಕರು ತಮ್ಮ ಬೆಂಬಲಿಗರು ಮತ್ತು ಬೆಸ್ತರಪಾಳ್ಯ ಸಾರ್ವಜನಿಕರಿಗೆ ಕುಮ್ಮಕ್ಕು ನೀಡಿ ಸುಮಾರು 5–6 ಲಕ್ಷ ರೂಪಾಯಿಗಳಷ್ಟು ಮೀನುಗಳನ್ನು ಅಕ್ರಮವಾಗಿ ಹಿಡಿಸಿದ್ದಾರೆಂದು ದಿನಾಂಕ:20.04.2015ರ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರಿಂದ ಮಲ್ಲಾಘಟ್ಟ ಮೀನು ಸಹಕಾರ ಸಂಘಕ್ಕೆ ತೀವ್ರ ನಷ್ಟವನ್ನುಂಟು ಮಾಡಿದ್ದಾರೆಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಲ್ಲಾಘಟ್ಟ ಮೀನುಗಾರರ ಸಂಘಕ್ಕೆ ಮೀನು ಸಾಕಾಣಿಕೆಗೆ 5 ವರ್ಷದ ಅವಧಿಗೆ ಮೀನುಗಾರಿಕಾ ಇಲಾಖೆಯು ಕಾನೂನುಬದ್ಧವಾಗಿ ಅನುಮತಿ ನೀಡಿರುತ್ತದೆ. ಅಕ್ರಮವಾಗಿ ಹಿಡಿದವರ ಮೇಲೆ ಪೊಲೀಸರಿಗೆ ದೂರು ನೀಡಲು ಹೋದರೆ ವೃತ್ತ ನಿರೀಕ್ಷಕರು ಇವರ ದೂರನ್ನು ದಾಖಲಿಸದೆ ಸಬೂಬು ಹೇಳಿ ಯಾರು ಏನೇ ಮಾಡಿದರು ನಾವು ಕೇಸು ದಾಖಲಿಸುವಂತಿಲ್ಲ ಎಂದು ತಿಳಿಸಿರುವ ಕಾರಣ ಹಾಗೂ ಕಾನೂನು ಕ್ರಮ ಜರುಗಿಸದೇ ಸರ್ಕಾರದ ವಿರುದ್ಧ ಕಾನೂನು ಬಾಹಿರ ಚಟುವಟಿಕೆ ಹಾಗೂ ಭ್ರಷ್ಟಾಚಾರ ನಡೆಸಿರುವ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಹಾಗೂ ನ್ಯಾಯಯುತವಾಗಿ ಮಲ್ಲಾಘಟ್ಟ ಮೀನುಗಾರರ ಸಂಘಕ್ಕೆ ರಕ್ಷಣೆ ಕೊಟ್ಟು ಯಾವ ರೀತಿಯಿಂದಲೂ ಅನ್ಯಾಯವಾಗದಂತೆ ಕ್ರಮಕೈಗೊಳ್ಳಲು ನಿಯಮ 330ಎ ಅಡಿಯಲ್ಲಿ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಂತರ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

(ಆ) ವಿಷಯ: ಹಾಸನ ತಾಲ್ಲೂಕು ದುದ್ದ ಹೋಬಳಿಯಲ್ಲಿ ಭಾರಿ ಮಳೆಯಿಂದಾಗಿರುವ ಬೆಳೆ ನಷ್ಟಕ್ಕೆ, ಬೆಳೆ ನಷ್ಟ ಪರಿಹಾರ ನೀಡುವ ಬಗ್ಗೆ

– – –

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ಹಾಸನ ಜಿಲ್ಲೆ ಹಾಸನ ತಾಲ್ಲೂಕು, ದುದ್ದ ಹೋಬಳಿ, ಹೆರಗು–ಬೈರಾಪುರ, ದೇವಲಾಪುರ ಮತ್ತು ಕೆಂಚನಹಳ್ಳಿ ಹಾಗೂ ಸುತ್ತಮುತ್ತ ಹಳ್ಳಿಗಳಲ್ಲಿ ದಿನಾಂಕ:22.04.2015ರಂದು ಬಿದ್ದ ಭಾರಿ ಮಳೆಗಾಳಿಯಿಂದ ತೆಂಗಿನ ಮರಗಳು ಬುಡ ಸಮೇತ ಬಿದ್ದು, ರೈತರು ಬೆಳೆದ ಬಾಳೆ ಮತ್ತು ಇತರೆ ಬೆಳೆಗಳು ನಾಶವಾಗಿದ್ದು ರೈತರು ಕಂಗಾಲಾಗಿದ್ದಾರೆ. ರೈತರ ಸ್ಥಿತಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗಿದೆ. ರೈತರ ಹಿತದೃಷ್ಟಿಯಿಂದ ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದು, ಹಾನಿಗೊಳಗಾದ ರೈತರ ಬೆಳೆಗಳಿಗೆ ಹಾಗೂ ಬಿದ್ದು ಹೋಗಿರುವ ತೆಂಗಿನ ಮರಗಳಿಗೆ ಸರ್ಕಾರದಿಂದ ರೈತರಿಗೆ ಬೆಳೆ ನಷ್ಟಕ್ಕೆ ಹಾಗೂ ಹಾನಿಗೊಳಗಾಗಿರುವ ಮನೆಗಳಿಗೆ ಸೂಕ್ತ ಪರಿಹಾರವನ್ನು ನೀಡಿ ರೈತರ ಸಂಕಷ್ಟಕ್ಕೆ ನೆರವಾಗಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ಸದರಿ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಂಡು ನಂತರ ಉತ್ತರ ಕೊಡಲಾಗುತ್ತದೆ.

(ಇ) ವಿಷಯ: ದಲಿತ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿ ವೇತನ ಸಿಗದಿರುವ ಬಗ್ಗೆ

– – –

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಿಂದೊಮ್ಮೆ ಕರ್ನಾಟಕದ ಭಾಗವೇ ಆಗಿದ್ದ ಕಾಸರಗೋಡು ಪ್ರದೇಶದ ಗಡಿನಾಡಿನ ದಲಿತ ವಿದ್ಯಾರ್ಥಿಗಳು ಹಾಗೂ ಜೀವನೋಪಾಯಕ್ಕಾಗಿ ದೂರದ ಊರುಗಳಿಂದ ಬಂದು ಕರಾವಳಿ ಕರ್ನಾಟಕದಲ್ಲಿ ವಾಸ್ತವ್ಯ ಹೂಡಿ ಶಿಕ್ಷಣ ಪಡೆಯುತ್ತಿರುವ ದಲಿತ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿ ವೇತನ ನೀಡುತ್ತಿಲ್ಲ ಹಾಗೂ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಪ್ರವೇಶಕ್ಕೆ ಮೀಸಲಾತಿ ಸೌಲಭ್ಯ ದೊರಕುತ್ತಿಲ್ಲ.

ಆಂಧ್ರಪ್ರದೇಶ ಮೂಲದ ಪರಿಶಿಷ್ಟ ಜಾತಿಗೆ ಒಳಪಟ್ಟ 'ಬುಡಗ' ಜಾತಿಗೆ ಸೇರಿದ ಅನೇಕ ಕುಟುಂಬಗಳು ಮಂಗಳೂರಿನ ಪಡೀಲ್ ಮತ್ತು ನಾಗುರಿ ಹಾಗೂ ಬಂಟ್ವಾಳ ತಾಲ್ಲೂಕಿನ ಮುಡಿಪು ಹಾಗೂ ಬಾಳೆಪುಣಿಯಲ್ಲಿ ವಾಸ ಮಾಡುತ್ತಿದ್ದು, ಈ ಕುಟುಂಬಗಳ ನೂರಾರು ವಿದ್ಯಾರ್ಥಿಗಳು

ಮೀಸಲಾತಿ ಹಾಗೂ ಇತರ ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಅದೇ ರೀತಿ ಗಡಿನಾಡಿನ ಕನ್ನಡದ ವಾತಾವರಣದಲ್ಲಿ ಬದುಕುತ್ತಿದ್ದು ಹಿಂದೊಮ್ಮೆ ಕರ್ನಾಟಕದ ಭಾಗವೇ ಆಗಿದ್ದ ಕಾಸರಗೋಡಿನ ದಲಿತ ವಿದ್ಯಾರ್ಥಿಗಳಿಗೆ ಕೇರಳದ ಪರಿಸರದಲ್ಲಿ ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣ ಪಡೆಯುವುದು ಕಷ್ಟಸಾಧ್ಯವಾಗಿದ್ದು, ಆ ಎಲ್ಲಾ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ಮೇಲೆ ಅವಲಂಬಿತರಾಗಿದ್ದರೂ ದಲಿತ ವಿದ್ಯಾರ್ಥಿಗಳಿಗೆ ಲಭ್ಯವಿರುವ ಮೀಸಲಾತಿ ಮತ್ತು ಇತರ ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಹಲವು ದಶಕಗಳ ಹಿಂದೆ ಉದ್ಯೋಗ ನಿಮಿತ್ತ ಸುಳ್ಯ ತಾಲ್ಲೂಕಿನ ವಿವಿಧೆಡೆ ಬಂದು ನೆಲೆಸಿದ್ದ ತಮಿಳುನಾಡಿನ ಮೂಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಇದೇ ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಸರಕಾರ ಬಗೆಹರಿಸಿರುವ ಹಿನ್ನೆಲೆಯಲ್ಲಿ ಹಾಗೂ ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿರುವ ಈ ಸಂದರ್ಭದಲ್ಲಿ ಗಡಿನಾಡಿನ ಅವಕಾಶ ವಂಚಿತ ದಲಿತ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಂಡು ನಂತರ ಉತ್ತರ ಕೊಡಲಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಹಾಕಿದ ಪ್ಲೇಟ್‌ನ್ನೇ ಮತ್ತೆ ಹಾಕುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ಮಾನ್ಯ ಸಭಾ ನಾಯಕರು ಈ ರೀತಿಯ ಉತ್ತರ ಕೊಟ್ಟರೆ ಹೇಗೆ? ಅವರು ಒಂದೇ ರೀತಿಯಲ್ಲಿ ಹೇಳುತ್ತಿದ್ದಾರೆ.

(12–30 ಗಂಟೆ)

**ಶ್ರೀ ಎಸ್.ಆರ್. ಪಾಟೀಲ್:–** ಈ ವಿಷಯ ಸಮಾಜ ಕಲ್ಯಾಣ ಸಚಿವರಿಗೆ ಸಂಬಂಧಪಟ್ಟಿದೆ. ಇಲ್ಲದಿದ್ದರೆ ನಾನು ಹೇಳುತ್ತಿರಲಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಈ ವಿಷಯ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲ, ನಿಮಗೆ confusion ಆಗಿದೆ.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಷಯ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿದೆ.

(ಈ) ಗ್ರಾಮ ಪಂಚಾಯಿತಿ
ವಿಷಯ: ಸದಸ್ಯರಿಗೆ ಗೌರವ ಧನ
ಕೊಡುವ ಬಗ್ಗೆ.

------

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ:23–04–2015ರ ಗುರುವಾರದ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ "ಗೌರವಾನ್ವಿತ ಸದಸ್ಯರಿಗೆ ಧನವೂ ಇಲ್ಲ, ಕೊಟ್ಟಿದ್ದನ್ನು ವಾಪಸ್ ಕೇಳುತ್ತಿರುವ ಘನ ಸರ್ಕಾರ, ಇಮ್ಮಡಿ ಗೌರವಧನ ಪ್ರಕಟ: ಕೆಲವರಿಗೆ ಇದು ಗೊತ್ತೇ ಇಲ್ಲ" ಎನ್ನುವ ಶಿರೋನಾಮೆಯಲ್ಲಿ ವರದಿಯಾಗಿರುವಂತೆ, ಇನ್ನೊಂದು ತಿಂಗಳಲ್ಲಿ ಗ್ರಾಮ ಪಂಚಾಯ್ತಿಗಳ ಅವಧಿ ಮುಗಿಯುತ್ತಿದೆ. ಆದರೂ ಸದಸ್ಯರಿಗೆ ಗೌರವಧನವೇ ಸಿಕ್ಕಿಲ್ಲ ಅಂದ್ರೆ ನೀವು ನಂಬಲೇಬೇಕು.

ಇನ್ನೂ ವಿಚಿತ್ರವೆಂದರೆ, ಸಿಕ್ಕಿರುವ ಗೌರವಧನವನ್ನೂ ವಾಪಸ್ ಕೇಳುವ ಪ್ರಯತ್ನ ನಡೆದಿದ್ದು, ಇದರಿಂದ ಗೌರವ ಧನದಿಂದಲೇ ಸದಸ್ಯರ ಗೌರವ ಹೋಗುವಂತಾಗಿದೆ. ರಾಜ್ಯ ಸರ್ಕಾರ ಗ್ರಾಮ ಪಂಚಾಯಿತಿ ಸದಸ್ಯರಿಗೆ ಪ್ರತಿ ತಿಂಗಳೂ ಗೌರವಧನ ನೀಡಬೇಕು. ಆದರೆ ಕಳೆದ ಮೂರು ವರ್ಷಗಳಿಂದ ಗೌರವಧನ ಬಿಡುಗಡೆಯೇ ಆಗಿಲ್ಲ. ಮೇ ತಿಂಗಳಿನಲ್ಲಿ ಎಲ್ಲ ಗ್ರಾಮ ಪಂಚಾಯಿತಿಗಳ ಅಧಿಕಾರ ಮುಗಿಯಲಿದೆ. ಇಷ್ಟೊತ್ತಿಗಾಗಲೇ ಸರ್ಕಾರ ಬಾಕಿ ಬಿಡುಗಡೆ ಮಾಡಬೇಕಿತ್ತು. ಆದರೆ ಸರ್ಕಾರ ಆ ಗೋಜಿಗೇ ಹೋಗಿಲ್ಲ. ಈ ಮಧ್ಯೆ ಸದಸ್ಯರ ಗೌರವಧನವನ್ನು ಎರಡು ಪಟ್ಟು ಹೆಚ್ಚು ಮಾಡಿ ಸರ್ಕಾರ ಕಳೆದ ವರ್ಷವೇ ಆದೇಶಿಸಿತ್ತು. ಅದರಂತೆ ಕೆಲವು ಜಿಲ್ಲೆಗಳಲ್ಲಿ ಸದಸ್ಯರಿಗೆ ದುಪ್ಪಟ್ಟು ಗೌರವಧನವನ್ನು ವಿತರಿಸಲಾಗಿದೆ. ಆದರೆ, ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಿ 8 ತಿಂಗಳ ಗೌರವಧನಕ್ಕೆ ಕತ್ತರಿ ಹಾಕಿದೆ. ಅಷ್ಟೇ ಅಲ್ಲ, ಹಾಗೆ ಬಿಡುಗಡೆ ಮಾಡಿರುವ 8 ತಿಂಗಳ ಗೌರವ ಧನ ವಾಪಸ್ ನೀಡುವಂತೆಯೂ ಮಾಡಲಾಗಿದೆ.

ಇಲಾಖೆ ಮಾಡಿದ ಎಡವಟ್ಟು ರಾಜ್ಯದಲ್ಲಿ 5620 ಗ್ರಾಮ ಪಂಚಾಯಿತಿಗಳಿದ್ದು 93,000 ಸದಸ್ಯರಿದ್ದಾರೆ. ಇವರಲ್ಲಿ 5629 ಅಧ್ಯಕ್ಷರು, 5629 ಉಪಾಧ್ಯಕ್ಷರಿದ್ದಾರೆ. ಸದಸ್ಯರಿಗೆ ಗೌರವಧನವಾಗಿ ತಲಾ ರೂ. 250, ಅಧ್ಯಕ್ಷರಿಗೆ ರೂ. 500 ಹಾಗೂ ಉಪಾಧ್ಯಕ್ಷರಿಗೆ ರೂ. 300 ಗಳನ್ನು ನೀಡಲಾಗುತ್ತದೆ. 2014ರ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನವನ್ನು ಇಮ್ಮಡಿಗೊಳಿಸುವುದಾಗಿ ಪ್ರಕಟಿಸಿದ್ದರು. ಆದರೆ, ಬಜೆಟ್‌ನಲ್ಲಿ ಘೋಷಣೆ ಮಾಡಿದರೂ ಆ ಬಗ್ಗೆ ಆದೇಶ ಜಾರಿಯಾಗಿಲ್ಲ. ಇದನ್ನು ವಿಧಾನ ಪರಿಷತ್ ಸದಸ್ಯರಾದ ಕೋಟ ಶ್ರೀನಿವಾಸ

ಪೂಜಾರಿಯವರು ಸರ್ಕಾರಕ್ಕೆ ಪತ್ರ ಬರೆದು ಪ್ರಶ್ನಿಸಿದ್ದರು. ಇದಕ್ಕೆ ನಂತರ 2014ರ ಏಪ್ರಿಲ್ 1 ರಿಂದ ಪೂರ್ವ ಅನ್ವಯವಾಗುವಂತೆ ಸದಸ್ಯರಿಗೆ ಹೆಚ್ಚಳವಾಗಿರುವ ಗೌರವಧನ ನೀಡಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಆದೇಶಿಸಿತು. ಆ ನಂತರ ಜಿಲ್ಲಾ ಪಂಚಾಯಿತಿಗಳು ಎಂದಿನಂತೆ ಬಿಡುಗಡೆ ಮಾಡುವ ಅನುದಾನದ ಜೊತೆಗೆ ಸದಸ್ಯರ ಗೌರವಧನವನ್ನೂ ನೀಡಿದವು. ಇದಾದ ಬಳಿಕ ಇಲಾಖೆ ಮತ್ತೊಂದು ಆದೇಶ ಹೊರಡಿಸಿ ಸದಸ್ಯರು ಹೆಚ್ಚಳವಾದ ಗೌರವಧನವನ್ನು 2015ರ ಜನವರಿ 1 ರಿಂದ ಅನ್ವಯವಾಗುವಂತೆ ನೀಡಬೇಕೆಂದು ತಿಳಿಸಿತು. ಅಂದರೆ 2014ರ ಏಪ್ರಿಲ್‌ನಿಂದ 2015ರ ಜನವರಿ (8 ತಿಂಗಳ)ವರೆಗಿನ ಗೌರವಧನ ನೀಡಿದ್ದ ಜಿಲ್ಲಾ ಪಂಚಾಯಿತಿಗಳು ಗಾಬರಿಗೊಂಡವು. ಹಾಗೆಯೇ ಸ್ವಂತ ನಿರ್ವಹಣಾ ಅನುದಾನದಲ್ಲಿ ಸದಸ್ಯರಿಗೆ ಗೌರವಧನ ನೀಡಿದ್ದ ಗ್ರಾಮ ಪಂಚಾಯಿತಿಗಳು ಏನೂ ಮಾಡಲಾಗದೆ ಪೇಚ್ಚಾದವು. ಹಾಗಾಗಿ ಗ್ರಾಮ ಪಂಚಾಯಿತಿಗಳು ಸದಸ್ಯರ ಗೌರವಧನ ಮಂಜೂರು ಮಾಡುವ ವಿಚಾರವಾಗಿ ಈ ವಿಷಯವನ್ನು ನಿಯಮ 330ಎ ಅಡಿಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಇದು ಎರಡು ಪ್ರಮುಖ ದಿನ ಪತ್ರಿಕೆಯಲ್ಲಿ ವರದಿಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಹೆಚ್ಚು ಒತ್ತು ಕೊಟ್ಟು ಮಹತ್ತರವಾದಂತಹ ಕ್ರಾಂತಿಕಾರಿಯಾದಂತಹ ತಿದ್ದುಪಡಿಯನ್ನು ತರುವುದರ ಜೊತೆಗೆ ಗೌರವಧನವನ್ನು ಹೆಚ್ಚು ಮಾಡಿ ಬಹುತೇಕವಾಗಿ ಅವರ ಗೌರವವನ್ನು ಹೆಚ್ಚಿಸುವಂತಹ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಗೌರವ ಹೆಚ್ಚಿಸುವಂತಹ ಕೆಲಸವನ್ನು ಯಾವುದಾದರು ಸರ್ಕಾರ ಈ ರಾಜ್ಯದಲ್ಲಿ ಮಾಡಿದೆ ಎಂದರೆ ಇವತ್ತಿನ ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಎನ್ನುವುದು ಮಾನ್ಯ ಸದಸ್ಯರ ಗಮನಕ್ಕೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸದನಕ್ಕೆ ಬರುವವರಿದ್ದಾರೆ. ಇವತ್ತೇ ಅವರಿಂದ ಉತ್ತರ ಕೊಡಿಸುತ್ತೇವೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ನನಗೊಂದು ಆಶ್ಚರ್ಯವೇನೆಂದರೆ, ಎಲ್ಲಾ ಆ ಕಡೆಯವರೇ ನಿಯಮ 330(ಎ)ನಲ್ಲಿ ಪ್ರಸ್ತಾವನೆಗಳನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:–** ನೀವು ಕೊಟ್ಟಿದ್ದರೆ ನಿಮಗೂ ಅವಕಾಶ ಕೊಡುತ್ತಿದ್ದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ತಾವು ಶೂನ್ಯ ವೇಳೆ ತೆಗೆದುಕೊಳ್ಳುತ್ತೀರೆಂದು ನಮಗೆ ವಿಷಯವೇ ಗೊತ್ತಿಲ್ಲ. ನಮಗೂ ಸಾಕಷ್ಟು ವಿಷಯಗಳಿತ್ತು. ಆದರೆ ಈಗ ಎಲ್ಲಾ ಆ ಕಡೆಯವರೇ ಕೇಳುತ್ತಿದ್ದಾರಲ್ಲಾ, ಇದು ಯಾವ ನ್ಯಾಯ?

**ಸಭಾಪತಿಯವರು:–** ಮೋಟಮ್ಮನವರೇ, ಕೆಲವು ಸಲ ನಮಗೆ ಗೊತ್ತಿಲ್ಲದೆಯೇ ನಾವು ನಗೆಪಾಟಲಿಗೆ ಒಳಗಾಗಿಬಿಡುತ್ತೇವೆ. ದಯಮಾಡಿ ನಿಯಮಾವಳಿ ಪುಸ್ತಕವನ್ನು ಓದಿ. ಅವರು ನಿಯಮಾವಳಿ ಪುಸ್ತಕವನ್ನು ಓದಿದ್ದಾರೆ, ಕೊಟ್ಟಿದ್ದಾರೆ. ಓದಿಲ್ಲದಿರುವವರು ಕೊಟ್ಟಿಲ್ಲ. ಅದನ್ನು ನಾನು ಹೇಳಬಾರದು.

**ಶ್ರೀಮತಿ ಮೋಟಮ್ಮ:–** ಹಾಗಾದರೆ ಇಲ್ಲಿರುವವರು ಯಾರು ಓದಿಲ್ಲವೆ?

**ಸಭಾಪತಿಯವರು:–** ಯಾರು ಕೊಟ್ಟಿಲ್ಲವಲ್ಲಾ ನಾನೇನು ಮಾಡಲಿ?

**ಶ್ರೀಮತಿ ಮೋಟಮ್ಮ:–** ನಾವು ಓದಿದ್ದೇವೆ. ಇವತ್ತು ಇದೆಯೋ ಇಲ್ಲವೋ ಎನ್ನುವುದು ಯಾರಿಗೆ ಗೊತ್ತು?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಒಂದು ಕೆಲಸ ದಯವಿಟ್ಟು ಮಾಡಿ. ನಿಮ್ಮ ಕಛೇರಿಯಿಂದ ಸಿಬ್ಬಂದಿಗಳನ್ನು ನಿಗದಿಗೊಳಿಸಿ ಅವರ ಮನೆಗಳಿಗೆ ಕಳುಹಿಸಿ ತರಿಸಿಕೊಳ್ಳಿ. ಅವರೇನು ಲೆಟರ್ ಕೊಟ್ಟಿಲ್ಲವಲ್ಲವೆ?

**ಸಭಾಪತಿಯವರು:–** ಯಾರು ಕೊಟ್ಟಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮ್ಮ ಕಛೇರಿಯಿಂದ ಅವರ ಮನೆಗಳಿಗೆ ಕಳುಹಿಸಿ ದಯವಿಟ್ಟು ತರಿಸಿಕೊಂಡು ಅಜೆಂಡಾದಲ್ಲಿ ಸೇರಿಸಿ.

**ಶ್ರೀಮತಿ ಮೋಟಮ್ಮ:–** ಅಜೆಂಡಾದಲ್ಲಿ ಸೇರಿಸಿದರೆ ಸರಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಲೆಟರ್ ಕೊಡದಿದ್ದರೆ ಮಾನ್ಯ ಸಭಾಪತಿಗಳು ಏನು ಮಾಡುತ್ತಾರೆ?

**ಶ್ರೀಮತಿ ಮೋಟಮ್ಮ:–** ನೀವು ಮಾತ್ರ ನಿಯಮಾವಳಿಗಳ ಪುಸ್ತಕ ಓದುತ್ತೀರಿ, ಉಳಿದವರು ಓದುವುದಿಲ್ಲವೆಂದು ಅರ್ಥವೆ? ಎಲ್ಲರೂ ಓದುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಯಾರು ಕೊಟ್ಟಿದ್ದಾರೆ ಅವರದ್ದು ಬಂದಿದೆ. ನೀವು ಕೊಟ್ಟೇ ಇಲ್ಲವೆಂದ ಮೇಲೆ ಅವರು ಏನು ಮಾಡಬೇಕು?

**ಶ್ರೀಮತಿ ಮೋಟಮ್ಮ:–** ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬ ಮಾಹಿತಿ ಇರಬೇಕಲ್ಲವೆ? ನಾವು ಬಲವಂತ ಮಾಡುವುದಕ್ಕಾಗುವುದಿಲ್ಲವಲ್ಲಾ?

**ಸಭಾಪತಿಯವರು:–** ನಿಯಮಾವಳಿ ಪುಸ್ತಕದಲ್ಲಿ 330(ಎ)ನಲ್ಲಿ ಇದೆ. ಮೊನ್ನೆ ದಿನ ಇದೇ ರೀತಿ ಅವಕಾಶ ಕೊಟ್ಟಾಗ ನಿಮ್ಮ ಹಾಗೆ ನಾರಾಯಣಸ್ವಾಮಿಯವರು by his ignorance, ಪುಸ್ತಕ ಓದದೆ Chair ಮೇಲೆ observation ಮಾಡಿದರು. ಆಗ ನಾನು ಕೋಪ ಮಾಡಿಕೊಂಡೆ. ಇವತ್ತು ಅವರು ಓದಿಕೊಂಡು ಬಂದಿದ್ದಾರೆ, 330(ಎ) ಪ್ರಕಾರ ಕೊಡುತ್ತಿದ್ದಾರೆ. ಅಂದರೆ, ಅವರು ತಮ್ಮ ತಪ್ಪನ್ನು ತಿದ್ದುಕೊಂಡಿದ್ದಾರೆ. ಅವತ್ತು ಅವರು ತಪ್ಪು ಮಾಡಿದ್ದರು, ಅವರು ತಮ್ಮ ತಪ್ಪನ್ನು ಇವತ್ತು ತಿದ್ದುಕೊಳ್ಳುತ್ತಿದ್ದಾರೆ. ಅವರು ಸಹ ಅವತ್ತು ಮಾತನಾಡಬಾರದಾಗಿತ್ತು. ಅವರು ಆ ರೀತಿ ಮಾತನಾಡಿರುವುದು ಸರಿಯಲ್ಲ. ಈಗ ಇವರು ತಿದ್ದುಕೊಳ್ಳಬೇಕು.

**ಶ್ರೀ ಎಚ್.ಎಂ. ರೇವಣ್ಣ:–** ನಾರಾಯಣಸ್ವಾಮಿಯವರಿಗೆ ಇವತ್ತು appreciation. ದಾರಿ ತಪ್ಪಿದ ಮಗ ದಾರಿಗೆ ಬಂದಂತಾಯಿತು.

**(ಉ) ವಿಷಯ: ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜ್, ದಾವಣಗೆರೆ ಇಲ್ಲಿನ ಕಾಲೇಜ್ ಸಿಬ್ಬಂದಿಗಳಿಗೆ ವೇತನ ಬಿಡುಗಡೆಯಾಗದಿರುವ ಬಗ್ಗೆ.**

-----

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ, ಈ ಕಾಲೇಜಿನ ಸಿಬ್ಬಂದಿಗಳಿಗೆ ಒಂದು ತಿಂಗಳಿನಿಂದ ವೇತನ ಬಿಡುಗಡೆ ಆಗದಿರುವುದು ಸರಿಯಷ್ಟೆ. ಇದಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ದುರಾಡಳಿತ, ಅಸಮರ್ಪಕ ಲೆಕ್ಕ ನಿರ್ವಹಣೆ, ಆಧಾರರಹಿತ ಖರ್ಚು ವೆಚ್ಚಗಳು ಮತ್ತು ಅಸಮರ್ಪಕ ವ್ಯವಸ್ಥೆಗಳಿಂದಾಗಿ ಕೇಂದ್ರ ಸರ್ಕಾರದ ಆದಾಯ ತೆರಿಗೆ ಅಧಿಕಾರಿಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವುದು ಹಾಗೂ ಮುಟ್ಟುಗೋಲು ಹಾಕಿಕೊಂಡಿರುವುದು ನಾಚಿಕೆಗೇಡಿನ ಸಂಗತಿ. ಇದು ವಿಶ್ವವಿದ್ಯಾಲಯದ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿ. ಇದರಿಂದ ಇಡೀ ವಿಶ್ವವಿದ್ಯಾಲಯದ ಆಡಳಿತಯಂತ್ರ ಸ್ಥಗಿತಗೊಂಡಿದೆ ಹಾಗೂ ನಿಂತು ಹೋಗಿದೆ. ಇದರಿಂದ ವಿಶ್ವವಿದ್ಯಾಲಯದ ಮಾನ–ಮರ್ಯಾದೆ ಬೀದಿಯಲ್ಲಿ ಹರಾಜಾಗಿದೆ. ಇದರ ಪ್ರಯುಕ್ತ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ, ಇಲ್ಲಿನ ಪ್ರಾಂಶುಪಾಲರು ಸೇರಿದಂತೆ ಯಾವುದೇ ಸಿಬ್ಬಂದಿಗೆ ವೇತನ ಬಟವಾಡೆ ಆಗಿರುವುದಿಲ್ಲ. ಇದರ ವಿರುದ್ಧ ಬೋಧಕ ಹಾಗೂ

ಬೋಧಕೇತರ ಸಿಬ್ಬಂದಿ ಒಂದು ವಾರದಿಂದ ಕಪ್ಪುಪಟ್ಟಿ ಧರಿಸಿ ಕೆಲಸ ನಿರ್ವಹಿಸುತ್ತಿರುವುದು ಹಾಗೂ ವಿಶ್ವವಿದ್ಯಾಲಯದ ಕಾರ್ಯವೈಖರಿ ವಿರುದ್ಧ ಪ್ರತಿಭಟಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ.

ಆದ್ದರಿಂದ ಈ ರಾಜ್ಯದ ಪ್ರತಿಷ್ಠಿತ ಹಾಗೂ ವಿಶ್ವೇಶ್ವರಯ್ಯನವರಂತಹ ಮಹಾನ್ ವ್ಯಕ್ತಿಯ ಹೆಸರನ್ನು ಇಟ್ಟುಕೊಂಡಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾನ ಇವತ್ತು ಹರಾಜಾಗುತ್ತಿರುವುದಕ್ಕೆ, ಆಡಳಿತ ಯಂತ್ರ ಕುಸಿದಿರುವುದಕ್ಕೆ ಮತ್ತು ವಿಶ್ವವಿದ್ಯಾಲಯ ರಿಪೇರಿ ಮಾಡಲಾಗದಷ್ಟು ಅಧೋಗತಿಗೆ ಇಳಿದಿರುವುದಕ್ಕೆ ನೇರವಾಗಿ ಜವಾಬ್ದಾರಿಯನ್ನು ವಿಶ್ವವಿದ್ಯಾಲಯದ ಕುಲಪತಿ, ರಿಜಿಸ್ಟ್ರಾರ್, ವಿತ್ತಾಧಿಕಾರಿಗಳು ಹೊರಬೇಕಾಗಿರುತ್ತದೆ. ಆದ್ದರಿಂದ ಇಷ್ಟೆಲ್ಲಾ ಅನಾಹುತಗಳಿಗೆ ಕಾರಣರಾದ ಈ ಮೂರು ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇನೆ ಹಾಗೂ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ ಕಾಲೇಜಿನ ಸಿಬ್ಬಂದಿಗಳಿಗೆ ಶೀಘ್ರವೇ ವೇತನ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಇವತ್ತು ಸದನಕ್ಕೆ ಬಂದರೆ ಇವತ್ತೇ ಉತ್ತರ ಕೊಡಿಸುತ್ತೇನೆ. ಒಟ್ಟಾರೆ ಉತ್ತರ ಕೊಡಿಸುತ್ತೇನೆ.

**(ಊ) ವಿಷಯ: ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭೆ ಕ್ಷೇತ್ರದ ಗೋಪಾಡಿ ಗ್ರಾಮದಲ್ಲಿ ಶ್ರೀಮತಿ ಇಂದಿರಾ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿರುವ ಕುರಿತು.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ನಾನು ಸದನದಲ್ಲಿ ಉಲ್ಲೇಖ ಮಾಡುತ್ತಿರುವ ವಿಚಾರ ಅತ್ಯಂತ ಗಂಭೀರವಾದದ್ದು ಮತ್ತು ನಿಜಕ್ಕೂ ಮನ ಕಲಕುವಂಥದ್ದು. ಈಗಾಗಲೇ ಮಾಧ್ಯಮದಲ್ಲಿ ಬಿತ್ತರಗೊಂಡಂತೆ, ಉಡುಪಿ ಜಿಲ್ಲೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಕಡಲ ಕಿನಾರೆ ಅಂಚಿನಲ್ಲಿ ಹಾದು ಹೋಗುವ ಗೋಪಾಡಿ ಗ್ರಾಮದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ಬದುಕಿ ಬಾಳುವ ಆನಂದ ಮೊಗವೀರರವರ ಪತ್ನಿ ಶ್ರೀಮತಿ ಇಂದಿರಾ ರವರು ಮನೆಯಲ್ಲಿ ಒಬ್ಬಂಟಿಯಾಗಿರುವಾಗ ಇದೇ ತಿಂಗಳು ದಿನಾಂಕ 11ನೇ ತಾರೀಖು ನಡುಹಗಲು ಮನೆಗೆ ನುಗ್ಗಿದ ವ್ಯಕ್ತಿಯೊಬ್ಬ ಕೊಟ್ಟಿಗೆಯಲ್ಲಿ ಕಟ್ಟಿಗೆಯನ್ನು ಕೂಡಿಡುತ್ತಿದ್ದ 30ರ ಹರೆಯದ ಇಂದಿರಾಳ ಮೇಲೆ ದೌರ್ಜನ್ಯವನ್ನು ಎಸಗಿ ಆಕೆಯನ್ನು ಅತ್ಯಾಚಾರಕ್ಕೆ ಒಳಪಡಿಸಿ ಅವಳ ತಲೆಗೆ ಕಲ್ಲಿನಿಂದ ಜಜ್ಜಿ ಕ್ರೂರವಾಗಿ ಹತ್ಯೆ ಮಾಡಿದ್ದು, ಇಡೀ ಕರಾವಳಿ ಜಿಲ್ಲೆಯನ್ನು ನಡುಗಿಸಿದೆ.

ಮುಗ್ಧ ಇಂದಿರಾಳ ಅಕ್ಕ ಗಿರಿಜಾ ಪಕ್ಕದಲ್ಲಿ ತರಗೆಲೆಯನ್ನು ತರಲು ಹೋಗಿರುವುದನ್ನು ಗಮನಿಸಿ ಆರೋಪಿ ಹೊಂಚು ಹಾಕಿ ಈ ಘೋರ ಕೃತ್ಯವನ್ನು ಎಸಗಿದ್ದಾನೆ. ಘಟನೆ ನಡೆದ ಸಮಯ ಇಂದಿರಾಳ ಪತಿ ಆನಂದ ಮೊಗವೀರ ದೂರದ ಮಲ್ಪೆಯಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ನಿರತರಾಗಿದ್ದರು, ಇಂದಿರಾ ದೌರ್ಜನ್ಯಕ್ಕೆ ಒಳಗಾಗಿ ಸಾವನ್ನಪ್ಪಿದಾಗ 7 ತಿಂಗಳ ತುಂಬು ಗರ್ಭಿಣಿಯಾಗಿದ್ದಳು ಎಂಬುವುದು ಎಂಥವರ ಕಲ್ಲು ಎದೆಯನ್ನು ಬೆಚ್ಚಿಬೀಳಿಸುತ್ತದೆ. ಮನೆಯಲ್ಲಿ ಏಕಾಂಗಿಯಾಗಿದ್ದಾಗ ದೌರ್ಜನ್ಯಕ್ಕೆ ಒಳಗಾದ ಇಂದಿರಾಳ ಕ್ರೂರ ಸಾವಿಗೆ ನೈಜ ಸಾಕ್ಷಿಯಾಗಿ ಇಂದಿರಾಳ 2 ವರ್ಷದ ಗಂಡು ಮಗು ಕಂಡು ಬರುತ್ತದೆ.

ಈ ಘಟನೆಯನ್ನು ಭೇದಿಸುವಲ್ಲಿ ಉಡುಪಿ ಪೊಲೀಸ್ ಇಲಾಖೆ ಸಫಲವಾಗಿದೆ, ಅತೀ ಚಾಣಾಕ್ಷತನದಿಂದ ತನಿಖೆಯನ್ನು ನಡೆಸಿ ಪೊಲೀಸರು ಆರೋಪಿಯನ್ನು ಬಂಧಿಸಿರುತ್ತಾರೆ. ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಪಡಿಸುವುದೇನೆಂದರೆ ಈ ಘಟನೆಯಿಂದ ಕರಾವಳಿ ಜಿಲ್ಲೆಯ ಸುಸಂಸ್ಕೃತ ಜನರು ಬೆಚ್ಚಿ ಬಿದ್ದಿದ್ದಾರೆ. ಮಹಿಳೆಯರಂತು ಒಬ್ಬಂಟಿಯಾಗಿ ಮನೆಯಲ್ಲಿ ಇರುವುದು ಕಷ್ಟ ಎಂಬಂತೆ ಆಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಮೀನುಗಾರಿಕೆ ವೃತ್ತಿಯಿಂದಲೇ ಜೀವನ ನಡೆಸುವ ಆನಂದ ಮೊಗವೀರ ಕುಟುಂಬ ಮುಂದಿನ ಬದುಕುವ ಆಸೆ ಕಳೆದುಕೊಂಡು ಸಂಕಷ್ಟದಲ್ಲಿದೆ. ಇಂದಿರಾಳ ಎಳೆಯ ಮಗುವಿನ ಭವಿಷ್ಯವೂ ಸೇರಿದಂತೆ ಆನಂದ ಮೊಗವೀರ ಕುಟುಂಬಕ್ಕೆ ಸರ್ಕಾರ ಮಾನಸಿಕ ಮತ್ತು ಆರ್ಥಿಕ ಶಕ್ತಿಯನ್ನು ತುಂಬಬೇಕೆಂದು ಕೋರುತ್ತೇನೆ.

ನಾನು ಸದನದಲ್ಲಿ ಉಪಸ್ಥಿತರಿರುವ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳಿಗೆ ಆಗ್ರಹಪಡಿಸುವುದೇನೆಂದರೆ, ಸರ್ಕಾರ ಸಮಗ್ರ ತನಿಖೆಯನ್ನು ಮಾಡುವುದರೊಂದಿಗೆ ಸಂತ್ರಸ್ಥ ಕುಟುಂಬಕ್ಕೆ ಕನಿಷ್ಟ ಐದು ಲಕ್ಷ ರೂಪಾಯಿಗಳ ಪರಿಹಾರ ಘೋಷಿಸಬೇಕಾಗಿ ಈ ಮೂಲಕ ಆಗ್ರಹಪಡಿಸುತ್ತೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಹೇಳಬೇಕು. ಏಕೆಂದರೆ, ಇದೊಂದು ಮೀನುಗಾರಿಕೆ ಕುಟುಂಬ. ತುಂಬಾ ಸಂಕಷ್ಟದಲ್ಲಿದ್ದಾರೆ. ಇಡೀ ಜಿಲ್ಲೆ ದಿಗ್ಭ್ರಾಂತವಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಂದರೆ ಒಳ್ಳೆಯದು.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ವರದಿಯನ್ನು ತರಿಸಿಕೊಂಡು ಗೃಹ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಉತ್ತರದ ಜೊತೆಯಲ್ಲಿ ಪರಿಹಾರವನ್ನು ಕೊಡುತ್ತೇವೆಂದು ಹೇಳಿಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ಉತ್ತರದಲ್ಲಿ ಎಲ್ಲಾ ವಿವರವಾಗಿ ಹೇಳುತ್ತಾರೆ. ನಿಮ್ಮದೇನು ಬೇಡಿಕೆ ಇದೆ ಅದೆಲ್ಲಾ ಪರಾಮರ್ಶಿಸಿ ಸರಿಯಾದ, ಸೂಕ್ತವಾದ ಉತ್ತರವನ್ನು ಗೃಹ ಸಚಿವರಿಂದ ಕೊಡಿಸುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆ ಇದೇ ರೀತಿ ಮುಂದುವರೆಯುತ್ತದೆಯೇ? ನೀವು ಮಾಡಿರುವ ನಿಯಮ. 330(ಎ) ಅಡಿಯಲ್ಲಿ ಒಂದು ದಿವಸಕ್ಕೆ ಕೇವಲ ಮೂರು ವಿಷಯಗಳನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ತಾವೇ ಹೇಳಿದ್ದೀರಿ.

**ಸಭಾಪತಿಯವರು:–** ಅದಕ್ಕೂ ಉತ್ತರ ಹೇಳುತ್ತೇನೆ, ಕುಳಿತುಕೊಳ್ಳಿ. ನಿಯಮ 330(ಎ) ಅಡಿಯಲ್ಲಿ ಮೂರಕ್ಕೆ ಮೀರದಂತೆ ಎಂದು ಇದೆ. ಆದರೆ ಸಭಾಪತಿಗಳಿಗೆ ಒಂದು ವಿಶೇಷ ಅಧಿಕಾರ ಇದೆ. ಕೆಲವು ಸಂದರ್ಭಗಳಲ್ಲಿ ವಿಷಯದ ಗಾಂಭೀರ್ಯದ ಆಧಾರದ ಮೇಲೆ ಅವರಿಗೆ ಅವಕಾಶ ಕೊಡುವ ಅಧಿಕಾರ ಇದೆ. ಅದರ ಮೂಲಕ ನಾನು ಇವತ್ತು ಮೂರು ಜನರ ಬದಲು ಏಳು ಜನಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, 25 ಜನರಿಗೂ ಅವಕಾಶ ಕೊಡಿ. ಆದರೆ ಸರ್ಕಾರದಿಂದ ಅದಕ್ಕೆ ಸಮಂಜಸ ಉತ್ತರ ಇಲ್ಲ.

**ಸಭಾಪತಿಯವರು:–** ಕೊಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಿ. ರಾಮಕೃಷ್ಣ:–** ಅದೊಂದು ಪದ ಹೇಳುತ್ತಾರೆ ಅಷ್ಟೆ.

**(ಋ) ವಿಷಯ: ಹಿಂದಿ ಭಾಷಾ ಶಿಕ್ಷಕರು ಮೌಲ್ಯಮಾಪನ ಬಹಿಷ್ಕಾರ ಹಾಕಿರುವ ಕುರಿತು.**

-----

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬೆಳಗಾವಿಯಲ್ಲಿ ನಡೆಯುತ್ತಿರುವ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರದಲ್ಲಿ ಹಿಂದಿ ಭಾಷೆ ಶಿಕ್ಷಕರು ಹೋರಾಟವನ್ನು ಮಾಡುತ್ತಿದ್ದು ಶಿಕ್ಷಣ ಸಂಯೋಜಕ ಹುದ್ದೆಗೆ ಪರಿಗಣಿಸಿ ಶಿಕ್ಷಕರ ಬಡ್ತಿ ನೇಮಕಾತಿ ಅವಕಾಶ ಕಲ್ಪಿಸಿ ಎಂದು ಮೌಲ್ಯಮಾಪನ ಬಹಿಷ್ಕಾರ ಮಾಡಿದ್ದಾರೆಂದು ವರದಿಯಾಗಿದೆ. ಈ ಕುರಿತು ಶಿಕ್ಷಕರ ಬೇಡಿಕೆ ಈಡೇರಿಸಲು ಸರ್ಕಾರದ ಗಮನ ಸೆಳೆಯಲು ಬಯಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಪೂರ್ಣ ಮಾಹಿತಿಯನ್ನು ತರಿಸಿಕೊಂಡು ಉತ್ತರ ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಸಚಿವರು ಇದ್ದಾರೆ. ಅವರು ಉತ್ತರ ಹೇಳಬಹುದಲ್ಲವೆ?

**ಸಭಾಪತಿಯವರು:–** ಮಾಹಿತಿಯನ್ನು ತರಿಸಿಕೊಂಡು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಆದಾಗ ಮಾಹಿತಿ ಏನು ತರಿಸಿಕೊಳ್ಳುತ್ತಾರೆ? ಇಷ್ಟೆಲ್ಲಾ ನಡೆಯುತ್ತಿದೆ, ಪತ್ರಿಕೆಯಲ್ಲಿ ಬಂದಿದೆ ಮತ್ತು ಮಂತ್ರಿಗಳು ಸದನದಲ್ಲಿದ್ದಾರೆ. ಉತ್ತರ ಹೇಳುವುದಕ್ಕೆ ಏನು ತೊಂದರೆ? ಮಾಹಿತಿ ಏನು ತರಿಸಿಕೊಳ್ಳುತ್ತಾರೆ?

**ಶ್ರೀ ಕಿಮ್ಮನೆ ರತ್ನಾಕರ:–** ಪೂರ್ಣ ಮಾಹಿತಿ ಇಲ್ಲದೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಮೊನ್ನೆಯ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ನಾಳೆ ಕೊಡುತ್ತೇವೆಂದು ಹೇಳಿದ್ದರು.

**ಸಭಾಪತಿಯವರು:–** ಈಗ ಮೊನ್ನೆ ವಿಧೇಯಕದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮಾನ್ಯ ಸೋಮಣ್ಣನವರು ಮಾತನಾಡುತ್ತಿದ್ದರು. ನಾನು ಮಾನ್ಯ ಸೋಮಣ್ಣನವರು ಮಾತನಾಡುತ್ತಿರುವಾಗ ಮಧ್ಯದಲ್ಲಿ ನಿಮಗೆ ಇನ್ನು ಎಷ್ಟು ಸಮಯ ಬೇಕು ಎಂದೆ ಅವರು ಸ್ವಲ್ಪ ಸಮಯ ಹೇಳಿದರು. ಈಗ ಸೋಮಣ್ಣನವರು ಎಲ್ಲಿಗೆ ನಿಲ್ಲಿಸಿದ್ದರು ಅಲ್ಲಿಂದ ಅವರು ಚರ್ಚೆಯನ್ನು ಮುಂದುವರೆಸುತ್ತಾರೆ. ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ಯಾರ್ಯಾರು ಈ ವಿಧೇಯಕದ ಬಗ್ಗೆ ಮಾತನಾಡಬೇಕೆಂದು ಈಗಾಗಲೇ ಪಟ್ಟಿ ಮೂರು ಪಕ್ಷಗಳಿಂದ ನನಗೆ ಬಂದಿದೆ. ಆ ಪಟ್ಟಿಗಳ ಮೂಲಕ ನಾನು ಅವಕಾಶ ಕೊಡುತ್ತಾ ಹೋಗುತ್ತೇನೆ. ಆದರೆ ಸಮಯ ಮಿತಿಯಿಲ್ಲದಂತೆ ಕೊಡುವುದಕ್ಕೆ ಕಷ್ಟ. ತಾವೇ ನಿರ್ಣಯ ಮಾಡಿಕೊಂಡು ನಾನು ಮಧ್ಯ ಬಾಯಿ ಹಾಕಿ ಸಮಯ ಜಾಸ್ತಿ ಆಯಿತು ಎಂದು ಹೇಳುವುದರ ಬದಲು 10–12 ನಿಮಿಷದೊಳಗೆ ಒಬ್ಬೊಬ್ಬರು ಮುಗಿಸಿದರೆ ಹೆಚ್ಚಿಗೆ ಎಲ್ಲರಿಗೂ ಅವಕಾಶ ಸಿಗುತ್ತದೆ. ನಾನು ನಿಮಗೆ ಬಿಡುತ್ತೇನೆ. ಈಗ ಸೋಮಣ್ಣನವರೇ, ತಾವು ಪ್ರಾರಂಭ ಮಾಡಿ.

## 2. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಮತ್ತು

## ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ

## ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2015–(ಮುಂದುವರೆದ ಚರ್ಚೆ)

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊನ್ನೆ ನಡೆದಂತಹ ವಿಧೇಯಕದ ಮೇಲಿನ ಚರ್ಚೆಯಲ್ಲಿ ತಾವು ನನಗೆ ಇನ್ನು ಎಷ್ಟು ಸಮಯ ಬೇಕು ಎಂದು ಕೇಳಿದಿರಿ. ನಾನು ಈಗ ತಾನೇ ಪ್ರಾರಂಭ ಮಾಡಿದ್ದೇನೆ ಎನ್ನುವ ಮಾತನ್ನು ಕೂಡ ಹೇಳಿದೆ. ಆವತ್ತು ನಾನು ಮಾತನಾಡುವಾಗ ತಾವು ಇರಲಿಲ್ಲ. ತಾವು ಇರುವುದರಿಂದ ನಾನು ವಿಧೇಯಕ ಎಷ್ಟರಮಟ್ಟಿಗೆ ಎನ್ನುವುದಕ್ಕಿಂತ ಹೆಚ್ಚಾಗಿ ಇದೊಂದು ಸೂಕ್ಷ್ಮವಾದ ವಿಚಾರ, ಆ ಸೂಕ್ಷ್ಮತೆಗೆ ಮತ್ತೊಂದು ಹೆಸರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಸುಮಾರು ಒಂದು ಕೋಟಿಗೂ ಮೇಲ್ಪಟ್ಟು ಜನ ವಾಸ ಮಾಡತಕ್ಕಂಥ ಈ ನಗರದಲ್ಲಿ ಇಡೀ ವಿಶ್ವದ ಜನ ಇಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಕಳೆದ ಸಲ ನಾನು ಉಲ್ಲೇಖ ಮಾಡಿದ್ದೇನೆ. ಅದರ ಬಗ್ಗೆ ನಾನು ಪದೇಪದೇ ಅದನ್ನೇ ತೆಗೆದುಕೊಂಡು ಮಾತನಾಡತಕ್ಕಂಥ ಜಾಯಮಾನವೂ ಕೂಡ ನನ್ನದಲ್ಲ. ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಸನ್ಮಾನ್ಯ ಕಾನೂನು ಸಚಿವರು, ಸನ್ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಉಳ್ಳವರಾಗಿ ಈ ರಾಷ್ಟ್ರದ ನಗರವನ್ನು ಯಾವ ರೀತಿ ಬೆಳವಣಿಗೆ ಮಾಡಬೇಕೆನ್ನುವ ದೃಷ್ಟಿಯನ್ನು ಒಂದು ಕಡೆ ಹಾಯಿಸಿದರೆ ಮತ್ತೊಂದು ಕಡೆ ಈ ನಗರವನ್ನು ಮೂರು ಹೋಳಾಗಿ ಮಾಡಿ ನಗರದ ಜನರ ಜೀವನದಲ್ಲಿ ಪ್ರಾಯಶಃ ಒಂದು ಶಾಪಗ್ರಸ್ಥ ನಗರ ಎಂದು ಹೇಳುವುದಕ್ಕೆ ಅಡಿಪಾಯವನ್ನು ಹಾಕತಕ್ಕಂಥ ಕಾಯ್ದೆಯನ್ನು ಇವತ್ತು ನಮ್ಮ ಮುಂದೆ ತಂದಿದ್ದಾರೆ. ಮುಖ್ಯಮಂತ್ರಿಗಳು ನಿನ್ನೆ ಮೈಸೂರಿನಲ್ಲಿ ತಮ್ಮ ಕಾರ್ಯಕ್ರಮದ ಮಧ್ಯದಲ್ಲಿ 198 ವಾರ್ಡ್‌ಗಳಿದ್ದರೂ ಕೂಡ ಒಂದೊಂದು ಕಡೆ ಒಂದೊಂದು ಜನಸಂಖ್ಯೆ ಇದೆ. ಅದನ್ನು ಸರಿಯಾದ ಮಾನದಂಡದಲ್ಲಿ ಮಾಡಿಲ್ಲ. ಆದ್ದರಿಂದ ನಾವು ಇದನ್ನು ಸರಿ ಮಾಡಬೇಕಾಗಿದೆ, ಈ ರೀತಿ ಸರಿ ಮಾಡುವಾಗ 90,000 ಮತದಾರರಿರುವ ಜನಸಂಖ್ಯೆ ಒಂದು ಕಡೆಯಾದರೆ 20–30 ಸಾವಿರ ಜನಸಂಖ್ಯೆ ಇರುವುದು ಮತ್ತೊಂದು ಕಡೆ ಎನ್ನುವ ಮಾತನ್ನು ಕೆಲವು ವಿಚಾರಗಳನ್ನು ಸಾರ್ವಜನಿಕವಾಗಿ ಜನರ ಭಾವನೆಗೆ ತಂದಿದ್ದಾರೆ. ನಾನು ಅದನ್ನು ಪೂರ್ತಿಯಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಾವು 2006 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮಾಡಬೇಕೆಂದು ಹೊರಟಾಗ 2001ರ ಜನಗಣತಿಯನ್ನು ಪರಿಗಣನೆಗೆ ತೆಗೆದುಕೊಂಡು ಅದನ್ನು

ಮಾಡುವಾಗ ನಮ್ಮ ಬೆಂಗಳೂರಿಗೆ ಬ್ಯಾಟರಾಯನಪುರ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ಟಿ. ದಾಸರಹಳ್ಳಿ, ರಾಜರಾಜೇಶ್ವರಿ ನಗರ, ಕೆ.ಆರ್. ಪುರ, ಈ ಏಳು ಸಿ.ಎಂ.ಸಿ.ಗಳು, ಮತ್ತು ಕೆಂಗೇರಿ, ಒಂದು ಟಿ.ಎಂ.ಸಿ. ಸೇರಿಸಲಾಯಿತು. ಅದರ ಒಟ್ಟು ವಿಸ್ತೀರ್ಣ ಅಂದು ಇದರಲ್ಲಿದ್ದಂತಹ 2001ರ ಜನಗಣತಿಯ ಪ್ರಕಾರ ಸುಮಾರು 355 ಚದರ ಕಿಲೋಮೀಟರ್‌ನಲ್ಲಿ ವಾಸ ಮಾಡುತ್ತಿದ್ದಂತಹ ಜನಸಂಖ್ಯೆ 11,47,283. ಹಿಂದೆ ಇದ್ದಂತಹ ನಗರಸಭೆ ವ್ಯಾಪ್ತಿಯಲ್ಲಿದ್ದಂಥದ್ದು ಸುಮಾರು 225 ಚದರ ಕಿಲೋಮೀಟರ್‌ನಲ್ಲಿ ಇದ್ದಂತಹ ಜನಸಂಖ್ಯೆ ಪ್ರಾಯಶಃ 41,43,366. ಒಟ್ಟು 7 ಸಿ.ಎಂ.ಸಿ.ಗಳು, ಒಂದು ಟಿ.ಎಂ.ಸಿ. ಮತ್ತು ಮಹಾನಗರ ಪಾಲಿಕೆ, ಅದರ ಜೊತೆಯಲ್ಲಿ ಅಕ್ಕಪಕ್ಕದ ಸುಮಾರು 110 ಹಳ್ಳಿಗಳು. ಇಷ್ಟನ್ನು ಸೇರಿಸಿಕೊಂಡು 800 ಚದರ ಕಿಲೋಮೀಟರ್‌ನ್ನು ಮಾಡಿ ಅವತ್ತು ನಾವು 52,90,649 ಜನಸಂಖ್ಯೆಯನ್ನು ಮಾನದಂಡವಾಗಿ ತೆಗೆದುಕೊಂಡಿರುವಂಥದ್ದು. ಇದನ್ನು ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಜಯಚಂದ್ರರವರೇ, ನಾವು ಅವತ್ತು ಪರಿಗಣನೆ ಮಾಡಿದ್ದು 2007ರಲ್ಲಿ ಇದನ್ನು ಮಾಡಿದ ಮೇಲೆ ಅಧಿಕೃತವಾಗಿ ಘೋಷಣೆ ಮಾಡಿದ ಮೇಲೆ 2010 ರಲ್ಲಿ ಇದನ್ನು ಬೃಹತ್ ಮಹಾನಗರ ಪಾಲಿಕೆಯನ್ನಾಗಿ ಮಾಡಬೇಕೆಂದು ಹೊರಟಾಗ 192 ವಿಭಾಗಗಳನ್ನು ಮಾಡಿ ಹಿಂದೆ ಇದ್ದಂತಹ 100 ವಾರ್ಡ್‌ಗಳು 1996 ರಲ್ಲಿ ಅಂದಿನ ನಮ್ಮ ಸರ್ಕಾರ ಸನ್ಮಾನ್ಯ ಜೆ.ಎಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ಸನ್ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದರು. ಅವತ್ತು ನಾನು ಕೂಡ ಸಚಿವನಾಗಿದ್ದೆ. ಆಗ 100 ವಾರ್ಡ್‌ಗಳ ಜೊತೆಯಲ್ಲಿ ಇನ್ನು 98 ವಾರ್ಡ್‌ಗಳನ್ನು ಜಾಸ್ತಿ ಮಾಡಿ 192 ವಿಭಾಗಗಳನ್ನು ಮಾಡತಕ್ಕಂಥ ರಚನೆಯಲ್ಲಿ ಅವತ್ತು ಆಗಿದ್ದು, ನನ್ನ ಹತ್ತಿರ ಎಲ್ಲಾ ಮ್ಯಾಪ್ ಆದಿಯಾಗಿ ಇದೆ. ನಾನು ತಮ್ಮ ಗಮನಕ್ಕೆ, ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಈ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಜನಸಂದಣಿ ಜಾಸ್ತಿ ಇದ್ದು 7 ಸಿ.ಎಂ.ಸಿ.ಗಳು, 1 ಟಿ.ಎಂ.ಸಿ., 110 ಹಳ್ಳಿಗಳಿದ್ದವು ಅಲ್ಲಿ ಹೆಚ್ಚಿನ ರೂಪದಲ್ಲಿ ಬೆಳವಣಿಗೆಯಾಗಿರಲಿಲ್ಲ. ಆ ಬೆಳವಣಿಗೆಯಾಗಿಲ್ಲದಂತಹ ಸಂದರ್ಭದಲ್ಲಿ ಸುಮಾರು ಕಿಲೋ ಮೀಟರ್‌ಗಳನ್ನು ಮಾಡಿ ಅವತ್ತಿನ ಜನಸಂಖ್ಯೆಗೆ ಅನುಗುಣವಾಗಿ 2010ರಲ್ಲಿ ಏನು ಚುನಾವಣೆ ಆಯಿತು 2001ರ ಜನಗಣತಿಯನ್ನು ಪರಿಗಣನೆಗೆ ತೆಗೆದುಕೊಂಡು ಅವತ್ತು 15,000, 20,000, 25,000 ಗರಿಷ್ಟ 30,000, ಎಂದು ಮಾಡಲಾಯಿತು. ಆ ರೀತಿಯಲ್ಲಿ ಜನಸಂಖ್ಯೆಯ ಗಣತಿ ಇತ್ತು. ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿಯವರು ಸಹ ಈಗ ಇಲ್ಲಿಯೇ ಇದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಆ ಸಮಯದಲ್ಲಿ ನೀವು ಇದ್ದಿರಿ.

**ಶ್ರೀ ವಿ. ಸೋಮಣ್ಣ:–** ಹೌದು. ನಾನು ಸಹ ಆ ಸಮಯದಲ್ಲಿ ಇದ್ದೆ. ಇಲ್ಲವೆಂದು ಹೇಳಲಿಲ್ಲ. ಮಾನ್ಯ ಸಚಿವರಾದ ಶ್ರೀಯುತ ರಮಾನಾಥ ರೈ ರವರು ಪದೇ ಪದೇ ಹೇಳಬೇಡಿ ಎಂದು ಹೇಳಿದ್ದಕ್ಕೆ ಆ ವಿಷಯವನ್ನು ನಾನು ಹೇಳಲಿಲ್ಲ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಅವರನ್ನು ತಾವು ಏತಕ್ಕೆ ಏಳಿಸುತ್ತೀರಿ?

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸದಸ್ಯರು ನನ್ನ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬೇಕು. ನಾನು ಸಹ 6 ಬಾರಿ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಬಂದಿರುವುದು ಮಾತ್ರವಲ್ಲ, 6 ವರ್ಷಗಳ ಕಾಲ ಪಿಎಲ್‌ಡಿ. ಬ್ಯಾಂಕಿನ ಅಧ್ಯಕ್ಷನಾಗಿ ಕೆಲಸ ನಿರ್ವಹಿಸಿರುತ್ತೇನೆ. ನಾನು ರಾಜಕೀಯಕ್ಕೆ ಸಣ್ಣ ಪ್ರಾಯದಲ್ಲಿ ಬಂದವನಾಗಿದ್ದೇನೆ. ನಾನು 6 ವರ್ಷಗಳ ಕಾಲ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷನಾಗಿ, 6 ಬಾರಿ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಬಂದಿರುವಾಗ ಇವರು ಪಕ್ಷೇತರರಾಗಿ ನಿಂತು ಗೆದ್ದು ಬಾ ಎಂದು ಹೇಳುತ್ತಾರೆ. ಆ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡಬಾರದು. ಸ್ವಲ್ಪಮಟ್ಟಿಗೆ ನಮ್ಮ ವಿಚಾರದಲ್ಲಿ ತಿಳಿದುಕೊಳ್ಳಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಸುಖವಾಗಿ ನಿದ್ದೆ ಮಾಡುವವರಿಗೆ ಈ ರೀತಿಯಲ್ಲಿ ತೊಂದರೆ ಕೊಟ್ಟರೆ ಶ್ರೀಯುತ ಸೋಮಣ್ಣನವರ ಮೇಲೆ ಪ್ರಿವಿಲೇಜ್ ಮೂವ್ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿದ್ದೆ ಮಾಡುತ್ತಿದ್ದಂತಹ ಆನೆಗೆ ಮಾವುತ ತಿವಿದರೆ ಅದು ಸುಮ್ಮನಿರುವುದಿಲ್ಲ. ಆ ವಿಚಾರವನ್ನು ದಯವಿಟ್ಟು ನೆನಪಿಟ್ಟುಕೊಳ್ಳಬೇಕು.

**ಶ್ರೀ ಬಿ. ರಮಾನಾಥ ರೈ:–** ಈ ರೀತಿ ಮಾತನಾಡಿದರೆ ನಾನು ಸುಮ್ಮನಿರುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಸಹ ಅದೇ ವಿಷಯವನ್ನು ಹೇಳಿದೆ. ತೀಟ್ಲೆ ಮಾಡಿದರೆ ಆನೆ ಸುಮ್ಮನಿರುವುದಿಲ್ಲ.

**ಶ್ರೀ ಬಿ. ರಮಾನಾಥ ರೈ:–** ಆನೆಗೆ ತೀಟ್ಲೆ ಮಾಡಿದರೆ ಅದು ಸುಮ್ಮನಿರುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಚಿವರ ಜೊತೆಯಲ್ಲಿ ನಾನಿದ್ದೇನೆ.

**ಶ್ರೀ. ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಈ ಬೃಹತ್ ಬೆಂಗಳೂರು ಮಾಡುವಾಗ ನಾವು ಮತ್ತು ಶ್ರೀಯುತ ಸೋಮಣ್ಣನವರು ಒಟ್ಟಾಗಿ ವಿರೋಧ ಮಾಡಿದ್ದೆವು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸದಸ್ಯರಾದ ಶ್ರೀಯುತ ಸೀತಾರಾಂರವರು ಇಲ್ಲಿ ಗಮನಿಸಬೇಕು. ಒಂದು ಸರ್ಕಾರ ಎಂದರೆ ಅದು ನಿಂತ ನೀರಲ್ಲ, ಅದು ಹರಿಯುವ ನೀರು. ವಿರೋಧ ಪಕ್ಷದವರಾದ ನಾವುಗಳು ಎಲ್ಲವನ್ನೂ ಹೇಳುತ್ತೇವೆ. ಎಲ್ಲವನ್ನೂ ಸರ್ಕಾರ ಪರಿಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಂದು ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಕೂಡ ಈ ಒಂದು 96ರ ವ್ಯವಸ್ಥೆಯಲ್ಲಿ ಬಹುಶ: ತಮ್ಮದೇ ಆದಂತಹ ದೃಷ್ಟಿಕೋನವನ್ನು ಹಾಯಿಸಿದಂತಹವರು. ಇದಾದಮೇಲೆ ಏನು ನಾವು ಅಂದು 198 ವಾರ್ಡ್‌ಗಳನ್ನು ಮಾಡಿದೆವು, ಅಂದಿನ ಜನಸಂಖ್ಯೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜನಸಂಖ್ಯೆಗೆ ಏನಾದರೂ ಹೋಲಿಕೆ ಮಾಡಿದರೆ ಇವತ್ತು ಒಂದೂವರೆ, ಒಂದು ಮುಕ್ಕಾಲು ಲಕ್ಷ ಜನಸಂಖ್ಯೆ ಆಗುತ್ತಿತ್ತು.

ಆದ್ದರಿಂದ, 2006 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡುತ್ತೇವೆಂದ ಮೇಲೆ ಯಾವ ಒಂದು ವ್ಯಾಪ್ತಿ 275 ಕಿ.ಮೀ ಇತ್ತೋ ಅದು 800 ಕಿ.ಮೀ ಆದ ಮೇಲೆ ಬೆಂಗಳೂರು ಏನಾದರೂ ನಾಗಾಲೋಟದಲ್ಲಿ ಬೆಳೆದಿರುವುದಕ್ಕೆ ತಾವು 10 ವರ್ಷಗಳ ಇತಿಹಾಸವನ್ನು ತೆಗೆದುಕೊಳ್ಳಿ. ಅದರ ಹಿಂದಿನ ಇತಿಹಾಸವನ್ನೂ ಕೂಡ ತೆಗೆದುಕೊಳ್ಳಿ. ಈ 10–12 ವರ್ಷದಲ್ಲಿ ಪ್ರಾಯಶ: 2006 ರಿಂದ 2015 ಇವತ್ತು ಏನಿದೆ, ಎಷ್ಟರಮಟ್ಟಿಗೆ ಬೆಂಗಳೂರು ಬೆಳೆದಿದೆ ಎಂದರೆ ವಿಶ್ವದ ಭೂಪಟದಲ್ಲಿ ಯಾವುದೇ ನಗರ ಇಷ್ಟರ ಮಟ್ಟಿಗೆ ಬೆಳೆಯಲಿಲ್ಲ. ಈ ರೀತಿ ಬೆಳೆಯುವಂತಹ ಸಂದರ್ಭದಲ್ಲಿ ಏನು ಇವತ್ತು ಸನ್ಮಾನ್ಯ ಸಿದ್ದರಾಮಯ್ಯ ಸಾಹೇಬರು ಇದನ್ನು ಈ ರೀತಿ ಮಾಡಿದ್ದೇವೆಂದರು. ಅದಕ್ಕೆ ಅಂದಿನ ಜನಸಂಖ್ಯೆಗೆ ಅನುಗುಣವಾಗಿ ಅದನ್ನು ನಾವು ಮಾಡದೇ ಹೋಗಿದ್ದರೆ ಇವತ್ತು 198 ವಾರ್ಡ್‌ಗಳಲ್ಲ, ಪ್ರಾಯಶ: ಅಷ್ಟು ಆಗುತ್ತಿರಲಿಲ್ಲ.

ಮಾನ್ಯ ಸಭಾಪತಿಯವರೆ, ತಮ್ಮ ಗಮನಕ್ಕೆ ತರುವುದೇನೆಂದರೆ ಇವತ್ತು ಏನು ನಮ್ಮ ಮಹಾದೇವಪುರ, ಯಲಹಂಕ, ಬ್ಯಾಟರಾಯನಪುರ, ಹೆಬ್ಬಾಳ, ಉತ್ತರಹಳ್ಳಿ, ದಾಸರಹಳ್ಳಿ, ರಾಜಾರಾಜೇಶ್ವರಿನಗರ, ಯಶವಂತಪುರ, ಇವೆಲ್ಲವುಗಳು ಕೂಡ ಬೆಂಗಳೂರಿನ outskirt ನಲ್ಲಿದ್ದಂತಹ ಪ್ರದೇಶಗಳಲ್ಲಿ ಇವತ್ತು ಜನಸಂಖ್ಯೆ ದ್ವಿಗುಣವಾಯಿತು. ಹಳೆ ಬೆಂಗಳೂರಿನ ಮಲ್ಲೇಶ್ವರಂ ಇರಬಹುದು, ರಾಜಾಜಿನಗರ ಇರಬಹುದು, ವಿಜಯನಗರ ಇರಬಹುದು, ಬೇರೆ ಬೇರೆ ನಗರಗಳಿರಬಹುದು, ನಮ್ಮ, ಶಿವಾಜಿನಗರ ಇರಬಹುದು, ಭಾರತಿನಗರ ಇರಬಹುದು, ಇವೆಲ್ಲವುಗಳು ಕೂಡ ಬೆಳೆಯಲಿಕ್ಕೆ ಅವಕಾಶವಿರಲಿಲ್ಲ. ಬೆಳೆಯಲಿಕ್ಕೆ ಅವಕಾಶ ಇದ್ದುದು outskirts. ಇದಾದ ಮೇಲೆ ಏನು ಕೇಂದ್ರ

ಸರ್ಕಾರ ಲೋಕಸಭೆ ಮತ್ತು ವಿಧಾನಸಭೆಯನ್ನು ಪುನರ್ ವಿಂಗಡನೆ ಮಾಡಿದಂತಹ ಸಂದರ್ಭದಲ್ಲಿ ಇದ್ದುದು ಆ ಭಾಗದಲ್ಲಿ ಕೇವಲ 2 ಲಕ್ಷ ಮತದಾರರು. ಇವತ್ತು ಮಹಾದೇವಪುರ ಕ್ಷೇತ್ರದಲ್ಲಿ ಇವತ್ತು ಎಷ್ಟಿದೆ ಎನ್ನುವುದನ್ನು ಮಾನ್ಯ ಸದಸ್ಯರಾದ ಶ್ರೀಯುತ ಸೀತಾರಾಂ ರವರು ಗಮನಿಸಬೇಕು. ಯಶವಂತಪುರದಲ್ಲಿ ಎಷ್ಟಾಗಿದೆ, ಯಲಹಂಕದಲ್ಲಿ ಎಷ್ಟಾಗಿದೆ, ಬ್ಯಾಟರಾಯನಪುರದಲ್ಲಿ ಎಷ್ಟಾಗಿದೆ, ಕೆ.ಆರ್. ಪುರಂ ನಲ್ಲಿ ಎಷ್ಟಾಗಿದೆ ಎಂದು ಹೇಳಿ, ಇದೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ನಾವು ಅಂದು ಏನು ಭೌಗೋಳಿಕವಾಗಿ ಪ್ರಾಯಶ: ದೂರದೃಷ್ಟಿಯುಳ್ಳವರಾಗಿ ಮಾಡಿರುತ್ತೇವೆ. ಅಂದಿನ ನಮ್ಮ ಕಾರ್ಯಕ್ರಮಗಳು ಏನಾಗಿತ್ತು, 198 ವಾರ್ಡ್‌ಗಳನ್ನು ಸಮರ್ಪಕವಾಗಿ ನೀಡುವಂತಹದ್ದರಲ್ಲಿ ಆ ನಿಟ್ಟಿನಲ್ಲಿ ನಾವು ಚಿಂತನೆಯನ್ನು ಮಾಡಿ, ಮುಂದಿನ ಬೆಂಗಳೂರು ಯಾವರೀತಿ ಆಗಬಹುದು ಎನ್ನುವ ದೂರದೃಷ್ಟಿಯಿಂದ ಈ ಒಂದು ಕೆಲಸವನ್ನು ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿ ಇದ್ದರೆ, ಅಷ್ಟೊಂದು ಕಾಳಜಿ ಇದ್ದರೆ ಪ್ರಾಯಶ: ಎಲ್ಲರನ್ನು ಒಂದು ಸಭೆಗೆ ಕರೆದು ಮಾತನಾಡಿ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅನುಭವಸ್ಥರಿದ್ದಾರೆ. ಪ್ರಾಯಶ: ಏತಕ್ಕೋಸ್ಕರ ಇದನ್ನು ಮಾಡುತ್ತಿದ್ದೇವೆ ಎನ್ನುವಾಗ ಈ 198 ವಾರ್ಡ್‌ಗಳಿಗೆ ಸಮಾನವಾಗಿ ಅಭಿವೃದ್ಧಿ ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ನಮ್ಮದೇನೂ ಬೇಸರಿಕೆ ಇಲ್ಲ. ನಮಗೆ ಏನಾಗಿದೆ ಎಂದರೆ ಒಂದು ಕಡೆ ಬೆಳೆಯುತ್ತಿರುತ್ತದೆ, ಇನ್ನೊಂದು ಕಡೆ ಸ್ಥಗಿತವಾಗಿರುತ್ತದೆ. ಯಾವುದು ಬೆಳೆಯುತ್ತಿದೆ, ಯಾವುದು ಹೊರ ವಲಯದಲ್ಲಿರುತ್ತವೆ, ಅಂತಹ ಹೊರ ವಲಯಗಳು ಇಂದು ಬೆಳೆಯುತ್ತಿರುತ್ತವೆ. ಯಾವುದು, ಅಂದರೆ ಮೊದಲಿನಿಂದ ಇರುವಂತಹ ನಗರಗಳು ಇವತ್ತು ಬೆಳೆಯುವುದಿಲ್ಲ.

ಆದ್ದರಿಂದ, ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಭವವನ್ನು, ತಮ್ಮ ಚಿಂತನೆಗಳನ್ನು ಪ್ರಾಯಶ: ಎಲ್ಲೋ ಒಂದು ಕಡೆ ಒಲ್ಲದ ಮನಸ್ಸಿಗೆ ಮೊಸರಿನಲ್ಲಿ ಕಲ್ಲು ಎನ್ನುವ ರೀತಿಯಲ್ಲಿ ಇದು ಒಂದು ನೆಪ ಮಾಡಿಕೊಳ್ಳುವುದು ಅವಶ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಬೆಂಗಳೂರಿನ ಬಗ್ಗೆ ಸಾಕಷ್ಟು ಕಳಕಳಿ ಇದೆ ಎನ್ನುವುದು ಸಾಕಷ್ಟು ನನ್ನ ವೈಯಕ್ತಿಕ ಅಭಿಪ್ರಾಯ. ನನ್ನ ವೈಯಕ್ತಿಕ ಚಿಂತನೆ. ಇವತ್ತು ಬಿಎಂಆರ್‌ಸಿಎಲ್‌ನ ಮೆಟ್ರೋ ಯೋಜನೆ ಇದೆ, ಮೇಲು ಸೇತುವೆಗಳಿವೆ, ಅಂಡರ್ ಪಾಸ್‌ಗಳಿವೆ, ಇವೆಲ್ಲವುಗಳಿಗೂ ಕೂಡ ಅಂದು ಉಪ ಮುಖ್ಯಮಂತ್ರಿಗಳಾದಂತಹ ಇವರು, ಮತ್ತು ಸನ್ಮಾನ್ಯ ಶ್ರೀ ಜೆ.ಹೆಚ್. ಪಟೇಲ್‌ರವರು, ಸನ್ಮಾನ್ಯ ಶ್ರೀ ದೇವೇಗೌಡರವರು ಹಾಗೂ ಸನ್ಮಾನ್ಯ ಶ್ರೀ ಎಸ್‌ಎಂ. ಕೃಷ್ಣರವರು, ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿ ಅವರು ಮತ್ತು ಇನ್ನು ಅನೇಕ ಮಹನೀಯರುಗಳು ಈ ನಗರಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ವಿಶಾಲವಾದ ಮನೋಭಾವನೆಯಲ್ಲಿ, ವಿಶಾಲವಾದ ಚಿಂತನೆಯಲ್ಲಿ, ನಾಡಪ್ರಭು ಕೆಂಪೇಗೌಡರವರ ಅಂದಿನ ದಿನಗಳನ್ನು

ನಾವು ಏತಕ್ಕೆ ನೆನಪು ಮಾಡಿಕೊಳ್ಳಬೇಕೆಂದರೆ ಬೆಂಗಳೂರನ್ನು ಕೇವಲ ನಾವು ಕಟ್ಟಿರುವಂತಹದ್ದಲ್ಲ. ಈ ಬೆಂಗಳೂರು ಕೇವಲ ಕರ್ನಾಟಕದ ಕನ್ನಡಿಗರಿಗೆ ಮಾತ್ರವಲ್ಲ, ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿರುವಂತಹ ಭಾರತೀಯರಿಗೆಲ್ಲಾ, ವಿಶ್ವದ ಭೂಪಟದಲ್ಲಿ ಬೆಂಗಳೂರಿಗೆ ತನ್ನದೇ ಆದಂತಹ ವೈಶಿಷ್ಟ್ಯತೆ ಬರಲಿಕ್ಕೆ ಅನೇಕ ಮಹನೀಯರುಗಳು ತನ್ನದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಅದೆಲ್ಲಾ ವಿಷಯವನ್ನು ಮೊನ್ನೆ ಮಾತನಾಡಿದ್ದೇನೆ. ಆದ್ದರಿಂದ, ನಾನು ಮತ್ತೆ ಮಾತನಾಡಲಿಕ್ಕೆ ಹೋಗುವುದಿಲ್ಲ. ದಯಮಾಡಿ ತಾವು, ಭೌಗೋಳಿಕವಾಗಿ 25 ಸಾವಿರ ಇದೆ ಎಂದು ಪದೇ ಪದೇ ಹೇಳುತ್ತೀರಿ. ಸನ್ಮಾನ್ಯ ಕಾನೂನು ಸಚಿವರು ಸಹ ಅದೇ ವಿಷಯವನ್ನು ಹೇಳುತ್ತಾರೆ. ಇಲ್ಲಿ 25 ಸಾವಿರ ಇದೆ, ಅಲ್ಲಿ 50 ಸಾವಿರ ಇದೆ ಎಂದು ಹೇಳುತ್ತಾರೆ. ಅಂದು ಅಲ್ಲಿ ಇದ್ದುದು 10 ಸಾವಿರ, 15 ಸಾವಿರ ಮಾತ್ರ ಎಂದು ಮಾನ್ಯ ಜಯಚಂದ್ರ ಸಾಹೇಬರು ಗಮನಿಸಬೇಕು. ಇದನ್ನು ಸರಿ ಮಾಡಿ. ತಾವು ಏನು ಮಾಡಿದರೂ ನಾನು ಬೇಡವೆಂದು ಹೇಳುವುದಿಲ್ಲ. ಮತ್ತೆ delimitation ಮಾಡಿ, ನಾನು ಬೇಡವೆಂದು ಹೇಳುವುದಿಲ್ಲ. ಕೋರ್ಟ್ ಮೂಲಕ 6 ತಿಂಗಳ ಕಾಲಾವಕಾಶವನ್ನು ತೆಗೆದುಕೊಳ್ಳುವುದಕ್ಕೆ ತಾವು ಏನೇನು ಮಾಡುತ್ತಿದ್ದೀರಿ, ಅದಕ್ಕೆ ನಮಗೆ ಬೇಸರಿಕೆ ಇರುವುದಿಲ್ಲ. ನಮಗೆ ಇರುವಂತಹ ಒಂದೇ ಒಂದು ಚಿಂತನೆ ಎಂದರೆ ಬೆಂಗಳೂರನ್ನು ಬೆಂಗಳೂರು ಆಗಿಯೇ ಉಳಿಸಬೇಕೆನ್ನುವುದು ನಮ್ಮ ಚಿಂತನೆ. ಯಾರ್‍ಯಾರು ಪುಣ್ಯಾತ್ಮರು ಅಂದರೆ, ಇಡೀ ವಿಶ್ವದ ಭೂಪಟದಲ್ಲಿರುವಂತಹ ಜನ, ಸರ್.ಎಂ. ವಿಶ್ವೇಶ್ವರಯ್ಯ, ಮಹಾರಾಜರಿಂದ, ಕಬ್ಬನ್‌ರವರಿಂದ ಹಿಡಿದು, ಈ ಕರ್ನಾಟಕದ ಬಹುತೇಕ ಬುದ್ಧಿಜೀವಿಗಳಿಂದ ಹಿಡಿದು ಇವರೆಲ್ಲರೂ ಕೊಟ್ಟಿರುವಂತಹ ಕೊಡುಗೆಯನ್ನು, ಎಲ್ಲೋ ಒಂದು ಕಡೆ ಅದರ ಸೂಕ್ಷ್ಮತೆಯನ್ನು ಅರಿತುಕೊಂಡು ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ prestige ಏನೂ ಇರುವುದಿಲ್ಲ. ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ಅನುಭವದಿಂದ ಸ್ವಲ್ಪಮಟ್ಟಿಗೆ ಇದರ ಬಗ್ಗೆ ಜಾಸ್ತಿ ಒತ್ತು ಕೊಡಬೇಕಾಗಿತ್ತು. ಚುನಾವಣೆ ನಡೆಸಲಿಕ್ಕೆ 6 ತಿಂಗಳು ಇರುವಾಗಲೇ ಈ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದರೆ ಒಳ್ಳೆಯದಿತ್ತು. ತಾವು ಈ ನಿಟ್ಟಿನಲ್ಲಿ ಶ್ರೀ ಬಿ.ಎಸ್. ಪಾಟೀಲ್ ನೇತೃತ್ವದ ಸಮಿತಿಯನ್ನು ನೇಮಕ ಮಾಡಿದ್ದೀರಿ. ಮತ್ತೆ, ಪಕ್ಷದಲ್ಲಿಯೂ ಕೂಡ ಬುದ್ಧಿವಂತರಾದ ಸನ್ಮಾನ್ಯ ಬಿ.ಎಲ್. ಶಂಕರ್‌ರವರು, ಸನ್ಮಾನ್ಯ ಹುಚ್ಚಪ್ಪನವರು, ರಾಮಚಂದ್ರಪ್ಪನವರನ್ನು ಸಂಪರ್ಕ ಮಾಡಿ ಈ ನಿಟ್ಟಿನಲ್ಲಿ ತಮ್ಮ ಹತ್ತಿರ ಏನೇನು ಮಾಹಿತಿ ಇದೆ ಕೊಡಿ ಎಂದು ಹೇಳಿ, ಲೌಖಿಕವಾಗಿ, ಮೌಖಿಕವಾಗಿ ಇದೆಲ್ಲವನ್ನು ಪಡೆದಿದ್ದೀರಿ. ನನಗೆ ಖುಷಿಯಾದ ವಿಚಾರ ಏನೆಂದರೆ, ಅತ್ಯಾಚಾರ ಪ್ರಕರಣ ಬಂದಾಗ ತಾವು ಸನ್ಮಾನ್ಯ ಎಂ.ಸಿ. ನಾಣಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೀರಿ. ಅದಕ್ಕೆ ಎಲ್ಲವನ್ನು ಕೊಟ್ಟು, ಅದನ್ನು ನೀವು ಯಾವ ರೀತಿಯಲ್ಲಿ ಮಾಡಬೇಕೆಂದು ಹೇಳಿ, ಹಲವು ತಿಂಗಳುಗಟ್ಟಲೆ ಕಾಲಾವಕಾಶವನ್ನು ಕೊಡುತ್ತೀರಿ. ಹಿಂದುಳಿದ ವರ್ಗಗಳ ಮತ್ತು ಜನಗಣತಿಗೋಸ್ಕರ ಒಂದು ಸಮಿತಿಯನ್ನು ಮಾಡಿ,

ವರ್ಷಗಳಿಂದ ಅದಕ್ಕೆ ಸುಮಾರು ಕಾರ್ಯಕ್ರಮಗಳನ್ನು ಮಾಡಿ, ಅದು ಕಾರ್ಯರೂಪಕ್ಕೆ ಬರುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಈ ಸಮಿತಿಗೆ ಕೇವಲ ಮೂರು ತಿಂಗಳ ಕಾಲಾವಕಾಶವನ್ನು ಕೊಟ್ಟು. . . .

**ಶ್ರೀ ಹೆಚ್.ಎಂ. ರೇವಣ್ಣ:–** ಹಿಂದುಳಿದ ವರ್ಗಗಳ ಆಯೋಗ ಅದು ಒಂದು ಶಾಶ್ವತ ಆಯೋಗ. ಆ ವಿಚಾರಕ್ಕೆ ಏತಕ್ಕೆ ಹೋಗುತ್ತೀರಿ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಅದಕ್ಕೆ ನಮ್ಮ ವಿರೋಧವಿಲ್ಲ.

**(1–00 ಗಂಟೆ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಅದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಇದೆ. ಅದಕ್ಕೆ ಇದಕ್ಕೆ ಹೋಲಿಸುತ್ತೀರಲ್ಲ? ಅದು ಸರಿಯಲ್ಲ. ಅದಕ್ಕೂ ಇದಕ್ಕೂ ಏನು ಸಂಬಂಧ ಇದೆ? ಇದ್ದರೆ ಅದನ್ನು ಹೇಳಬೇಕು.

**ಸಭಾಪತಿಯವರು:–** ಪ್ರಾಸಂಗಿಕವಾಗಿ ಒಂದೆರಡು ಮಾತು ಬರುತ್ತಿರುತ್ತವೆ. ಅದಕ್ಕೆ ಏಕೆ ಆಕ್ಷೇಪ ಮಾಡುತ್ತೀರಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಸಂಬಂಧ ಇರುವ ವಿಷಯ ಮಾತನಾಡಲಿ.

**ಸಭಾಪತಿಯವರು:–** ಅವರು ಕೇಪೆಬಲ್ ಆಗಿದ್ದಾರೆ. ಅವರು ಮಾತನಾಡುತ್ತಾರೆ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಹಿಂದುಳಿದ ವರ್ಗಗಳ ಆಯೋಗ ಇರುವುದು ಆರ್ಟಿಕಲ್ 342ರ ಕೆಳಗಡೆ. ಮತ್ತು ಇಂದಿರಾ ಸಹಾನಿ ಕೇಸ್

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಸಂಬಂಧ ಇರುವ ವಿಷಯ ಮಾತನಾಡಲಿ. ಅದಕ್ಕೂ ಇದಕ್ಕೂ ಏನು ಸಂಬಂಧ ಇದೆ.

**(ಗೊಂದಲ)**

**ಸಭಾಪತಿಯವರು:–** ಈಗ ಸಾಕು ಬಿಡಿ. ಅದನ್ನು ಬೆಳೆಸಿಕೊಂಡು ಹೋಗುವುದು ಬೇಡ. ಅವರು ಮಾತನಾಡಲಿ. ಆಯಿತು ಎಲ್ಲರು ಕುಳಿತುಕೊಳ್ಳಿ. ಅವರು ಏನೆಂದು ಹೇಳುತ್ತಾರೆ ಹೇಳಲಿ ಬಿಡಿ. ಆಯಿತು ಸೋಮಣ್ಣನವರೆ ವಿಷಯಕ್ಕೆ ಬನ್ನಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ನಾನು ಯಾವುದೇ ದುರುದ್ದೇಶದಿಂದ ಈ ಮಾತುಗಳನ್ನು ಹೇಳುತ್ತಿಲ್ಲ. ಯಾವುದೇ ಬೇರೆ ಬೇರೆ ರೂಪಕ್ಕಾಗಿ ಇದನ್ನು ಹೇಳುತ್ತಿಲ್ಲ. ನನ್ನ ಅಭಿಪ್ರಾಯವೇನೆಂದರೆ ನೀವು ಅದಕ್ಕೆ ಎಷ್ಟು ಶಕ್ತಿ ಕೊಟ್ಟಿದ್ದೀರೊ ಈ ಕಮಿಟಿಗೂ ಕೂಡ ಅಷ್ಟೇ ಶಕ್ತಿಯನ್ನು ಕೊಡಬೇಕಾಗಿತ್ತು ಎನ್ನುವ ವಿನಂತಿಯನ್ನು ಮಾಡಬಾರದು ಎಂದರೆ ನಾವೇನು ಮಾಡಬೇಕು? ಅದು ಎಷ್ಟರಮಟ್ಟಿಗೆ ಸೂಕ್ತವೋ ಬೆಂಗಳೂರು ನಗರ ಜನಜೀವನದ ಸುಧಾರಣೆ ಮಟ್ಟವನ್ನು ಈ ನಗರದ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡತಕ್ಕಂಥದ್ದು ಕೂಡ ಈ ರಾಜ್ಯದ ಸರ್ಕಾರಕ್ಕೆ ಅಷ್ಟೇ ಪ್ರಮುಖವಾದದ್ದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇದರ ಜೊತೆಯಲ್ಲಿ ಬೆಂಗಳೂರು ನಗರ ಎಂದರೆ ಕೇವಲ ಅಭಿವೃದ್ಧಿ ಎನ್ನುವುದಕ್ಕಿಂತ ಹೆಚ್ಚಾಗಿ ಈ ನಗರಕ್ಕೆ ಏನು ಇವೊತ್ತು ರಾಜ್ಯದಲ್ಲಿರಬಹುದು, ಯಾವುದೇ ಅಭಿವೃದ್ಧಿ ಕೆಲಸಗಳು ನಾವು ಗ್ರಾಮೀಣ ಜನರ ಬದುಕಿನಲ್ಲಿ ಏನಾದರು ಬದಲಾವಣೆಯನ್ನು ತರತಕ್ಕಂಥದ್ದಕ್ಕೆ ನಮಗೆ ಬೇಕಾಗಿರತಕ್ಕಂಥ ಸಂಪನ್ಮೂಲವನ್ನು ಕೊಡತಕ್ಕಂಥದ್ದರಲ್ಲಿ ಯಾವುದೇ ಒಂದು ಆಯೋಗದಿಂದ ತೀರ್ಮಾನ ಆಗಿರತಕ್ಕಂಥದ್ದು ಶೇಕಡ 60–70 ರಷ್ಟು ತೆರಿಗೆ ಹಣ ಸಂಗ್ರಹಣೆ ಮಾಡತಕ್ಕಂಥದ್ದು ಬೆಂಗಳೂರು ನಗರದಲ್ಲಿ. ಈ ನಗರವನ್ನು ಯಾವುದೋ ಒಂದು ಮುಖವಾಡವನ್ನು ತೋರಿಸತಕ್ಕಂಥದ್ದರಲ್ಲಿ ಯಾರು ಯಾರು ಪುಣ್ಯಾತ್ಮರು ಇದಕ್ಕೋಸ್ಕರವಾಗಿ ತಮ್ಮ ತನವನ್ನು ಪ್ರದರ್ಶನ ಮಾಡಿದ್ದಾರೆ ಇವರೆಲ್ಲರಿಗೂ ಕೂಡ ನಾವು ಮತ್ತೊಮ್ಮೆ ಅವರ ಹೆಸರುಗಳನ್ನು ಜೀವಂತವಾಗಿರಿಸಬೇಕಾದರೆ ನಾವು ಇವೊತ್ತು ಈ ನಗರದ ಸರ್ವಾಂಗೀಣ ಅಭಿವೃದ್ಧಿಗೆ ನಾಡಪ್ರಭುವಿನ ಆ ಚಿಂತನೆಗಳಿಗೆ ಯಾವುದೇ ಧಕ್ಕೆಯಾಗದ ಹಾಗೆ ನಾವು ನೋಡಿಕೊಳ್ಳಬೇಕಾಗಿದೆ. ಇವೊತ್ತು ಇಲ್ಲಿರತಕ್ಕಂಥ ಬೆಂಗಳೂರಿನ ಆದಾಯದಲ್ಲಿ ಬರುತ್ತಿರತಕ್ಕಂಥ ಹಣವನ್ನು ಬೇರೆ ಬೇರೆ ರೂಪದಲ್ಲಿ ಖರ್ಚು ಮಾಡಬಾರದೆಂದು ನಾವು ಹೇಳುವವರಲ್ಲ. ಬರತಕ್ಕಂಥ ಹಣವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಾಗ ಅದು ಏಕೋ ಏನೋ ಗೊತ್ತಿಲ್ಲ ಸನ್ಮಾನ್ಯ ಸಿದ್ಧರಾಮಯ್ಯ ಸಾಹೇಬರು ಎರಡು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಈ ನಗರ ಪ್ರದೇಶದ ಜನರ ಜೀವನದಲ್ಲಿ ವಿಶೇಷವಾಗಿ ಬೆಂಗಳೂರು ನಗರದ ಜೀವನದಲ್ಲಿ ನಾನು ಏನಾದರೊಂದು ಸಾಧನೆಯನ್ನು ಮಾಡಬೇಕು, ಒಂದು ಗುರುತನ್ನು ಈ ನಗರದ ನಾಗರಿಕರಿಗೆ ಕೊಡಬೇಕೆನ್ನುವ ಅವರ ಚಿಂತನೆಯನ್ನು ಪ್ರದರ್ಶನ ಮಾಡದೆ ಇರತಕ್ಕಂಥದ್ದು ನನ್ನಂಥವರಿಗೆ ಎಲ್ಲೋ ಒಂದು ಕಡೆ ನೋವಿನ ಸಂಗತಿ. ಏಕೆಂದರೆ

ನಾನು 1979–80 ರಿಂದ ಅವರ ಜೊತೆ ಒಡನಾಟವನ್ನು ಹೊಂದಿರತಕ್ಕಂಥವನು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಯಾರಿಗೂ ಯಾವುದು ಶಾಶ್ವತವಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದಂಥ ಹೋರಾಟದ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರು. ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡುವಾಗ ಇವೊತ್ತು ಏನು ನಾವು ಕೊಡುತ್ತಿರತಕ್ಕಂಥ ಅನೇಕ ಚಿಂತನೆಗಳನ್ನು ಬಡವರಿಗೆ ಏನು ಸಮರ್ಪಣೆ ಮಾಡುತ್ತಿದ್ದಾರೆ ಆ ಬಡವರಿಗೆ ಸಮರ್ಪಣೆ ಮಾಡುತ್ತಿರತಕ್ಕಂಥ ಹಣವನ್ನು ಕೂಡ ಬೆಂಗಳೂರು ನಗರದ ಟ್ಯಾಕ್ಸ್ ಪೇಯರ್ ಇರಬಹುದು ಬೇರೆ ಬೇರೆಯವರು ಇರಬಹುದು, ಮತ್ತೊಬ್ಬರು ಇರಬಹುದು, ಮಗದೊಬ್ಬರು ಇರಬಹುದು ಇವರ ಬಳುವಳಿಯು ಕೂಡ ಇದೆ. ಈ ಬಳುವಳಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಾಗ ನಗರದ ಏಕತೆಯನ್ನು ಈ ನಗರದ ಅಖಂಡತೆಯನ್ನು ಈ ನಗರದಲ್ಲಿ ವಾಸ ಮಾಡತಕ್ಕಂಥ ವಿಶ್ವದ ಭೂಪಟದಲ್ಲಿ ಎಷ್ಟು ಸಮಾಜಗಳಿವೆ, ಎಷ್ಟು ಜಾತಿಗಳಿವೆ ಎಲ್ಲರೂ ಕೂಡ ಶಾಂತಿ–ನೆಮ್ಮದಿಯಿಂದ ಬದುಕತಕ್ಕಂಥ ಈ ನಗರವನ್ನು ವಿಭಜನೆ ಮಾಡುವುದರಿಂದ ಆಗತಕ್ಕಂಥ ಅನೇಕ ಅನಾಹುತಗಳು ಪ್ರಾಯಶಃ ಈಗಾಗಲೇ ನಾವು ಸಾಕಷ್ಟು ತಮ್ಮ ಗಮನಕ್ಕೆ ತಂದಿದ್ದೇವೆ. ವಿಶೇಷವಾಗಿ ಚೆನ್ನೈ ಮಹಾನಗರ ಪಾಲಿಕೆ ಅದಕ್ಕೆ ಸುಮಾರು ಸಾವಿರ ವರ್ಷಕ್ಕೆ ಮೇಲ್ಪಟ್ಟ ಇತಿಹಾಸ ಇದೆ. ಬ್ರಿಟೀಷರ ಕಾಲದಿಂದ ಕೂಡ ಚೆನ್ನೈ ನಗರ ಪಾಲಿಕೆಯನ್ನು ನಡೆಸಿಕೊಂಡು ಬಂದಿರತಕ್ಕಂಥದ್ದು. ಅಲ್ಲಿ ಏನಾದರು ರಾಜಕಾರಣದ ಹೊಲಸನ್ನು ಮಾಡಿದ್ದೇ ಆದರೆ ಇತ್ತೀಚಿನ ದಿನಗಳಲ್ಲಿ ಒಂದು ಕಡೆ ಕರುಣಾನಿಧಿಯವರು ಮತ್ತೊಂದು ಕಡೆ ಕುಮಾರಿ ಜಯಲಲಿತಾರವರು ಅದನ್ನು ಕೂಡ 2–3–4 ಮಾಡಬಹುದಾಗಿತ್ತು. ಆದರೆ ಅವರ ದೂರದೃಷ್ಟಿಯಿಂದ ಆ ಚೆನ್ನೈ ಮಹಾನಗರ ಪಾಲಿಕೆಯನ್ನು ಸಾವಿರ ವರ್ಷಗಳ ಇತಿಹಾಸವನ್ನು ಆವೊತ್ತಿನಿಂತ ಇವೊತ್ತಿನವರೆಗೂ ಕೂಡ ಒಂದೇ ನಗರ ಪಾಲಿಕೆಯನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಇವೊತ್ತಿಗೂ ಕೂಡ ಅಲ್ಲಿ ವಿಭಜನೆಯಾಗಲಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಚೆನ್ನೈ ನಗರದ ಸುತ್ತಮುತ್ತ ನಮ್ಮಲ್ಲಿ ಯಾವ ರೀತಿ ಪರಿಸ್ಥಿತಿ ಇದೆ ಅಲ್ಲೂ ಕೂಡ ಇವೊತ್ತಿಗೂ ಅದೇ ಇದೆ. ಅಲ್ಲಿ ವಿಭಜನೆ ಆಗಲಿಲ್ಲ. ಆದರೆ ಏಳು ಸಿಎಂಸಿ, ಒಂದು ಟಿಎಂಸಿ ಮತ್ತು 110 ಹಳ್ಳಿಗಳನ್ನು ಸೇರಿಸಿ ನಾವು ದೊಡ್ಡದು ಮಾಡಿದ್ದೇವಲ್ಲ ಅವರು ಹಾಗೆ ಮಾಡಲಿಲ್ಲ. ಚೆನ್ನೈ ಸುತ್ತಮುತ್ತ ಇರತಕ್ಕಂಥ ಪ್ರದೇಶಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ರಾಮಲಿಂಗಾರೆಡ್ಡಿ ಸಾಹೇಬರು ಬುದ್ಧಿವಂತರು. ನಾವು ಅವರು ಜೊತೆ ಜೊತೆಯಲ್ಲಿ ಕೆಲಸ ಮಾಡಿಕೊಂಡು ಬಂದವರು. ಚೆನ್ನೈ ಮಹಾನಗರ ಪಾಲಿಕೆ ನೂರಾರು ವರ್ಷ ಇತಿಹಾಸವುಳ್ಳಂಥದ್ದು. ಆವೊತ್ತು ಏನಾಯಿತು ಹಾಗೆ ಇದೆ. ನಮ್ಮಲ್ಲೂ ಕೂಡ ಜಿಲ್ಲಾ ಪಂಚಾಯ್ತಿಗಳಿವೆ, ತಾಲ್ಲೂಕು ಪಂಚಾಯ್ತಿಗಳಿವೆ ಎಲ್ಲವೂ ಕೂಡ ಇದೆ. ಆದರೆ ಸಿಟಿಯನ್ನು ಒಂದುಗೂಡಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಮೊದಲು ಇದ್ದಷ್ಟೇ ಸಿಟಿ ಇವೊತ್ತು ಇಲ್ಲ. ಅದು ಸಾಕಷ್ಟು ಬೆಳೆದಿದೆ. ಮೊದಲು ಇರುವ ಸ್ಕ್ವೇರ್ ಕಿ.ಮೀ.ಗಿಂತ ಎರಡು ಮೂರರಷ್ಟು ಜಾಸ್ತಿಯಾಗಿದೆ. ಅದು ಒಂದು ಕಡೆ. ಅಂತಹ ಒಂದು ದೊಡ್ಡ ನಗರವೇ ಇವೊತ್ತಿಗೂ ಕೂಡ ಒಂದೇ ನಗರ ಇರುವಾಗ ತಾವು ಇದನ್ನು ಏತಕ್ಕೋಸ್ಕರವಾಗಿ ವಿಂಗಡಣೆ ಮಾಡುತ್ತಿದ್ದೀರಿ. ಇದು ಒಂದು ವಿಚಾರ.

ಇನ್ನು ಎರಡನೇ ವಿಚಾರ ಎಂದರೆ ದೆಹಲಿಯಲ್ಲಿ ಮೂರು ಮಾಡಿದರು. ಅದಾದ ನಂತರ ಏನೇನಾಯಿತು ಎನ್ನುವುದಕ್ಕಿಂತ ಹೆಚ್ಚಾಗಿ ಮತ್ತೆ ಸಂಯುಕ್ತ ದೆಹಲಿ ಮಹಾನಗರ ಪಾಲಿಕೆಯನ್ನು ರಚಿಸಬೇಕೆಂದು ಮೂರು ಜನ ಮಹಾಪೌರರು ಪತ್ರವನ್ನು ಬರೆದು, ರೆಸಲ್ಯೂಶನ್ ಮಾಡಿ ಇವೊತ್ತಿನ ಆಪ್ ಸರ್ಕಾರಕ್ಕೆ ವಿನಂತಿ ಮಾಡಿದ್ದಾರೆ. ಇದರಿಂದ ಆಗಿರತಕ್ಕಂಥ ದುಷ್ಪರಿಣಾಮವನ್ನು ಕೂಡ ಹೇಳುತ್ತ ನಾವು 1400 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು 300–400 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೂಡ ಕೊಡುವುದಕ್ಕಾಗುತ್ತಿಲ್ಲ, ಸಂಬಳವನ್ನು ಕೂಡ ಕೊಡುವುದಕ್ಕೆ ಆಗುತ್ತಿಲ್ಲವೆಂದು ಹೇಳಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಅಲ್ಲಿ ಸಾಲ ಇರಬಹುದು ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಶ್ರೀಮತಿ ಶೀಲಾ ದೀಕ್ಷಿತ್‌ರವರು ಇದ್ದಂಥ ಹದಿನೈದು ವರ್ಷಗಳ ಅವಧಿಯಲ್ಲಿ ನಾವು ಅಜಗಜಾಂತರ ಡೆವೆಲಪ್‌ಮೆಂಟ್ ಅನ್ನು ನೋಡಿದ್ದೇವೆ. ಇಲ್ಲೂ ಕೂಡ 9302 ಕೋಟಿ ಸಾಲ ಇದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ದೆಹಲಿಯಲ್ಲಿ ಅಭಿವೃದ್ಧಿಯಾಗಿಲ್ಲ ಎಂದು ಮಾತ್ರ ಹೇಳಬೇಡಿ. ಹದಿನೈದು ವರ್ಷಗಳಲ್ಲಿ ಫಸ್ಟ್‌ಕ್ಲಾಸ್ ಆಗಿ ಅಭಿವೃದ್ಧಿಯಾಗಿದೆ. ಆದರೆ ಕಾರಣಾಂತರಗಳಿಂದ ನಾವು ಸೋತಿರಬಹುದು. ಸೋಲುವುದು ಗೆಲ್ಲುವುದು ಬೇರೆ ಪ್ರಶ್ನೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅಂದಿನ ಮುಖ್ಯಮಂತ್ರಿಗಳಾದ ಶ್ರೀಮತಿ ಶೀಲಾ ದೀಕ್ಷಿತ್‌ರವರು 2011–12ರಲ್ಲಿ ಮೂರು ಭಾಗಗಳನ್ನಾಗಿ ಮಾಡಿದ್ದಾರೆ. ಅಲ್ಲಿ ಸುಮಾರು ವರ್ಷ ಆಗಿದೆ ಎಂದು ಹೇಳಿದ್ದೀರಿ ಆ ಕಾರಣಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಮೂರು ವರ್ಷದ ಹಿಂದೆ ಇದನ್ನು ವಿಭಜನೆ ಮಾಡಿದ್ದಾರೆ. ಆ ನಂತರ ಬೇರೆ ಬೇರೆ ಪಾರ್ಟಿಯವರು ಬಂದಿದ್ದರು ಕೂಡ ಅವರೆಲ್ಲಾ ಒಟ್ಟಾಗಿ ಕುಳಿತುಕೊಂಡು ನಮಗೆ ಇದರ ಅವಶ್ಯಕತೆ ಇಲ್ಲ ದಯಮಾಡಿ ಬೇಡ ನಮಗೆ ಮೊದಲು

ಹೇಗಿತ್ತು ಹಾಗೆ ಮಾಡಿ ಕೊಡಿ ಎಂದು ನಿರ್ಣಯ ಮಾಡಿ ಆಪ್ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಎಲ್ಲಾ ಮಾಹಿತಿಯನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಮಾನ್ಯ ಸಭಾಪತಿಯವರೆ, ಮುಂಬೈ ನಗರ ಎರಡು ಆಗಿತ್ತು. ಅದರಲ್ಲಿ ಒಂದು ಮಹಾನಗರ ಪಾಲಿಕೆ 1872ರಲ್ಲಿ 64 ವಾರ್ಡ್‌ಗಳಿದ್ದಂಥದ್ದು, 1998ರಲ್ಲಿ ಮೇಯರ್ ಇನ್ ಕೌನ್ಸಿಲ್ ಮಾಡಿದರು. ಆದರೆ ಜನಸಂಖ್ಯೆ ಇವೊತ್ತಿಗೆ 1 ಕೋಟಿ 84 ಲಕ್ಷ, 2000ನೇ ಇಸ್ವಿಯಲ್ಲಿ ಮೇಯರ್ ಮತ್ತು ಉಪ ಮೇಯರ್ ಆಡಳಿತವನ್ನು ಎರಡೂವರೆ ವರ್ಷಗಳಿಗೆ ಇವೊತ್ತು ನಿಗದಿ ಪಡಿಸಿದ್ದಾರೆ. ಅಲ್ಲೂ ಒಂದೊಂದು ವರ್ಷ ಇದ್ದಿದ್ದನ್ನು ಇವೊತ್ತು ಎರಡೂವರೆ ವರ್ಷಗಳಿಗೆ ನಿಗದಿ ಮಾಡಿದ್ದಾರೆ. 2002ರಲ್ಲಿ 222 ವಾರ್ಡ್‌ಗಳಿದ್ದವು ಅದನ್ನು ಇವೊತ್ತು ಹೆಚ್ಚಿನ ವಾರ್ಡ್‌ಗಳಾಗಿ ವಿಂಗಡಣೆ ಮಾಡಿದ್ದಾರೆ. ಆದರೆ ಒಂದೇ ನಗರ ಪಾಲಿಕೆ ಇದೆ. ಅದಲ್ಲದೇ Greater Hyderabad. ಪ್ರಾಯಶಃ ಇದು ಜನಾದೇಶವನ್ನು ಪಡೆದಿರತಕ್ಕಂತಹ ಉದಾಹರಣೆ ನಮ್ಮೆಲ್ಲರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮೂರು ಕಡೆ ಇವತ್ತು ಏನು ಮೂರು ಕಡೆ ಜನಾದೇಶವನ್ನು ಪಡೆಯಿರಿ ಎಂದು ಸ್ವತಂತ್ರ ಪೂರ್ವದಲ್ಲಿ ಹೇಳಿದರು, ಸ್ವತಂತ್ರ ಬಂದಮೇಲೆ ಹೇಳಿದರೋಳಗೆ ಹೈದರಾಬಾದ್ ಕೂಡ ಒಂದು. ಹೈದರಾಬಾದ್ ಇವತ್ತಿಗೂ ಕೂಡ Greater Hyderabad Municipal Corporation ಆಗಿದೆ. ಅದು 2007ನೇ ಇಸವಿಯಿಂದ ಇಲ್ಲಿಯವರೆಗೂ ಕೂಡ ಶ್ರೀ ರಂಗರೆಡ್ಡಿ ಜಿಲ್ಲೆ ಮತ್ತು ಮೇಡಕ್ ಜಿಲ್ಲೆಯಿಂದ 12 ಮುನಿಸಿಪಾಲಿಟಿಗಳನ್ನು ಸೇರಿಸಿ Greater Hyderabad Municipal Corporation ಎಂದು ಮಾಡಲಾಗಿದೆ. ಇದರ ವಿಸ್ತೀರ್ಣ 175 ಸ್ಕ್ವೇರ್ ಕಿಲೋ ಮೀಟರ್‌ನಿಂದ 650 ಕಿಲೋ ಮೀಟರ್ ಆಗಿದೆ. ಇದರಲ್ಲಿ ಅವರು ಮಾಡಿರತಕ್ಕಂಥದ್ದು ಒಂದೇ ಒಂದು ಉತ್ತಮವಾದಂತಹ ಕೆಲಸ ಎಂದರೆ, ಇದು ಮೊದಲು 4 ವಲಯಗಳಿದ್ದು ಅದನ್ನು 7 ವಲಯಗಳನ್ನಾಗಿ ಮಾಡಿ ಅಧಿಕಾರವನ್ನು ಯಾವ ರೀತಿಯಾಗಿ ಹಂಚಿಕೆಯನ್ನು ಮಾಡಬೇಕು ಎನ್ನುವುದಕ್ಕಿಂತಲೂ Greater Hyderabad Municipal Corporation ಅನ್ನು ಆಡಳಿತದ ದೃಷ್ಟಿಯಿಂದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಎಂದು ವಿಭಾಗಗಳನ್ನು ಮಾಡಿ, ಅಲ್ಲಿ ಸಂಬಂಧಪಟ್ಟಂತಹ ನುರಿತ ಅಧಿಕಾರಿಗಳನ್ನು ಹಾಕಿ, Mayoring Council ಮಾಡಿ, ಮಹಾಪೌರರಿಗೆ ಅಧಿಕಾರವನ್ನು ಕೊಟ್ಟು ಅಧಿಕಾರಿಗಳಿಂದ ಕೆಲಸವನ್ನು ತೆಗೆದುಕೊಳ್ಳುವಂತಹ ಒಂದು ದೊಡ್ಡತನವನ್ನು ಈ Greater Hyderabad Municipal Corporation ಮಾಡುತ್ತಿದೆ. ಅದರ ಜೊತೆಯಲ್ಲಿ ಕಲ್ಕತ್ತಾ ನಗರ ಇಡೀ ದೇಶದ ಇತಿಹಾಸದಲ್ಲಿ 1,480 ಸ್ಕ್ವೇರ್ ಕಿಲೋ ಮೀಟರ್ ಇದೆ. ಈ ನಗರದಲ್ಲಿ ಇವತ್ತಿಗೂ ಕೂಡ ಒಬ್ಬರೇ ಮಹಾಪೌರರು ಇರುವುದು. ಇದರ ಮಾಹಿತಿಯನ್ನು ಸರ್ಕಾರಕ್ಕೆ ಬೇಕಾದರೆ ಕಳುಹಿಸಿ ಕೊಡಿ ಎಂದರೆ ಕಳುಹಿಸಿಕೊಡುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ಇಷ್ಟೆಲ್ಲಾ ಇದ್ದಂತಹ ಸಂದರ್ಭದಲ್ಲಿ

ಯಾವುದಕ್ಕೋಸ್ಕರವಾಗಿ ಬೆಂಗಳೂರು ಮಹಾ ನಗರಪಾಲಿಕೆಯನ್ನು ಸರ್ಕಾರ ವಿಭಜನೆ ಮಾಡಬೇಕೆಂದು ಯೋಚನೆ ಮಾಡುತ್ತಿದೆ. ಈ ವಿಭಜನೆಯಿಂದ ಬರುವಂತಹ ಸಾಧಕ–ಬಾಧಕಗಳೇನು? ದಿವಂಗತ ಶ್ರೀ ಕೆ.ಹೆಚ್. ಹನುಮಂತಯ್ಯನವರು, ದಿವಂಗತ ಡಿ. ದೇವರಾಜ ಅರಸುರವರು ಎಂಥೆಂತಹ ಪುಣ್ಯಾತ್ಮರು ಕೊಟ್ಟಂತಹ ಕೊಡುಗೆಯನ್ನು ವಿಭಜಿಸತಕ್ಕಂತಹ ಕೆಲಸಕ್ಕೆ ಏಕೆ ನಾವು ಇವತ್ತು ಯೋಚನೆಯನ್ನು ಮಾಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಅವರುಗಳು ವಿಭಜನೆಯನ್ನು ಮಾಡಬಾರದೆಂದು ಹೇಳಿದ್ದಾರೆಯೇ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅವರುಗಳು ವಿಭಜನೆಯನ್ನು ಮಾಡಬಾರದೆಂದು ಹೇಳಿಲ್ಲ. ಆದ್ದರಿಂದ ದಯಮಾಡಿ ಇದು ಯಾವುದೇ ಕಾರಣಕ್ಕೆ ವಿಭಜನೆಯಾಗಬಾರದು. ಏಕೆ ವಿಭಜನೆಯಾಗಬಾರದು ಎನ್ನುವುದಕ್ಕಿಂತಲು ಹೆಚ್ಚಾಗಿ ನನ್ನ ಮಿತ್ರರಾದಂತಹ ಶ್ರೀ ರಾಮಲಿಂಗಾರೆಡ್ಡಿಯವರು ನಿನ್ನೆಯ ದಿವಸ ಒಂದು allegation ಮಾಡಿದರು. 2008ನೇ ಇಸವಿಯಿಂದ ಎ ಖಾತಾ, ಬಿ ಖಾತಾವನ್ನು ಅಧಿಕೃತವಾಗಿ ಮಾಡಿದ್ದರಿಂದ ಸುಮಾರು ಐದಾರು ಸಾವಿರ ಕೋಟಿ ರೂಪಾಯಿಗಳು ಇದರಿಂದ ವಂಚನೆಯಾಗಿಬಿಟ್ಟಿದೆ. ಬೆಂಗಳೂರು ನಗರ ಪಾಲಿಕೆಯನ್ನು ಸೂಪರ್‌ಸೀಡ್ ಮಾಡುವುದಕ್ಕೆ ಇದೊಂದು ಅಜೆಂಡಾ ಅಂದರೆ ಹಲವಾರು ಕಾರಣಗಳಲ್ಲಿ ಇದೊಂದು ಎಂದು ಹೇಳಿದರು. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, 1997–98ನೇ ಸಾಲಿನಲ್ಲಿ ಶ್ರೀ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದರು, ಸನ್ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಯಾಗಿದ್ದರು. ಅವತ್ತಿನ ದಿವಸ ಬಡವರು ವಾಸ ಮಾಡುತ್ತಿರುವಂತಹ revenue pocket ಗಳನ್ನೆಲ್ಲಾ ಒಡೆಯಬೇಕೆಂದಾಗ ಶ್ರೀ ರೇವಣ್ಣನವರು ಕೂಡ ಅವತ್ತಿನ ದಿವಸ ಶಾಸಕರಾಗಿದ್ದರು. ನಾವೆಲ್ಲಾ ಬಂದು ಕೃಷ್ಣದಲ್ಲಿ ಕುಳಿತುಕೊಂಡು ಈಗ ಏನು ಅನ್ಯಾಯವಾಗುತ್ತಿದೆ ಅದಕ್ಕೆ ಒಂದು ಟಿಪ್ಪಣೆಯನ್ನು ದಿನಾಂಕ 22.04.1992ರಲ್ಲಿ ಒಂದು ಆದೇಶವನ್ನು ಮಾಡಲಾಯಿತು. ಬೆಂಗಳೂರಿನ ಒಳಗಡೆ ಇರುವಂಥದ್ದು ಯಾವ ಖಾಸಗಿ ವ್ಯಕ್ತಿಗಳಿಂದ ಖರೀದಿ ಮಾಡಿದ್ದಾರೆ, ಯಾರು ರೈತರಿಂದ ಜಾಗವನ್ನು ಖರೀದಿ ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಯಾರು ಬಡವರಿದ್ದಾರೆ, ಸರ್ಕಾರಿ ಜಾಗವನ್ನು ಹೊರತುಪಡಿಸಿ, ಮಹಾನಗರ ಪಾಲಿಕೆಯ ಜಾಗವನ್ನು ಹೊರತುಪಡಿಸಿ, ಸ್ವಂತ ಜಾಗವನ್ನು ಖರೀದಿ ಮಾಡಿರುವಂಥವರಿಗೆ 100 ರೂಪಾಯಿಗಳು, 50 ರೂಪಾಯಿಗಳನ್ನು betterment charge ಎಂದು ಮಾಡಿದಂತಹ ಸನ್ನಿವೇಶದಲ್ಲಿ ಇದನ್ನು ನಮ್ಮ ಸರ್ಕಾರ ಅವತ್ತು ಶ್ರೀ ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಮತ್ತು ಶ್ರೀ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಯಾಗಿದ್ದಂತಹ

ಕಾಲದಲ್ಲಿ ಮಾಡಲಾಯಿತು, ಪ್ರಾಯಶಃ ಮುಂದೆ ಬಂದಂತಹ ಸರ್ಕಾರ ಅದನ್ನು ತಡೆಯಾಜ್ಞೆಯನ್ನು ಮಾಡಲಾಯಿತು. ತಡೆಯಾಜ್ಞೆ ಮಾಡುವುದಕ್ಕೆ ಮುಂಚಿತವಾಗಿ ನಾವು ಒಂದು ದೊಡ್ಡ ಕೆಲಸವನ್ನು ಮಾಡಿದೆವು, ಇದನ್ನು ಮಾಡುವಾಗ ಹೀಗೆ ಹೋದರೆ ಸರಿ ಹೋಗುವುದಿಲ್ಲ. ಬೆಂಗಳೂರು ನಗರದಲ್ಲಿ ದಿನೇ ದಿನೇ ಜಮೀನನ್ನು ಖರೀದಿ ಮಾಡಿರುವಂತಹ ಬೇರೆ ಬೇರೆ ರಾಜ್ಯದ ಜನರು ಇವತ್ತು ಏನು ಮಾಡುತ್ತಿದ್ದಾರೆಂದರೆ, ಜಿಪಿಎ ಮೇಲೆ ಎಲ್ಲಾ ಸೈಟ್‌ಗಳನ್ನು ನೋಂದಣಿ ಮಾಡಿದ್ದಾರೆ. ಆ GPA ರದ್ದು ಮಾಡುವಂತಹ ಹಕ್ಕು ಯಾರು ಮಾಲೀಕರು ಇರುತ್ತಾರೆ ಅವರು ಪಡೆದುಕೊಳ್ಳುತ್ತಾರೆ ಅದ್ದರಿಂದ ಅದಕ್ಕೆ ಅನರ್ಹವಾಗುತ್ತದೆಂದು ಅವತ್ತಿನ ಅಧಿವೇಶನದಲ್ಲಿ 38ಸಿ ಯನ್ನು ಮಾಡಿ, ಇದನ್ನು ಸಕ್ರಮಗೊಳಿಸಬೇಕು ಎನ್ನುವಂತಹ ತೀರ್ಮಾನವನ್ನು ಮಾಡಿ, ಆ 38ಸಿ ಯನ್ನು ಮಾಡಲಾಯಿತು. ಅವತ್ತು ಅದರ ಬಗ್ಗೆ ವಿಸ್ತಾರವಾದಂತಹ ಚರ್ಚೆಯಾಯಿತು. ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಚರ್ಚೆಯಾದ ಮೇಲೆ ಶ್ರೀ ವಿ.ಎಸ್. ಉಗ್ರಪ್ಪನವರಿಗೂ ಕೂಡ 38ಸಿ ಆಗುವಾಗ ಏನಾಯಿತು ಎಂದು ಗೊತ್ತಿದೆ. ಅವತ್ತಿನ ದಿವಸ ಅವರು ಕೂಡ ಇದ್ದರು. ಅದನ್ನು ಮಾಡಿದಂತಹ ಸಂದರ್ಭದಲ್ಲಿ ಇಡೀ ಬೆಂಗಳೂರು ಜನರ ಅದನ್ನು appreciate ಮಾಡಿದರು. ಅಷ್ಟರೊಳಗೆ ನಮ್ಮ ಸರ್ಕಾರ ಅಧಿಕಾರವನ್ನು ಕಳೆದುಕೊಂಡಿತು. ಮತ್ತೊಂದು ಸರ್ಕಾರ ಅಧಿಕಾರಕ್ಕೆ ಬಂತು. ಹೊಸ ಸರ್ಕಾರ ಬಂದಂತಹ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳು ಯಾವ ರೀತಿಯಾಗಿ ಇಲ್ಲದ್ದನ್ನು ಹೇಳಿದರೋ ಗೊತ್ತಿಲ್ಲ. ಆದ್ದರಿಂದ ಇದು ಇಲ್ಲಿ ಆಗುವುದಿಲ್ಲ. ರಾಜ್ಯಪಾಲರಿಗೆ ಹೇಳಿ ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸಿ ಕೊಟ್ಟರು. ರಾಷ್ಟ್ರಪತಿಯವರು ಸುಮಾರು 8–9 ಸಭೆಗಳನ್ನು ಮಾಡಿ, ಇಡೀ ದೇಶದಲ್ಲಿರುವಂತಹ Urban Development ಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆದು, ಇದರ ಸಾಧಕ–ಬಾಧಕಗಳನ್ನು ಚರ್ಚೆ ಮಾಡಿ ಅಲ್ಲಿ ಘನತವೆತ್ತ ರಾಷ್ಟ್ರಪತಿಗಳು ಒಂದು ಸಂದೇಶವನ್ನು ಕೊಟ್ಟರು. ಏನು ಸಂದೇಶವನ್ನು ಕೊಟ್ಟರು ಎಂದರೆ, ಈ ಕಾಯ್ದೆ ಅಡಿಯಲ್ಲಿ ಸರ್ಕಾರದ ಜಾಗಗಳಾಗಲಿ, acquisition ಆಗಿರತಕ್ಕಂಥದ್ದು ಆಗಲಿ, ಬೇರೆ ಬೇರೆ ಸರ್ಕಾರಿ ಸ್ವಾಮ್ಯದ್ದು ಯಾವುದೂ ಕೂಡ ಇದರಲ್ಲಿ ಒಳಪಡುವುದಿಲ್ಲ. ಯಾರು ರೈತರ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ ಅಂತಹ ಖಾಸಗಿ ವ್ಯಕ್ತಿಗಳಿಂದ ಪಡೆದಂತಹ ಜಾಗವನ್ನು ಪ್ರಾಯಶಃ ನೀವು 38ಸಿ ನಲ್ಲಿ ಅಲ್ಲಿಯ ಅಭಿವೃದ್ಧಿಗೆ ತಕ್ಕಂತೆ, ಏನು betterment charges ಅನ್ನು ಕಲೆಕ್ಟ್ ಮಾಡಿ, ಇದನ್ನು ಮಾಡಿ ಎಂದು ಹೇಳುತ್ತಾರೆ. ಇವತ್ತು ಮಹಾರಾಷ್ಟ್ರ ಇರಬಹುದು, ದೆಹಲಿ ಸರ್ಕಾರ ಇರಬಹುದು, ಪಶ್ಚಿಮ ಬಂಗಾಳ ಇರಬಹುದು, ತಮಿಳುನಾಡು ಇರಬಹುದು, ಹೈದರಾಬಾದ್ ಇರಬಹುದು ಇದೆಲ್ಲವೂ ಕೂಡ ಇದನ್ನು ಇಂಪ್ಲಿಮೆಂಟ್ ಮಾಡುತ್ತಾರೆ. ಆದರೆ ಅಂದಿನ ಇಬ್ಬರು ಸಚಿವರು ಅಂದಿನ ಮುಖ್ಯಮಂತ್ರಿಗಳು ಸರಿಯಾಗಿ ಮಾಹಿತಿಯನ್ನು ಕೊಡದೇ ಇದನ್ನು ಕ್ಯಾನ್ಸಲ್

ಮಾಡುತ್ತಾರೆ. ಈ ಕ್ಯಾನ್ಸಲ್ ಮಾಡಿದ ಪರಿಣಾಮ ಪ್ರಾಯಶಃ ಇವತ್ತು ಏನು ಇದೊಂದು ಹಗರಣವಾಗಿದೆ ಎಂದು ಹೇಳುತ್ತಿದ್ದಾರೆ, ಈ ಹಗರಣದಲ್ಲಿ ಪ್ರಾಯಶಃ ಯಾರ್‍ಯಾರು ಎಷ್ಟೆಷ್ಟು ಕಾರಣಕರ್ತರು ಎನ್ನುವುದಕ್ಕಿಂತಲೂ ಹೆಚ್ಚಾಗಿ ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡುವಂತಹ ಜನ ನಾನು ಆಗಿರಲಿ, ಯಾರೇ ಆಗಿರಲಿ, ಎಷ್ಟೇ ದೊಡ್ಡವರಾಗಿದ್ದರೂ ಕೂಡ ಅದಕ್ಕಿಂತಲೂ ಪಾಪದ ಕೆಲಸ ಮತ್ತೊಂದು ಇಲ್ಲ. ಆದಾದ ಮೇಲೆ ಸನ್ಮಾನ್ಯ ರಾಮಲಿಂಗಾರೆಡ್ಡಿಯವರು ಏನು ಹೇಳಿದರು ಎಂದರೆ, ಒಟ್ಟು ಎ ಖಾತಾ ಮತ್ತು ಬಿ ಖಾತಾ ದಿಂದ ಬಂದಿದ್ದು ಇಲ್ಲಿಯವರೆಗೆ ಒಟ್ಟು 31.03.2015ರ ವರೆಗೆ ಬೆಂಗಳೂರು ನಗರ ಪಾಲಿಕೆಗೆ ಬಂದಿರುವುದು 1,810 ಕೋಟಿ ರೂಪಾಯಿಗಳು.

**ಶ್ರೀ ಸೀತಾರಾಂ:–** ಮಾನ್ಯ ಸಭಾಪತಿಯವರೆ, ಆ ಇಬ್ಬರು ಸಚಿವರು ಯಾರೆಂದು ದಯಮಾಡಿ ಶ್ರೀ ವಿ. ಸೋಮಣ್ಣನವರು ಹೇಳಬೇಕು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ನಮ್ಮ ಶ್ರೀ ಸೀತಾರಾಂರವರು ಎಷ್ಟರಮಟ್ಟಿಗೆ ನನ್ನ ಸ್ನೇಹಿತರು ಎಂದರೆ, ಎಲ್ಲವೂ ಕೂಡ ಅವರಿಗೆ ಗೊತ್ತಿದೆ. ಶ್ರೀ ಹೆಚ್.ಡಿ. ರೇವಣ್ಣರವರಿಗೆ ಇನ್ನು ಹೆಚ್ಚು ಗೊತ್ತಿದೆ. ಶ್ರೀ ರಾಮಲಿಂಗಾರೆಡ್ಡಿಯವರಿಗೆ ಎಲ್ಲಾ ಗೊತ್ತಿದೆ. ಅದುರಿಂದ ದೇವರು ಅವರಿಗೆಲ್ಲಾ ಒಳ್ಳೆಯದನ್ನು ಮಾಡಲಿ. ಇಂತಹ ಉಪಯುಕ್ತವಾದಂತಹ ಕೆಲಸವನ್ನು ಮಾಡುವಂತಹ ಸಂದರ್ಭದಲ್ಲಿ . . .

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಬರೀ ಅವರು ಮೂರು ಜನರಿಗೆ ಗೊತ್ತು ಎಂದು ಹೇಳುತ್ತಿದ್ದಾರೆ. ಸದನದಲ್ಲಿ ಹೇಳಿದರೆ ನಮಗೂ ಕೂಡ ಗೊತ್ತಾಗುತ್ತದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಆಯಿತು ಮಾನ್ಯ ವೀರಣ್ಣ ಮತ್ತಿಕಟ್ಟಿಯವರೆ ನಿಮ್ಮ ಮನೆಗೆ ಬಂದು ಹೇಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಪಾಪದ ಕೆಲಸವನ್ನು ಯಾರು ಮಾಡಿದರು ಕೂಡ ಪಾಪನೇ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿ. ಸೋಮಣ್ಣನವರೆ ಬರೀ ನಿಮ್ಮ ಮೂರು ಜನರಿಗೆ ಗೊತ್ತಾಗುವುದು ಬೇಡ. ದಯಮಾಡಿ ಆ ಮಹಾನುಭಾವ ಯಾರು ಎಂದು ಗೊತ್ತಾಗಲಿ ದಯಮಾಡಿ ಹೇಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಒಳ್ಳೆಯ ತೀರ್ಮಾನವಾಗಿತ್ತು ಎಂದು ಹೇಳಿ, ಇಬ್ಬರು ಸಚಿವರಿಂದ ಅದು ನಿಂತು ಹೋಯಿತು ಎಂದು ಹೇಳಿದರು. ಆ ಇಬ್ಬರು ಯಾರು ಹೇಳುವುದಕ್ಕೆ ತೊಂದರೆ ಏನಿದೆ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಸರ್ಕಾರದವರು ಬೆಂಗಳೂರನ್ನು ಒಂದೇ ಮಹಾನಗರ ಪಾಲಿಕೆಯನ್ನಾಗಿಯೇ ಉಳಿಸುತ್ತೇವೆಂದು ಹೇಳಿದರೆ ನಾನು ಯಾರೆಂದು ಹೇಳುತ್ತೇನೆ. ಆದ್ದರಿಂದ ನಮಗೆ ನೋವು ಏನೆಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ PID ಮಾಡಿ, Property Identification Document (PID) System ತಂದು, ಆಗ ಸುಮಾರು ಕೇವಲ ಬೆಂಗಳೂರಿನಲ್ಲಿ 8 ಲಕ್ಷ ಆಸ್ತಿಗಳಿಗೆ ಮಾತ್ರ ತೆರಿಗೆಯನ್ನು ಕಟ್ಟುತ್ತಿದ್ದದ್ದು. ಅದನ್ನು 16 ಲಕ್ಷ ಆಸ್ತಿಗೆ ತೆರಿಗೆಯನ್ನು ಕಟ್ಟುವಂತೆ ಮಾಡಲಾಯಿತು. ಬಹುಶಃ ನನಗನ್ನಿಸುತ್ತದೆ 25 ರಿಂದ 30 ಲಕ್ಷ ಆಸ್ತಿಗಳು ಇವತ್ತು ಬೆಂಗಳೂರು ನಗರದಲ್ಲಿದೆ. ಸುಮಾರು ಜನ ಇದನ್ನು ದೋಚುತ್ತಿದ್ದಾರೆ. ಇವತ್ತು ಏನಿದೆ ಈ ಒಂದು ವ್ಯತ್ಯಾಸ ಏನಿದೆ ಇದಕ್ಕೆ ಕಾರಣೀಕರ್ತರು ಯಾರೆಂದರೆ ಕೇವಲ ಶ್ರೀ ರಾಮಲಿಂಗಾರೆಡ್ಡಿಯವರು ಮಾತ್ರ ಆಗಿರುವಂಥದ್ದಲ್ಲ. ಇದರ ಸೂಕ್ಷ್ಮತೆಯನ್ನು ಶ್ರೀ ವಿ.ಎಸ್. ಉಗ್ರಪ್ಪನವರು ಮತ್ತು ಶ್ರೀ ಹೆಚ್.ಎಂ. ರೇವಣ್ಣನವರು, ಶ್ರೀ ಸೀತಾರಾಂ ರವರು ಹೇಳಿದರು ಕೂಡ, ಇದರಿಂದ ಎಷ್ಟು ನೋವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಬರೀ ಶ್ರೀ ವಿ.ಎಸ್. ಉಗ್ರಪ್ಪನವರೆ, ಶ್ರೀ ಹೆಚ್.ಎಂ. ರೇವಣ್ಣ ಮತ್ತು ಶ್ರೀ ಸೀತಾರಾಂ ಅವರ ಹೆಸರನ್ನು ಮಾತ್ರ ಹೇಳುತ್ತಿದ್ದಾರೆ. ಅದರಲ್ಲಿ ಏನೋ ಇರಬೇಕು ದಯಮಾಡಿ ಅದನ್ನು ಸ್ವಲ್ಪ ಬಿಡಿಸಿ ಹೇಳುವುದಕ್ಕೆ ಹೇಳಿಬಿಡಿ.

**ಸಭಾಪತಿಯವರು:–** ಅದು ಏನೆಂದು ಶ್ರೀ ಬಿ. ರಾಮಕೃಷ್ಣರವರಿಗೆ ಅದು ಅರ್ಥವಾಗಲಿಲ್ಲ ಎಂದರೆ ಅದು ಯಾರಿಗೂ ಅರ್ಥವಾಗಿರುವುದಿಲ್ಲ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಶ್ರೀ ವಿ. ಸೋಮಣ್ಣನವರು ಸ್ವಲ್ಪ ಅದನ್ನು ಬಿಡಿಸಿ ಹೇಳಿಬಿಟ್ಟರೆ ಒಳ್ಳೆಯದು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಏನೆಂದರೆ, ಮಾತನಾಡುವಾಗ ಅಡ್ಡ ಬಂದು ಅವರಿಗೆ ಅಡ್ಡಿಪಡಿಸಬೇಡಿ ಎಂದು.

**ಸಭಾಪತಿಯವರು:–** ಏನೋ ಇದೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಏನೋ ಇರಬೇಕೆಂದು ಅಷ್ಟೇ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸೋಮಣ್ಣನವರ ಬಗ್ಗೆ ಏನು ಹೇಳುತ್ತಿದ್ದೇನೆ ಎಂದರೆ, ಯಾವುದೇ ಸದಸ್ಯರು ಜನತೆಯ ಹಿತದೃಷ್ಟಿಯಿಂದ ಹಲವಾರು ವಿಚಾರಗಳನ್ನು ಇಲ್ಲಿ ಪ್ರತಿಪಾದನೆ ಮಾಡಿದಾಗ ಈ ಸದನದ ಸದಸ್ಯನಾಗಿ ಈ ವಿಚಾರಗಳನ್ನು ಬದ್ಧತೆಯಿಂದ ಪ್ರಸ್ತಾಪ ಮಾಡಿದ ಮೇಲೆ ಇಡೀ ರಾಜ್ಯದ ಜನತೆಗೆ ಯಾವುದೇ ಮುಚ್ಚುಮರೆ ಇಲ್ಲದೆ ಅದನ್ನು ಮುಟ್ಟಿಸಬೇಕಾಗುತ್ತದೆ. ಈ ರೀತಿ ಮುಚ್ಚುಮರೆಯಿಂದ ಮಾತನಾಡುವುದಾದರೆ ಮಾತನಾಡಲೇಬಾರದು, ಹೌದಲ್ಲವೆ? ಇವರು ಭವಿಷ್ಯದ ನಾಯಕ, ಎಲ್ಲಿ ಹೋದರೂ ಮಿಂಚುತ್ತಿರುವಂತಹ ನಾಯಕ, ಮಹತ್ತರವಾದ ಗೌರವಯುತ ನಾಯಕರಾದಂತಹ ಇವರು ಈ ರೀತಿ ಮುಚ್ಚಿಡಬಾರದು. ಆದ್ದರಿಂದ ದಯಮಾಡಿ ತಾವು ಈ ಬಗ್ಗೆ ಒಂದು ಆದೇಶ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಇಲ್ಲ, ಇಲ್ಲ, ಗುಟ್ಟುಗಳನ್ನು ರಟ್ಟು ಮಾಡಿ ಎನ್ನುವಂತಹ ಆದೇಶವನ್ನು ನಾನು ಮಾಡುವುದಕ್ಕೆ ಬರುವುದಿಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಗುಟ್ಟು ಎನ್ನುವಂತಿದ್ದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಲೇಬಾರದು.

**ಸಭಾಪತಿಯವರು:–** ಅದು ಅವರಿಗೆ ಬಿಟ್ಟಂತಹ ವಿಚಾರ. ನಿಮ್ಮ ಹಾಗೆಯೇ ನನಗೂ ಕುತೂಹಲ ಇದೆ, ಆದರೆ ಏನೂ ಮಾಡುವುದಕ್ಕಾಗುವುದಿಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಹಾಗಾದರೆ ಪಕ್ಷಾತೀತವಾಗಿ ಹಲವಾರು ಗುಟ್ಟುಗಳು ಎಲ್ಲಾ ನಾಯಕರಿಗೆ ಗೊತ್ತಿವೆ ಎಂಬಂತಾಯಿತು, ನಮ್ಮಂತಹ ಅಮಾಯಕರಿಗೆ ಕೂಡ ಅವು ಗೊತ್ತಾಗಲಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊದಲು ಮಹಾನಗರ ಪಾಲಿಕೆಯಲ್ಲಿ 'ಎ' ಖಾತಾ, 'ಬಿ' ಖಾತಾ ಇರಲಿಲ್ಲ. ಆದರೆ ಈಗ 'ಎ' ಖಾತಾ, 'ಬಿ' ಖಾತಾ ಆಗಿದೆ ಮತ್ತು ಅದು ಮುಂದುವರೆದುಕೊಂಡು ಬಂದಿದೆ. ಆ ರೀತಿ ಆಗಿರುವ ಕಾರಣಕ್ಕಾಗಿ ಏನು ಮಾಡಬೇಕೆಂಬ ಬಗ್ಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಭವಿಷ್ಯದ ನಗರವಾದ ಈ ನಗರದಲ್ಲಿ ನನ್ನ ಮಾಹಿತಿಯ ಪ್ರಕಾರ ಸುಮಾರು 22000 ಅಪಾರ್ಟ್‌ಮೆಂಟ್‌ಗಳಿವೆ, ಸಣ್ಣ–ಪುಟ್ಟ ಎಲ್ಲಾ ಸೇರಿ 1,10,000 ಕೈಗಾರಿಕಾ ಕಟ್ಟಡಗಳಿವೆ, 3758 ಐ.ಟಿ. ಕಂಪನಿಗಳಿವೆ, 1200ಕ್ಕೂ ಹೆಚ್ಚು non-IT ಕಂಪನಿಗಳಿವೆ, 92 ಬಿ.ಟಿ. ಕಂಪನಿಗಳಿವೆ. 441 ಪ್ರತಿಷ್ಠಿತ ಹೊಟೇಲ್‌ಗಳಿವೆ, 2450ಕ್ಕೂ ಹೆಚ್ಚು ಲಾಡ್ಜ್‌ಗಳಿವೆ, 891 ಕಲ್ಯಾಣ ಮಂಟಪಗಳಿವೆ, 1200ಕ್ಕೂ ಹೆಚ್ಚು ಪಾರ್ಟಿ ಹಾಲ್‌ಗಳಿವೆ, 107 ಮಾಲ್‌ಗಳು ಮತ್ತು Multiplex ಇವೆ, 53 ಟೆಕ್ನೋಪಾರ್ಕ್‌ಗಳಿವೆ, 2446 ಆಸ್ಪತ್ರೆ ಕಟ್ಟಡಗಳಿವೆ. 8300 ಪಿ.ಜಿ. ಹಾಸ್ಟೆಲ್‌ಗಳಿವೆ. ಬೆಂಗಳೂರು ನಗರ, ಪ್ರಾಯಶಃ ನಮ್ಮದೂ ತಪ್ಪಿದೆ,

ನಾವೂ ಕ್ಷಮೆ ಕೋರಬೇಕಾಗಿದೆ. ನಮ್ಮಲ್ಲಿಯೂ ಸಹ ಎಲ್ಲಿಯೋ ಒಂದು ಕಡೆ 'ಹುಚ್ಚರ ಮದುವೆಯಲ್ಲಿ ಉಂಡವನೇ ಜಾಣ' ಎನ್ನುವಂತೆ ಯಾರದೋ ಮುಲಾಜಿಗೋಸ್ಕರ ಈ ನಗರ ಮತ್ತು ಇದರ ಸರ್ವಾಂಗೀಣ ಅಭಿವೃದ್ಧಿಯನ್ನು ನಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವಲ್ಲಿ ನಮ್ಮ ಮಟ್ಟಕ್ಕೆ ನಾವು ಮಾಡುವುದಕ್ಕಾಗಲಿಲ್ಲವೇನೊ ಅನಿಸುತ್ತಿದೆ. ಯಾರು ಏನೇ ಹೇಳಬಹುದು, ಮಹಾನಗರಪಾಲಿಕೆಯ ಅವರವರ ವಿಭಾಗಗಳಲ್ಲಿ ನಗರಪಾಲಿಕೆಯ 198 ಜನ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ ಎನ್ನುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಸಹ ಒಂದು ಉದಾಹರಣೆ. ಪದೇ ಪದೇ ಅವರು ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡುತ್ತಿದ್ದಾರೆ. ಆದರೆ ಬೆಂಗಳೂರಿಗೆ ಕಾಣುವಂತಹ ಕೆಲಸಗಳಿಗೆ, ಈ ಬೃಹತ್ ಬೆಂಗಳೂರನ್ನು ಒಂದು ದೊಡ್ಡ ಕಾನ್ಸೆಪ್ಟ್ ಆಗಿ ಮಾಡುವುದಕ್ಕೆ ಸರ್ಕಾರಗಳೇನು ಚಿಂತನೆ ಮಾಡಿವೆ ಆ ಚಿಂತನೆಗಳು ಎರಡು ವರ್ಷಗಳಿಂದೀಚೆಗೆ ನಿಂತುಹೋಗಿವೆ. ಇವತ್ತು ಏನು ಇಷ್ಟೊಂದು ಕಂಪನಿಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇನೆ ಇದನ್ನು ತೆಗೆದುಕೊಂಡು ನಾವು ಸರಿಯಾಗಿ ...

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಕಡತಕ್ಕೆ ಹೋಗುವುದು ಬೇಡ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಾಳಾಗಿದ್ದಂತಹ ರಸ್ತೆಗಳ ದುರಸ್ತಿಗಾಗಿ 300 ಕೋಟಿಗಳನ್ನು ಕೊಟ್ಟರು, ನಗರೋತ್ಥಾನಕ್ಕಾಗಿ ರೂ. 1000 ಕೋಟಿಗಳನ್ನು, ತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಸುಮಾರು ಆರೇಳು ಘಟಕಗಳನ್ನೇನು ನಿರ್ಮಿಸಲಾಗುತ್ತಿದೆ, ಅದಕ್ಕಾಗಿ 250 ಕೋಟಿ ರೂಪಾಯಿಗಳಷ್ಟು ಹಣವನ್ನು ನೀಡಲಾಗಿದೆ. ಹೊರವಲಯದ ವ್ಯಾಪ್ತಿಯಲ್ಲಿ ಬರುವಂತಹ ಪ್ರದೇಶಗಳಿಗೆ 250 ಕೋಟಿ ರೂಪಾಯಿಗಳನ್ನು ಕೊಟ್ಟರು. ಈ ರೀತಿ ಸುಮಾರು ರೂ. 2000 ಕೋಟಿಗಳನ್ನು ನೀಡಲಾಗಿದೆ. ಈ ವರ್ಷ ಕೂಡ ರೂ. 1500 ಕೋಟಿಗಳನ್ನು ನೀಡಲಾಗಿದೆ. JNNURM ಯೋಜನೆಯಲ್ಲಿ ರೂ. 2500 ಕೋಟಿಗಳ ಪ್ರಾಜೆಕ್ಟ್ ಇತ್ತು, ಅಲ್ಲಿ ಎಲ್ಲಾ ಸಿದ್ಧವಾಗಿ ವರ್ಕ್ ಆರ್ಡರ್ ಆಗುವ ಹಂತದಲ್ಲಿ JNNURM ಸ್ಕೀಂ ನಿಲ್ಲಿಸಲಾಯಿತು. ಮುಂದೆ ಅದು ಮತ್ತೆ ಬರಬಹುದು, ಆದರೆ ತಕ್ಷಣಕ್ಕೆ ನಿಂತಿದೆ. ಆ ಸ್ಕೀಂ ಸಹ ಇದ್ದಿದ್ದರೆ ಬೆಂಗಳೂರು ನಗರದಲ್ಲಿ ಇನ್ನೂ ಸಾಕಷ್ಟು ಕೆಲಸಗಳಾಗುತ್ತಿದ್ದವು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ದೂಷಣೆ ಮಾಡುತ್ತಿಲ್ಲ, ನಾವು ಎಲ್ಲಿಯೋ ಒಂದು ಕಡೆ ಎಡವಿದ್ದೇವೆ, ಈ ನಗರದ ಜನಸಂದಣಿ ದಿನೇ ದಿನೇ ಹೆಚ್ಚಾಗುತ್ತಿದೆ. ಅವತ್ತಿನ ದಿವಸ ಸನ್ಮಾನ್ಯ ದಿವಂಗತ ದೇವರಾಜ ಅರಸು ಅವರೇನಾದರೂ ನಗರಕ್ಕೆ ನೀರು ಕೊಡಿ ಎನ್ನದೇ ಹೋಗಿದ್ದರೆ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟದಿಂದ ಬರುವಂತಹ ನೀರು ನಮಗೆ ಸಾಕಾಗುತ್ತಿತ್ತೇನು?

ಇವತ್ತು ದೇವರಾಜ ಅರಸು ಅವರು ಇದ್ದಾರೆಯೆ? ಐ.ಎಂ. ಮೊಗ್ದಮ್‌ರವರಿದ್ದಾರೆಯೇ? ಶ್ರೀಯುತ ಗುಲಾಮ್ ಅಹಮದ್ ಎನ್ನುವಂತಹ ಚೀಫ್ ಇಂಜಿನಿಯರ್ ಬಗ್ಗೆ ಮಾನ್ಯ ರೇವಣ್ಣನವರಿಗೂ ಗೊತ್ತಿದೆ. ಅವರು ಬೆಳಿಗ್ಗೆಯೇ ಹೊರಟು ಸುಮಾರು ಒಂದು ಗಂಟೆ, ಎರಡು ಗಂಟೆಗಳ ಕಾಲ ವಾರ್ಡ್‌ಗಳಲ್ಲಿ ಸುತ್ತಾಡಿ ಬರುತ್ತಿದ್ದರು. ಅವತ್ತಿನ ದಿವಸ ಈಗಿನಂತಹ ಅನುಕೂಲತೆಗಳೆಲ್ಲಾ ಇರಲಿಲ್ಲ. 100 ಕಿಲೋ ಮೀಟರ್‌ನಿಂದ ಬೆಂಗಳೂರು ನಗರಕ್ಕೆ ನೀರನ್ನು ತರುವಂತಹ ಯೋಜನೆಗಳನ್ನು ನೋಡಿ ಆ ಸಂದರ್ಭದಲ್ಲಿ ನಾವೆಲ್ಲಾ ಆಡಿಕೊಳ್ಳುತ್ತಿದ್ದೆವು. ಆದರೆ ಕಾವೇರಿ 2ನೇ ಹಂತದ ಮೂರನೇ ಘಟ್ಟ ಮತ್ತು 4ನೇ ಘಟ್ಟದ ಯೋಜನೆಗಳು ಬಂದಿವೆ. ಆದರೂ ಸಹ ಈ ನಗರಕ್ಕೆ ಸಂಪೂರ್ಣವಾಗಿ ನೀರನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅವತ್ತೇನಾದರೂ ಆ ಪುಣ್ಯಾತ್ಮರು 3 ನಗರಪಾಲಿಕೆ ಮಾಡಬೇಕೆಂದು ಯೋಚನೆ ಮಾಡಿದ್ದರೆ ಇವೆಲ್ಲಾ ಬರುತ್ತಿದ್ದವೇ? ಈ ಕೆಲಸಗಳೆಲ್ಲಾ ಆಗುತ್ತಿದ್ದವೇ? ಇದರಲ್ಲಿ ಯಾವ ಸರ್ಕಾರದ ಕೊಡುಗೆ ಎಷ್ಟೆಷ್ಟು ಇದೆ ಎನ್ನುವುದಕ್ಕಿಂತ ಹೆಚ್ಚಾಗಿ ಈ ನಗರವನ್ನು ನಾವು ಎಷ್ಟು ಪ್ರೀತಿ ಮಾಡುತ್ತೇವೆಯೋ ಅಷ್ಟೂ ಆ ನಗರದ ಒಂದು ಕೋಟಿ ಜನ ನಮ್ಮನ್ನು ಅಪ್ಪಿಕೊಳ್ಳುತ್ತಿದ್ದಾರೆ, ಆ ಎಲ್ಲಾ ಜನರನ್ನು ಒಂದೇ ದೋಣಿಯಲ್ಲಿ ಕರದುಕೊಂಡು ಹೋಗುವಂತಹ ಒಂದು ವ್ಯವಸ್ಥೆಯನ್ನೇನು ಸೃಷ್ಟಿ ಮಾಡಿದ್ದಾರೆ ಆ ವ್ಯವಸ್ಥೆಗೆ ಪ್ರಾಯಶಃ ನಮ್ಮ ಯಾರಿಂದಲೂ ಸಹ ಕೊಡಲಿ ಪೆಟ್ಟಾಗಬಾರದೆಂಬುದು ನನ್ನ ಒಂದು ವಿನಂತಿಯಾಗಿದೆ. ನನ್ನ ಅನುಭವ ಏನಿದೆ, ಇದು ಸಣ್ಣ ಅನುಭವ. ಈ ಅನುಭವ ಪೂರ್ತಿ ನನ್ನದು ಎಂದು ಯಾರೂ ಸಹ ಹೇಳುವಂತಹ ವ್ಯವಸ್ಥೆ ಇಲ್ಲ. ಸಾಮಾನ್ಯ ಕುಟುಂಬಗಳಿಂದ ಬಂದಂತಹ ನಾವು ಸಹ ಬೆಂಗಳೂರನ್ನು, ನಾನು ಇವತ್ತು ಏಕೆ ಪದೇ ಪದೇ ಸನ್ಮಾನ್ಯ ಎಸ್.ಎಂ. ಕೃಷ್ಣ ಅವರನ್ನು ನೀರು ಸರಬರಾಜನ್ನು ಖಾಸಗೀಕರಣ ಮಾಡಬೇಕೆನ್ನುವಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ನಾವು ಹಕ್ಕುಚ್ಯುತಿ ಪ್ರಸ್ತಾವವನ್ನು ಮಂಡನೆ ಮಾಡಿದಾಗ ಸನ್ಮಾನ್ಯ ರಾಮಲಿಂಗಾರೆಡ್ಡಿಯವರು, ಮಾನ್ಯ ಸೀತಾರಾಂ ಅವರು ಸಹ ಇದ್ದರು. ಅವತ್ತು ಅವರು ತೋರಿದಂತಹ ದೊಡ್ಡತನವನ್ನು ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ನಾವು ಮಾತನಾಡುತ್ತಿದ್ದಂತೆಯೇ ಎದ್ದುನಿಂತುಕೊಂಡು ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲ, ನನಗೆ ಅರ್ಥವಾಗುವಂತೆ ಈ ವಿಚಾರವನ್ನು ತಿಳಿಸಿರುವುದರಿಂದ ನಾನು ಈ ಖಾಸಗೀಕರಣವನ್ನು ಕೈಬಿಡುತ್ತೇನೆ ಎಂದು ಅವರು ಹೇಳಿದಂತಹ ಉದಾಹರಣೆಯನ್ನು ಮತ್ತೊಮ್ಮೆ ನಾವು ಪುನರ್ವಿಮರ್ಶೆ ಮಾಡುವುದು ಏತಕ್ಕೆಂದರೆ, ಇಂತಹ ಒಂದು ದೊಡ್ಡ ನಗರವನ್ನು, ಶಾಪಗ್ರಸ್ಥ ನಗರವನ್ನಾಗಿ ಮಾಡುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ? ಏತಕ್ಕೋಸ್ಕರವಾಗಿ ಇದರಲ್ಲಿ ಯಾರದೇ ಮುಲಾಜಿಲ್ಲ, ಮಾನ್ಯ ರಾಮಲಿಂಗಾರೆಡ್ಡಿಯವರು 6 ಬಾರಿ ಶಾಸಕರಾಗಿದ್ದವರು. ನಾನು 4 ಬಾರಿ ಶಾಸಕನಾಗಿದ್ದೇನೆ. ಇನ್ನೂ ನಾಲ್ಕೈದು ಬಾರಿ ಅವರೇ ಶಾಸಕರಾಗಿ ಆರಿಸಿ ಬರಲಿ, ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಇನ್ನೂ 3 ವರ್ಷಗಳ ಕಾಲದ ಅವಧಿ ಇದೆ. ಇಂತಹ ಒಂದು ಸಂದರ್ಭದಲ್ಲಿ ಪ್ರಾಯಶಃ ಅದಕ್ಕೆ ಯಾವ ರೀತಿಯಲ್ಲಿ

ಒತ್ತನ್ನು ಕೊಡಬೇಕೋ ಆ ದಿಕ್ಕಿನಲ್ಲಿ ಎಲ್ಲರೂ ಸೇರಿ ಪಕ್ಷಾತೀತವಾಗಿ ಒತ್ತು ಕೊಡೋಣ. ಯಾವ ಒಂದು ಸಣ್ಣ ಭ್ರಷ್ಟತೆಗೋಸ್ಕರವಾಗಿ, ನಾನು ಅದನ್ನು ಸಹ ತಮಗೆ ಮನವರಿಕೆ ಮಾಡಿಕೊಡುತ್ತೇನೆ. ನಾನು ಈ ಮಾತನ್ನು ಹೇಳುವುದಕ್ಕೆ ಕಾರಣವೇನೆಂದರೆ, ...

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಭ್ರಷ್ಟತೆ ಸಣ್ಣದಿರಲಿ, ದೊಡ್ಡದಿರಲಿ ಅದು ಭ್ರಷ್ಟತೆಯೇ ಆಗಿರುತ್ತದೆ. ಅದನ್ನು 'ಒಂದು ಸಣ್ಣ ಭ್ರಷ್ಟತೆಗೋಸ್ಕರ' ಎಂದು ಹೇಳುವುದು ಸರಿಯಾಗುವುದಿಲ್ಲ.

**ಶ್ರೀ ವಿ. ಸೋಮಣ್ಣ:–** ಈ ಭ್ರಷ್ಟತೆ ಹೇಗಾಗುತ್ತದೆ ಎನ್ನುವುದಕ್ಕೆ ತಾವು ಹೇಳಿದ್ದಕ್ಕೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಾನು ಹೇಳಬಾರದು ಎಂದಿದ್ದೆ, ಸನ್ಮಾನ್ಯ ಸೀತಾರಾಂ ಅವರೇ ಹೇಳಿದ್ದರಿಂದ ತಿಳಿಸುತ್ತಿದ್ದೇನೆ. ರೂ. 18,802 ಕೋಟಿಗಳನ್ನು 2001 ರಿಂದ 2006ರಲ್ಲಿ ಕೇವಲ ರಸ್ತೆಗಳಿಗಾಗಿ ಖರ್ಚು ಮಾಡಲಾಗಿದೆ.

**ಶ್ರೀ ರಾಮಲಿಂಗಾರೆಡ್ಡಿ:–** ಇಲ್ಲ, ಅಷ್ಟು ಹಣ ಖರ್ಚಾಗುವುದಕ್ಕೆ ಸಾಧ್ಯವಿಲ್ಲ, ಅದನ್ನು ತಾವು ಮತ್ತೊಮ್ಮೆ ಪರಿಶೀಲಿಸಬೇಕಾಗುತ್ತದೆ. ಆಗೆಲ್ಲಾ ವರ್ಷಕ್ಕೆ 1000 ರಿಂದ 1500 ಕೋಟಿ ರೂಪಾಯಿಗಳ ಬಜೆಟ್ ಇರುವಾಗ ಹೇಗೆ ರಸ್ತೆಗಳಿಗೋಸ್ಕರ 5 ವರ್ಷಕ್ಕೆ 17000 ಕೋಟಿಯಾಗುವುದಕ್ಕೆ ಸಾಧ್ಯವಿದೆ? ಹಾಗಾಗಿ ಈ ವಿಚಾರದಲ್ಲಿ ಮಾನ್ಯ ಸೋಮಣ್ಣನವರಿಗೆ ಮಾಹಿತಿ ಕೊರತೆ ಇದೆ.

**ಶ್ರೀ ವಿ. ಸೋಮಣ್ಣ:–** ನನಗೆ ಮಾಹಿತಿ ಕೊರತೆ ಏನಿಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಇದರಲ್ಲಿ Program of Works ಸೇರಿಕೊಂಡಿದೆ, Program of Works ಕೂಡ ಸೇರಿಕೊಂಡಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಬಜೆಟ್‌ನಲ್ಲಿ ಎಲ್ಲಿದೆ ದುಡ್ಡು? ಅದರಲ್ಲಿರುವುದೇ 1000 ಕೋಟಿ ರೂಪಾಯಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಅದರಲ್ಲಿ Program of Works ಕೂಡ ಸೇರಿಸಿಕೊಂಡು ನಡೆದಿದ್ದು, ಆ ಬಗ್ಗೆ ಇರುವಂತಹ ಮಾಹಿತಿಯನ್ನು ಮಾನ್ಯ ಸಭಾಪತಿಯವರ ಮುಖಾಂತರ ತಮಗೆ ಕಳುಹಿಸಿಕೊಡುತ್ತಾರೆ, ದಯಮಾಡಿ ಅದನ್ನು ತಾವು ಪರಿಶೀಲಿಸಬಹುದು.

**ಸಭಾಪತಿಯವರು:–** ಮಾನ್ಯ ಸೋಮಣ್ಣನವರೇ, ತಾವೀಗ ಒಟ್ಟು 102 ನಿಮಿಷಗಳ ಕಾಲ ಮಾತನಾಡಿದ್ದೀರಿ. ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ವಿ. ಸೋಮಣ್ಣ:–** ಇನ್ನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:–** ನೀವು ನಿಮ್ಮ ಪಕ್ಷಕ್ಕೆ ನಿಗದಿಪಡಿಸಿರುವ ಸಮಯದಲ್ಲಿ ಎಷ್ಟು ಹೊತ್ತು ಬೇಕಾದರೂ ಮಾತನಾಡಿ, ನನ್ನದೇನೂ ಅಭ್ಯಂತರವಿಲ್ಲ. ನಾನು ಮಧ್ಯದಲ್ಲಿ ತಮಗೆ ಏನನ್ನೂ ಹೇಳುವುದಿಲ್ಲ, ಆದರೆ ನಿಮ್ಮ ಪಕ್ಷದ ಬೇರೆ ಯಾವ ಸದಸ್ಯರಿಗೂ ಈ ವಿಧೇಯಕದ ಬಗ್ಗೆ ಮಾತನಾಡಲು ಅವಕಾಶ ಸಿಗುವುದಿಲ್ಲ. ಆದ್ದರಿಂದ ಈ ವಿಚಾರವನ್ನು ತಾವು ಅವರಿಗೆ ಹೇಳಬೇಕಾಗುತ್ತದೆ. ನೀವು ಮಾತನಾಡಿ ಮುಗಿಸಿದ ನಂತರ ನಾನು ಉಳಿದಿರುವ ಸಮಯವನ್ನು ಬೇರೆಯವರಿಗೆ ಹಂಚಿಕೆ ಮಾಡುತ್ತೇನೆ. ಏಕೆಂದರೆ ನನ್ನ ಬಳಿ unlimited time ಇಲ್ಲ.

**ಶ್ರೀ ವಿ. ಸೋಮಣ್ಣ:–** ನನ್ನ 102 ನಿಮಿಷಗಳ ಸಮಯದಲ್ಲಿ ಸುಮಾರು 30 ರಿಂದ 40 ನಿಮಿಷಗಳಷ್ಟು ಸಮಯವನ್ನು ರಾಮಲಿಂಗಾರೆಡ್ಡಿಯವರೇ ತೆಗೆದುಕೊಂಡುಬಿಟ್ಟಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಈಗ ಬೆಂಗಳೂರಿನಲ್ಲಿ 198 ವಾರ್ಡ್‌ಗಳು, 28 ವಿಧಾನಸಭಾ ಕ್ಷೇತ್ರಗಳೇನಿವೆ ಅದರಂತೆ ಬೆಂಗಳೂರು ಒಟ್ಟಾಗಿಯೇ ಇರುತ್ತದೆ, ಆದರೆ ಆಡಳಿತದ ದೃಷ್ಟಿಯಿಂದ ಅದನ್ನು divide ಮಾಡಲಾಗುತ್ತದೆ ಎಂದಷ್ಟೇ ನಾವು ಹೇಳುತ್ತಿದ್ದೇವೆ. ಬೆಂಗಳೂರು ಒಟ್ಟಾಗಿಯೇ ಇರುತ್ತದೆ, ಅದು ಎಲ್ಲಿ ಹೋಗುತ್ತದೆ?

**(1–30 ಗಂಟೆ)**

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, 3 ಜನ ಮೇಯರ್ ಇಲ್ಲ, 3 ಜನ ಉಪ ಮೇಯರ್ ಇಲ್ಲ, 3 ಸ್ಥಾಯಿ ಸಮಿತಿಗಳಿಲ್ಲ. ನೀವು ಮೂರು ವಿಭಾಗವಲ್ಲ, ನಾಲ್ಕು ವಿಭಾಗ ಮಾಡಿ. 4 ಜನ ಸೀನಿಯರ್ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿ. ಒಬ್ಬ Chief Commissioner ಮಾಡಿ, ನಾಲ್ಕು ಜನ Commissioner ಮಾಡಿ. ಅವರ ಮೇಲೆ ಚಾಟಿ ತೆಗೆದುಕೊಳ್ಳಿ. ಮೇಯರ್ ಇದನ್ನು Mayor-*in-Council* (MIC) ಮಾಡುವುದಕ್ಕೆ ಆಗಲಿಲ್ಲವೆಂದರೆ ಬಾಂಬೆಯಲ್ಲಿ ಇರುವಂತೆ ಎರಡೂವರೆ ವರ್ಷ, ಎರಡೂವರೆ ವರ್ಷದಂತೆ ಕೊಡಿ. ನಮಗೆ ಕೆಂಪೇಗೌಡರ ಕನಸಿನ ಬೆಂಗಳೂರು ಒಂದೇ ಆಗಿರಬೇಕು. ಆ ಬೆಂಗಳೂರಿಗೆ ಎಲ್ಲೋ ಒಂದುಕಡೆ ಇನ್ನೊಬ್ಬರ ಹೆಸರನ್ನು ತರುವಂಥದ್ದು ಬೇಡ. ನೀವು ಆಡಳಿತದ ದೃಷ್ಟಿಯಿಂದ ಏನು ಬೇಕಾದರು ಮಾಡಿ. We are prepared.

**ಶ್ರೀ ರಾಮಲಿಂಗಾರೆಡ್ಡಿ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಕೆಂಪೇಗೌಡರು ನಾಲ್ಕು ಗೋಪುರ ಕಟ್ಟಿದರು. ಆ ಗೋಪುರವನ್ನು ಈಗಲೂ ಸಹ ಗಡಿಗೋಪುರವೆಂದೇ ಕರೆಯುವುದು. ಆ ಗೋಪುರವನ್ನು ಮೀರಿ ಹೊರಗಡೆ ಹೋಗಬಾರದೆಂದು ಕೆಂಪೇಗೌಡರು ಕನಸು ಕಂಡಿದ್ದರು. ಆದರೆ ಇವತ್ತಿನ ದಿವಸ ಆ ಪರಿಸ್ಥಿತಿ ಇದೆಯೇ? ಇವತ್ತಿನ ದಿವಸ ಬೆಂಗಳೂರು ನಾಲ್ಕುನೂರರಷ್ಟು ಬೆಳೆದುಬಿಟ್ಟಿದೆ. ಇತ್ತಕಡೆ ಆನೇಕಲ್ಲಿನವರೆಗೂ ಹೋಗಿದೆ, ಅತ್ತಕಡೆ ನೆಲಮಂಗಲದವರೆಗೂ ಹೋಗಿದೆ. 2001 ರಿಂದ 2006ರವರೆಗೂ 17,802 ಕೋಟಿ ರೂಪಾಯಿಗಳು ಕೇವಲ ರಸ್ತೆಗಾಗಿ ಖರ್ಚಾಗಿದೆ ಎಂದು ಹೇಳುತ್ತಿದ್ದೀರಿ. ನೀವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಅಕ್ರಮಗಳೇನಾದರು ನಡೆದಿದ್ದರೆ ಅದರ ಬಗ್ಗೆ ಏಕೆ ತನಿಖೆಯನ್ನು ಮಾಡಿಸಲಿಲ್ಲ? ಆಗ ನಿಮ್ಮದೇ ಸರ್ಕಾರವಿತ್ತು ಆದರೂ ಏಕೆ ತನಿಖೆಯನ್ನು ಮಾಡಿಸಲಿಲ್ಲ? ಒಂದು ವೇಳೆ ಈಗೇನಾದರು ಅಕ್ರಮಗಳು ನಡೆದಿದ್ದರೆ ಅದರ ಬಗ್ಗೆ ವಿವರಗಳನ್ನು ಕೊಡಿ ನಾನು ಅದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇನೆ.

**ಶ್ರೀ ವಿ. ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರು ಹೇಳುವುದನ್ನು ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ HUDCO (Housing and Urban Development Corporation Limited) ಮತ್ತು KUIDFCL (Karnataka Urban Infrastructure Development and Finance Corporation Limited) ಎಂದು ಇದೆ. ಸುಮಾರು 1,429 ಕೋಟಿ ರೂಪಾಯಿಗಳನ್ನು 2001–2007ರವರೆಗೆ ತೆಗೆದುಕೊಳ್ಳುತ್ತಾರೆ. ಅದು 2,450 ಕೋಟಿ ರೂಪಾಯಿಗಳಾಗಿದೆ. ಬಿಜೆಪಿ ಸರ್ಕಾರದ ಆಡಳಿತ ಇದ್ದಂತಹ ಸಂದರ್ಭದಲ್ಲಿ 9,000 ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದಾರೆಂದು ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹೇಳುತ್ತಿದ್ದಾರೆ. ಅದರಲ್ಲಿ ಈ 2,500 ಕೋಟಿ ರೂಪಾಯಿಗಳು ಸಹ ಸೇರಿಕೊಂಡಿದೆ. ಅವರ ಉತ್ಸಾಹಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಮೇಯರ್, ಉಪ ಮೇಯರ್ ಇರಬಹುದು ಸ್ಥಾಯಿ ಸಮಿತಿ ಇರಬಹುದು, ಕಾರ್ಪೋರೇಟರ್‌ಗಳು ಇರಬಹುದು. ಯಾವುದೇ ಪಕ್ಷದವರು ಇರಬಹುದು. ನಾನೂ ಕೂಡ ಎರಡು ಸಲ ನಗರಪಾಲಿಕೆ ಸದಸ್ಯನಾಗಿದ್ದೆ. ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಮಹಾಪೌರರಿಗೆ ಮೀಟಿಂಗ್‌ನಲ್ಲಿ ಸೂಚನೆ ಕೊಡುವುದು ಹಾಗೂ ಸ್ಥಾಯಿ ಸಮಿತಿಗಳಿಗೆ ಹೋಗುವಂತಹ ಕಡತಗಳನ್ನು ಆದೇಶ ಮಾಡುವಂತಹ ಅಧಿಕಾರ ಇದೆಯೇ ಹೊರತು ಅದು ಬಿಟ್ಟರೆ ಅವರಿಗೆ ಯಾವುದೇ ಅಧಿಕಾರ ಇಲ್ಲ. ಅಂದರೆ ಅವರು ಉತ್ಸವ ಮೂರ್ತಿಯಂತೆ ಇರುತ್ತಾರೆ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ಅಧಿಕಾರಿಗಳು ಯಾರು? ನಮ್ಮ

ಸರ್ಕಾರ ಇದ್ದಾಗ ನಮ್ಮ ಪರ ಇರುತ್ತಾರೆ, ನಿಮ್ಮ ಸರ್ಕಾರವಿದ್ದಾಗ ನಿಮ್ಮ ಪರ ಇರುತ್ತಾರೆ. ಯಾರ ಮನೆಗೆ ಬೇಕಾದರು ಸುತ್ತಾಡುವಂತಹ ವ್ಯವಸ್ಥೆಯನ್ನು ಬೆಳೆಸಿಕೊಂಡಿರುವಂಥವರು.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಮೇಯರ್ ಬಗ್ಗೆಯಾಗಲಿ, ಉಪ ಮೇಯರ್ ಬಗ್ಗೆಯಾಗಲಿ ಅಥವಾ ಕಾರ್ಪೋರೇಟರ್‌ಗಳ ಬಗ್ಗೆಯಾಗಲಿ ಎಲ್ಲಿಯೂ ಸಹ ಮಾತನಾಡಿಲ್ಲ. ನಾನು ವ್ಯವಸ್ಥೆ ಬಗ್ಗೆಯಷ್ಟೇ ಹೇಳಿದ್ದು. ವ್ಯವಸ್ಥೆಯಲ್ಲಿ ಈ ರೀತಿ ಆಗಿದೆ ಎಂದು ಹೇಳಿದ್ದೇ ವಿನಃ ಯಾರ ಮೇಲೂ ಅಲಿಗೇಶನ್ ಮಾಡುತ್ತಿಲ್ಲ. ಒಂದು ವೇಳೆ ಯಾವುದಾದರು ಅಕ್ರಮ ನಡೆದಿದ್ದರೆ ಅದರ ಬಗ್ಗೆ ವಿವರಗಳನ್ನು ಕೊಟ್ಟರೆ ನಾನು ಈಗಲೂ ಅದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇನೆ. ಬಿಬಿಎಂಪಿಯಲ್ಲಿ ಅಕ್ರಮ ನಡೆದಾಗ ನಿಮಗೆ ಅವಕಾಶ ಸಿಕ್ಕಿದ್ದಾಗ ನೀವು ಏಕೆ ತನಿಖೆ ಮಾಡಿಸಲಿಲ್ಲ? ಏಕೆ ಬಿಟ್ಟಿರಿ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, 1952ರಲ್ಲಿ ಬೆಂಗಳೂರು ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 1,534 ಅತ್ಯಮೂಲ್ಯ ಸ್ಥಿರ ಆಸ್ತಿಗಳಿದ್ದವು. ಆದರೆ ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಿರಾಸ್ತಿಗಳ ಸಂಖ್ಯೆ ಕೇವಲ 598. 1952 ರಿಂದ 2007ರವರೆಗೆ 936 ಸ್ಥಿರಾಸ್ತಿಗಳನ್ನು ಮಾರಾಟ ಮಾಡಿದ್ದಾರೆ. 1,534 ಸ್ಥಿರಾಸ್ತಿಗಳಲ್ಲಿ 598 ಸ್ಥಿರಾಸ್ತಿಗಳು ಮಾತ್ರ ಉಳಿದಿವೆ. 2007ರವರೆಗೂ 936 ಸ್ಥಿರಾಸ್ತಿಗಳನ್ನು ಬೇಕಾಬಿಟ್ಟಿ ಕೇಳಿದಂತೆ ಕೊಟ್ಟಿದ್ದಾರೆ. ಅದಕ್ಕೇನು ಬೆಲೆಯೇ ಇಲ್ಲ. ಅದು ಆದಮೇಲೆ 2001 ರಿಂದ 2006ರವರೆಗೆ 152 ಆಸ್ತಿಗಳನ್ನು ಪರಭಾರೆ ಮಾಡಿದ್ದಾರೆ. ಸುಮಾರು 20,000 ಕೋಟಿ ರೂಪಾಯಿಗಳ ಆಸ್ತಿ ಹೋಗಿದೆ. 2002 ರಿಂದ 2003ರಲ್ಲಿ ಸುಮಾರು 150 ರಿಂದ 200 ಕೋಟಿರೂಪಾಯಿ ಬೆಲೆ ಬಾಳುವಂತಹ ಆಸ್ತಿಯನ್ನು ಕೇವಲ 74 ಕೋಟಿ ರೂಪಾಯಿಗೆ ಕೊಟ್ಟಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ:–** ಆಗ ನೀವು ಸಹ ನಮ್ಮ ಜೊತೆಯಲ್ಲಿಯೇ ಇದ್ದಿರಿ ಅಲ್ಲವೆ?

**ಶ್ರೀ ವಿ. ಸೋಮಣ್ಣ:–** ಹೌದು ಆಗ ನಿಮ್ಮ ಜೊತೆಯಲ್ಲಿಯೇ ಇದ್ದೆವು. ನಾನೇನಾದರು ಇಲ್ಲವೆಂದು ಹೇಳಿದ್ದೇನೆಯೆ? ಆದರೆ ಆಗಿರುವಂತಹ ಅವ್ಯವಹಾರವನ್ನು ಗಮನಕ್ಕೆ ತರುತ್ತಿದ್ದೇನೆ. ಅಂತಹ ಕಾಲದಲ್ಲಿ ನೀವು ಮಹಾನಗರ ಪಾಲಿಕೆಯನ್ನು ವಿಭಜನೆ ಮಾಡಲಿಲ್ಲ. ಇವತ್ತು ವಿಭಜನೆ ಮಾಡುವುದಕ್ಕೆ ಹೋಗುತ್ತಿದ್ದೀರಲ್ಲ ಎಂದು ನಾನು ಕೇಳುತ್ತಿರುವುದು.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಾನು ಹೇಳುವಂತಹ ವಿಷಯ ನಿಜವಿದ್ದರೆ ನೀವು ಒಪ್ಪಿಕೊಳ್ಳಿ, ಮಾನ್ಯ ಸೋಮಣ್ಣನವರ ಪ್ರಕಾರ ಬೆಂಗಳೂರಿನಲ್ಲಿ ಸಾವಿರಾರು ಪ್ರಾಪರ್ಟಿಗಳನ್ನು ಸರ್ಕಾರ ಲೀಸ್‌ಗೆ ಕೊಟ್ಟಿದೆ. ಅದು 1 ರೂಪಾಯಿಗೆ, 5 ರೂಪಾಯಿಗೆ ಎಕರೆಗಟ್ಟಲೆ ಲೀಸ್‌ಗೆ ಕೊಟ್ಟಿದ್ದಾರೆ. ನಾನು

ಇಲ್ಲವೆಂದು ಹೇಳಲಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದಲೂ ಲೀಸ್‌ಗೆ ಕೊಡುತ್ತಾ ಬಂದಿದ್ದಾರೆ. 5 ರೂಪಾಯಿಗೆ, 10 ರೂಪಾಯಿಗೆ 100 ರೂಪಾಯಿಗೆ ಲೀಸ್ ಕೊಟ್ಟಿದ್ದಾರೆ. ಮಾನ್ಯ ಎಸ್.ಎಂ. ಕೃಷ್ಣಾರವರ ಕಾಲದಲ್ಲಿ ಒಂದು ತೀರ್ಮಾನ ತೆಗೆದುಕೊಂಡರು. ಏನೆಂದರೆ, ಹೇಗಿದ್ದರು ನಾವು ಲೀಸ್‌ಗೆ ಕೊಟ್ಟಿರುವ ಪ್ರಾಪರ್ಟಿಯಿಂದ 5 ರೂಪಾಯಿ 10 ರೂಪಾಯಿ 100 ರೂಪಾಯಿ ಸರ್ಕಾರಕ್ಕೆ ಬರುತ್ತದೆ. ಅದರ ಬದಲು ಮಾರುಕಟ್ಟೆಯ ಬೆಲೆಗೆ ಆ ಭೂಮಿಯನ್ನು ಮಾರಿಬಿಡೋಣವೆಂದು ಆಗ ತೀರ್ಮಾನ ತೆಗೆದುಕೊಂಡರು. ಆಗ ಮಾರ್ಕೆಟ್ ವ್ಯಾಲ್ಯೂ ಏನಿತ್ತು ಆ ವ್ಯಾಲ್ಯೂಗೆ ಕೊಟ್ಟಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಆಗ ಮಾನ್ಯ ವಿ. ಸೊಮಣ್ಣನವರು ನಮ್ಮ ಜೊತೆಯಲ್ಲಿಯೇ ಇದ್ದರು. ಅವರು ಇದಕ್ಕೆ ಭಾಗಿಯಾಗಿದ್ದಾರೆ. ನಾವೇನು ಬೇಕಾಬಿಟ್ಟಿ ಮಾರಿಲ್ಲ, ಗೈಡೆನ್ಸ್ ವ್ಯಾಲ್ಯೂಗೆ ಮಾರಾಟ ಮಾಡಿದ್ದಾರೆ. ಈಗಲೂ ಸಹ ನಮಗೆ ಇರುವಂತಹ ಪ್ರಾಪರ್ಟಿಯಿಂದ ಬರುತ್ತಿರುವಂತಹ ಆದಾಯ ಎಷ್ಟೆಂದರೆ 50 ರೂಪಾಯಿ 100 ರೂಪಾಯಿ ಬರುತ್ತಿದೆ. ಈಗ ಇರುವಂತಹ 598 ಪ್ರಾಪರ್ಟಿಗಳಿಂದ ನಮಗೆ ಕೇವಲ 10 ಲಕ್ಷ ರೂಪಾಯಿ ಆದಾಯವು ಸಹ ಬರುವುದಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ಇಷ್ಟೆಲ್ಲಾ ಹೇಳಿದರೂ ಸಹ ಐದು ವರ್ಷ ಬಿಜೆಪಿ ಸರ್ಕಾರ ಇತ್ತು ಎನ್ನುವ ಒಂದೇ ದೃಷ್ಟಿಯಿಂದ, ಆಗ ನಮ್ಮ ಬಳಿ ಕಠಾರಿಯಾ ಆಗಲಿ ಕತ್ತಿ ಗುರಾಣಿಯಾಗಲಿ ಇರಲಿಲ್ಲ. ನಿಮ್ಮಲ್ಲಿ ಎಂ.ಡಿ. ಇದ್ದವರನ್ನು ಕರೆದುಕೊಂಡು ಬಂದು BMTF ನವರಿಂದ ಇಂತಹ ತಪ್ಪುಗಳಾಗಿದೆ, ಅದನ್ನು ಸರಿ ಮಾಡಿ ಎಂದು ಹೇಳದೆ ಕಠಾರಿಯನ್ನು ಹಿಡಿದುಕೊಂಡು ಬಂದು ಅಂದರೆ ಕತ್ತಿಗೆ ಸಾಣೆಯನ್ನೇ ಹಿಡಿಸದೆ 198 ಜನರಿಗೆ ಹೊಡಿ ಎಂದರೆ ಹೇಗಾಗುತ್ತದೆ? ಇಂತಹ ಅನ್ಯಾಯ ಕೆಲಸವನ್ನು ಮಾಡಿ ನಾಲ್ಕು ದಿವಸ ಮುಂಚೆ ಸೂಪರ್‌ಸೀಡ್ ಮಾಡುತ್ತೀರಲ್ಲ ಇದು ಯಾವ ನ್ಯಾಯ? ಬೇರೆಯವರು ಇದ್ದರೆ ಏನಾದರು ಹೇಳಬಹುದಾಗಿತ್ತು ಆದರೆ ಮಾನ್ಯ ರಾಮಲಿಂಗಾರೆಡ್ಡಿ ಇದ್ದುಕೊಂಡು ಈ ರೀತಿ ಮಾಡಿದ್ದೀರಲ್ಲ. ಇಲ್ಲಿ ಕಠಾರಿನೂ ಇಲ್ಲ, ಕತ್ತಿನೂ ಇಲ್ಲ, ಗುರಾಣಿನೂ ಇಲ್ಲ. ಅಲ್ಲಿ ಏನೇನು ಉಳಿದಿಲ್ಲ.

ಮಾನ್ಯ ಸಭಾಪತಿಯವರೇ, ದಿನಾಂಕ: 28/1/2015ರಲ್ಲಿ ಇನ್ನು ಮುಂದೆ ನಗರದಲ್ಲಿ ಯಾವುದೇ ಜಾಹಿರಾತು ಪಲಕಗಳನ್ನು ಹಾಕಬಾರದೆಂದು ಮಹಾನಗರ ಪಾಲಿಕೆ ಒಂದು ನಿರ್ಣಯ ಮಾಡಿ ಇದಕ್ಕೆ ಸರ್ಕಾರ ಅನುಮತಿ ಕೊಟ್ಟರೆ ಇರುವಂತಹ ಎಲ್ಲಾ ಜಾಹಿರಾತು ಫಲಕಗಳನ್ನು ಕಿತ್ತಾಕುತ್ತೇವೆಂದು ಹೇಳಿದ್ದರಲ್ಲ ಇವತ್ತಿನವರೆಗೂ ಸರ್ಕಾರ ಅದನ್ನು ಕ್ಲಿಯರ್ ಮಾಡಿದೆಯೇ? ಏತಕ್ಕೆ ನೀವು ಅವರ ಮೇಲೆ ಗದಾಪ್ರಹಾರ ಮಾಡುತ್ತಿದ್ದೀರಿ? ಮಾಡಿ ನಾನು ಬೇಡವೆಂದು ಹೇಳುವುದಿಲ್ಲ. ಏನು ಬೇಕಾದರು ಮಾಡಿ ಅವರ ಅವಧಿಯು ಮುಗಿದು ಹೋಗಿದೆ. "ಗೋಡಹೈ, ಮೈದಾನ್ ಹೈ" ಕಾನೂನಿನಲ್ಲಿ ನೀವು ನಗರದ

ಮೂಲಭೂತ ಸೌಕರ್ಯಗಳ ಬೆಳವಣಿಗೆಯ ಬಗ್ಗೆ, ನಗರದ ಸರ್ವಾಂಗೀಣ ಅಭಿವೃದ್ಧಿಗೆ, ಯಾವ ರೀತಿಯಾದರು ಮಾಡಿ. ಅನೇಕ ಮಹನೀಯರು ಈ ನಗರಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ, ನಾಡಪ್ರಭು ಕೆಂಪೇಗೌಡರ ಇತಿಹಾಸವನ್ನು ಮುಂದಿನ ಪೀಳಿಗೆಯವರಿಗೆ ಪರಿಚಯಿಸುವಂತಹ ಕೆಲಸ ಮಾಡಿ ನಾವು ಬೇಡವೆಂದು ಹೇಳುವುದಿಲ್ಲ. ಚೆನ್ನೈ ನಗರಪಾಲಿಕೆ, ನಗರದಲ್ಲಿ ಯಾವುದೇ ಜಾಹಿರಾತುಗಳ ಫಲಕ ಹಾಕಬಾರದೆಂದು ನಿಷೇಧ ಮಾಡಿತು. ಈ ರೀತಿ ನಿಷೇಧ ಮಾಡಿದ ನಂತರ ಕೇವಲ ಒಂದು ತಿಂಗಳಿನಲ್ಲಿಯೇ ಇದ್ದಂತಹ ಸಾವಿರಾರು ಬೋರ್ಡುಗಳನ್ನು ತೆಗೆದುಹಾಕಿ ಒಂದು ರೀತಿ ಕಲರ್‌ಫುಲ್ ಸಿಟಿಯನ್ನಾಗಿ ಮಾಡಿದ್ದಾರೆ. ಇಂತಹ ಕೆಲಸವನ್ನು ನೀವು ಮಾಡಿದರೆ ನಿಮ್ಮ ಜೊತೆ ಪಕ್ಷಾತೀತವಾಗಿ ನಾವೆಲ್ಲರೂ ಕೈ ಜೋಡಿಸುತ್ತೇವೆ. ಇದನ್ನು ಒಂದು ಉದಾಹರಣೆಯಾಗಿ ಇಟ್ಟುಕೊಂಡು ಕೆಲಸ ಮಾಡಿ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಅನಧಿಕೃತ ಬೋರ್ಡುಗಳನ್ನು ತೆಗೆಯುವುದಕ್ಕೆ ನಮ್ಮ ಪರ್ಮಿಶನ್ ಏಕೆ ಬೇಕು?

**ಶ್ರೀ ವಿ. ಸೋಮಣ್ಣ:–** ಹಿಂದಿನಿಂದ ಇದು ಇರಲಿಲ್ಲವೆ?

**ಶ್ರೀ ರಾಮಲಿಂಗಾರೆಡ್ಡಿ:–** ಜಾಸ್ತಿಯಾಗಿರುವುದು ಈಗಲೇ. ಕಾರ್ಪೋರೇಶನ್‌ನಲ್ಲಿ ರೆಗ್ಯುಲೇಶನ್ ಮಾಡಿರುವುದು ಅಧಿಕೃತ ಜಾಹಿರಾತುಗಳನ್ನು ತೆಗೆಯುವುದು ಬೇಡ, ಅನಧಿಕೃತ ಜಾಹಿರಾತುಗಳನ್ನು ತೆಗೆಯಬೇಕೆಂದು ಹೇಳಿದ್ದಾರೆ. ಅದಕ್ಕೆ ನಮ್ಮ ಪರ್ಮಿಶನ್ ಏಕೆ ಬೇಕು? ಅದಕ್ಕೆ ಪರ್ಮಿಶನ್ ಬೇಕಾಗಿಲ್ಲ. ಅದರ ಅವಶ್ಯಕತೆನೇ ಇಲ್ಲ. ಹೈಕೋರ್ಟ್ ಹೇಳಿದೆ, ಲೋಕಾಯುಕ್ತ ಹೇಳಿದ್ದಾರೆ ಯಾರು ಎಷ್ಟೇ ಹೇಳಿದರು ಅನಧಿಕೃತ ಬೋರ್ಡುಗಳನ್ನು ತೆಗೆಯುವುದಿಲ್ಲ. ಅಧಿಕೃತವಾಗಿರುವಂತಹ ಜಾಹಿರಾತುಗಳನ್ನು ತೆಗೆಯಬೇಕಾದರೆ ಸರ್ಕಾರದ ಅನುಮತಿ ಬೇಕು, ಅನಧಿಕೃತವಾಗಿರುವಂಥದ್ದಕ್ಕೆ ಅನುಮತಿ ಬೇಕಾಗಿಲ್ಲ. ಈ ರೀತಿ ಅನಧಿಕೃತವಾಗಿರುವಂತಹ ಜಾಹಿರಾತುಗಳು ಸುಮಾರು 20 ಸಾವಿರದಷ್ಟು ಇದೆ.

**ಸಭಾಪತಿಯವರು:–** ಮಾನ್ಯ ಸೋಮಣ್ಣನವರೆ, ಊಟಕ್ಕೆ ಮುಂಚೆ ನೀವು ನಿಮ್ಮ ಮಾತನ್ನು ಮುಗಿಸಿದರೆ ಇನ್ನೊಬ್ಬರಿಗೆ ಅವಕಾಶ ಸಿಗುತ್ತದೆ. ನೀವು ಮುಗಿಸುವುದಿಲ್ಲವೆಂದರೆ ನನಗೆ ಕಷ್ಟವಾಗುತ್ತದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇನ್ನು 15 ನಿಮಿಷದಲ್ಲಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಾ?

**ಶ್ರೀ ವಿ. ಸೋಮಣ್ಣ:–** ಎರಡು ಗಂಟೆಯ ಒಳಗೆ ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ನೀವು ಮಾತನಾಡಿ ನನ್ನದೇನು ಅಭ್ಯಂತರವಿಲ್ಲ. ನಿಮ್ಮ ಪಕ್ಷದಿಂದ ಬಹಳ ಜನರ ಪಟ್ಟಿ ಬಂದಿದೆ. ಅಂದರೆ ಸುಮಾರು 12 ಜನರ ಪಟ್ಟಿ ಇದೆ. 12 ಜನರಿಗೆ ಅವಕಾಶ ಸಿಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಎಷ್ಟು ಜನರಿಗೆ ಸಿಗುತ್ತದೆಯೋ ಅಷ್ಟು ಜನರಿಗೆ ಅವಕಾಶ ಕೊಡುತ್ತೇನೆ.

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–**ಮಾನ್ಯ ಸಭಾಪತಿಗಳೇ, ಕೆಳಮನೆಯಲ್ಲಿ ನಮ್ಮ ವಿರೋಧ ಪಕ್ಷದ ಉಪ ನಾಯಕರಾದ ಅಶೋಕ್‌ರವರು, ನಮ್ಮ ಪಕ್ಷದ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ಜೆಡಿಎಸ್ ನಾಯಕರಾದ ಕುಮಾರಸ್ವಾಮಿಯವರು ಹಾಗೂ ಅನೇಕ ಸನ್ಮಿತ್ರರು ಸವಿಸ್ತಾರವಾಗಿ ಬೆಂಗಳೂರಿನ ಬಗ್ಗೆ ಮಾತನಾಡಿದ್ದಾರೆ. ನನಗೆ ಖೇದ ಮತ್ತು ನೋವಾಗಿದ್ದು ಏಕೆಂದರೆ ನಮ್ಮ ವೀರಪ್ಪ ಮೊಯಿಲಿಯವರು ಕೇಂದ್ರದಲ್ಲಿ ಸಚಿವರಾಗಿ ಕೆಲಸ ಮಾಡಿದವರು, ನಾನು 1999ರಲ್ಲಿ ಈ ರಾಜ್ಯದಲ್ಲಿ ಸಚಿವನಾಗಿದ್ದೆನು. ರಾತ್ರಿ 10–45ರ ಸಮಯದಲ್ಲಿ ಮೊಯಿಲಿಯವರು ನನಗೆ ದೂರವಾಣಿ ಕರೆ ಮಾಡಿ, ತಮಗೆ ಉಪದ್ರವ ನೀಡುತ್ತಿದ್ದೇನೆ ಮಾರಾಯರೆ ಎಂದು ಹೇಳಿದರು, ಪರವಾಗಿಲ್ಲ ಹೇಳಿ ಸರ್ ಎಂದಾಗ "ನೋಡಪ್ಪಾ ಕೋಲ್ಸ್ ಪಾರ್ಕ್ ಹತ್ತಿರ ಒಂದು ಅಂಡರ್ ಬ್ರಿಡ್ಜ್ ಇದೆ. ಅದನ್ನು ನಾನೇ ಮಾಡಿಸಿದ್ದು, ಆದರೆ ಅಲ್ಲಿ ಯಾವಾಗಲೂ ನೀರು ಜಿನುಗುತ್ತಾ ಇರುತ್ತದೆ. ಏನು ಮಾಡಿದರೂ ಅದನ್ನು ಸರಿ ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಏನಾದರೂ ಒಂದು ರೂಪಕೊಡಿ" ಎಂದು ಹೇಳಿದರು. ನಾನು ಬೆಳಿಗ್ಗೆ ಎದ್ದು ಅಂದಿನ ಕಾರ್ಪೊರೇಷನ್ ಕಮೀಷನರ್, ಚೀಫ್ ಇಂಜಿನಿಯರ್ ಬಿಡಿಎ ಕಮೀಷನರ್ ಎಲ್ಲರನ್ನು ಕರೆದುಕೊಂಡು ಬೆಳಿಗ್ಗೆ 6.15–6–30 ಸಮಯದಲ್ಲಿ ಅಲ್ಲಿಗೆ ಹೋದೆನು. ಅಲ್ಲಿ ಅದನ್ನೆಲ್ಲ ಪರಿವೀಕ್ಷಣೆ ಮಾಡುತ್ತಿದ್ದ ಸಮಯದಲ್ಲಿ ಮಾನ್ಯ ಸಭಾಪತಿಗಳೇ, ತಾವು ಒಂದು ವಿಚಾರವನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕು, ಅಲ್ಲಿ ವಾಕಿಂಗ್ ಮುಗಿಸಿಕೊಂಡು ಬಂದಂತಹ ಒಂದಿಬ್ಬರು ಹಿರಿಯರು ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ಕೇಳಿದರು. ಅದಕ್ಕೆ ನಮ್ಮ ಅಧಿಕಾರಿಗಳು ಉತ್ತರ ನೀಡಿದರು. ಆಗ ಅವರುಗಳು ಒಂದು ಮಾತನ್ನು ಹೇಳಿದರು. ಹಿಂದೆ ಇದ್ದಂತಹ ಮುಖ್ಯಮಂತ್ರಿಗಳು ಅಧಿಕಾರಿಗಳು ಸಹ ಅಲ್ಲಿಗೆ ಬಂದಿದ್ದರು. ಸುಮಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು, ಆದರೂ ಸಹ ನಿಮ್ಮ ಅಧಿಕಾರಿಗಳಿಗೆ ಇದನ್ನು ಸರಿಪಡಿಸಲು ಸಾಧ್ಯವಾಗಲಿಲ್ಲ. ಎಂತಹ ಕಾರ್ಪೊರೇಷನ್ ನಿಮ್ಮದು ಎಂದು ಹೇಳಿದರು. ಆಗ ನಾನು ನಮ್ಮ ಕಾರ್ಪೊರೇಷನ್ ಸರಿಯಿಲ್ಲ, ಇದಕ್ಕೆ ಏನು ಮಾಡಬೇಕೆಂದು ನೀವೇ ಹೇಳಿ ಎಂದು ಅವರಿಗೆ ಹೇಳಿದೆನು. ಇದು ಸತ್ಯವಾದ ಮಾತು. ನಾನು ಯಾವುದೇ ಒಂದು ಉತ್ಪ್ರೇಕ್ಷೆಗೆ ಒಳಗಾಗಿ ಈ ಮಾತುಗಳನ್ನು ಹೇಳುತ್ತಿಲ್ಲ. ಅವರು ಆ ಸಂದರ್ಭದಲ್ಲಿ ನಮಗೆ ಹೇಳಿದ್ದು ಏನೆಂದರೆ ನೋಡಿ ಇಲ್ಲಿ ನೀರು ಜಿನುಗುತ್ತಿದೆ, ಇದನ್ನು ಪೂರ್ತಿ ತೆಗೆದುಬಿಡಿ, ಒಂದು ತೂತು ಮಾಡಿ

ಅದರಲ್ಲಿ ಒಂದು ದೊಡ್ಡ ಪ್ಲಾಸ್ಟಿಕ್ ಪೈಪ್ ಅನ್ನು ಹಾಕಿಬಿಡಿ, ಒಂದು ಸಣ್ಣ ಚರಂಡಿಯನ್ನು ಮಾಡಿ, ಕೆಳಗಡೆ ಎಲ್ಲಿ ನೀರು ಹೋಗುತ್ತದೆ ಅದನ್ನು ಬಿಟ್ಟುಬಿಡಿ. ಅದರ ಮೇಲೆ ಕಾಂಕ್ರೀಟ್ ಮಾಡಿ ಎಂದು ಹೇಳಿದರು. ಆಗ ಈ ಕೆಲಸ ಮಾಡಲು ಮೆಗ್ರಿಕ್ ಎನ್ನುವ ಕಂಪನಿಗೆ ವಹಿಸಲಾಗಿತ್ತು. ಅವರಿಗೆ ಇದನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗಿರಲಿಲ್ಲ. ನಂತರ ಇದನ್ನು ಆ ಹಿರಿಯರು ಹೇಳಿದ ಹಾಗೆ 50–60 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಸರಿಪಡಿಸಲಾಯಿತು. ಅಲ್ಲಿಯವರೆಗೆ ಸರ್ಕಾರ ಅದಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಿತ್ತು, ಆದರೆ ಅದನ್ನು ಸರಿಪಡಿಸಲು ಸಾಧ್ಯವಾಗಲಿಲ್ಲ. ಈ ಕೆಲಸ ಆದ ಮೇಲೆ ಅದು ಇವತ್ತಿನವರೆಗೆ ಲಿಕೇಜ್ ಆಗಿಲ್ಲ. ಅದಕ್ಕೆ "ಹೊಸ ವೈದ್ಯರಿಗಿಂತ, ಹಳೇ ರೋಗಿ ಮೇಲು" ಎಂದು ಹೇಳುವುದು. ಇಂತಹ ಮಹನೀಯರು ಬೆಂಗಳೂರು ನಗರದಲ್ಲಿ ಸಾವಿರಾರು ಜನರಿದ್ದಾರೆ.

ಹಾಗೆಯೇ ರಾಜಮಹಲ್ ಕಡೆ ಬರುವಲ್ಲಿ ಇನ್ನೊಂದು ಬ್ರಿಡ್ಜ್ ಇದೆ. ಅಲ್ಲೊಂದು ದೊಡ್ಡ ಸ್ಯಾನಿಟರಿ ಲೈನ್ ಹಾಳಾಗಿತ್ತು. ಇದಕ್ಕೆ ನಾನು ಸಾಕಷ್ಟು ತಲೆಕೆಡಿಸಿಕೊಂಡಿದ್ದೆನು. ಕಡೆಗೆ ಜೆ.ಪಿ. ಶರ್ಮಾ ಎನ್ನುವವರು ಆಗ ನಮ್ಮ ಬಿ.ಡಬ್ಲ್ಯೂ.ಎಸ್.ಎಸ್.ಬಿ ಛೇರ್ಮನ್ ಆಗಿದ್ದರು. ಜನರೆಲ್ಲ ನನಗೆ ಹೇಳಿ ಹೇಳಿ ನನಗೆ ಬೈಯುತ್ತಿದ್ದರು, ನಾನು ಅವರಿಗೆ ಬೈಯುತ್ತಿದ್ದೆನು. ಇದನ್ನು ಹೇಗೆ ಸರಿಮಾಡುವುದೆಂದು ಯೋಚಿಸುತ್ತಾ ಒಂದು ದಿವಸ ಮಧ್ಯಾಹ್ನದ ಬಿಸಿಲಿನಲ್ಲಿ ನಿಂತಿದ್ದಾಗ ಒಬ್ಬ ನಿವೃತ್ತ ಅಧಿಕಾರಿ ಬಂದು "ರೀ, ನಿಮ್ಮ ತಲೆಯಲ್ಲಿ ಬುದ್ದಿ ಇದೆಯಾ, ದಿನಾ ಎಷ್ಟು ಖರ್ಚು ಮಾಡುತ್ತೀರಿ, ಹಣ ಹೊಡೆಯಲಿಕ್ಕೆ ಇದನ್ನೆಲ್ಲ ಮಾಡುತ್ತಿದ್ದೀರಾ? ನಾನ್‌ಸೆನ್ಸ್ ಎಂದು ಹೇಳಿದರು, ನಾನು ಸರ್ ಇದಕ್ಕೆ ನೀವೇ ಏನು ಮಾಡಬೇಕೆಂದು ಹೇಳಿ ಎಂದಾಗ, ಇದನ್ನು ಇಲ್ಲಿಂದ ಇನ್ನು 10 ಅಡಿ ಮುಂದಕ್ಕೆ ತೆಗೆದುಕೊಂಡು ಹೋಗಿ, ಅಲ್ಲೊಂದು ಪೈಪ್ ಹಾಕಿ, ಲೈನ್ ನೀಟಾಗಿ ಕೊಟ್ಟುಬಿಡಿ ಎಂದು ಹೇಳಿದರು. ಆಗ ಆ ಕೆಲಸಕ್ಕೆ ನಮಗೆ ಖರ್ಚಾಗಿದ್ದು ಬಹಳ ಕಡಿಮೆ. ಆದರೆ ಅದರ ರಿಪೇರಿಗೆ ಅದರ ನೂರು ಪಟ್ಟು ಹಣವನ್ನು ಖರ್ಚು ಮಾಡಲಾಗಿತ್ತು. ಇಂತಹ ದೊಡ್ಡದೊಡ್ಡ ಜ್ಞಾನಿಗಳನ್ನು, ವಿದ್ಯಾವಂತರನ್ನು ವಿಜ್ಞಾನಿಗಳನ್ನು ಮತ್ತು ತಜ್ಞರನ್ನು ನಮ್ಮಲ್ಲಿ ಇಟ್ಟುಕೊಂಡು ಹೀಗೆಲ್ಲಾ ಮಾಡುವುದು ಸರಿಯಲ್ಲ. ಈಗ ಯಾವುದೇ ಸಮಯ ನೀಡದೇ ಎಲ್ಲರನ್ನು ಕತ್ತಲ್ಲಿಟ್ಟು ಒಂದು ಸಮಿತಿ ಮಾಡಿ, ಅದರ ವರದಿಯನ್ನು ಪಡೆದು ತರಾತುರಿಯಲ್ಲಿ ಮಾಡುತ್ತಿರುವ ಈ ಕೆಲಸ. ಇದರ ಮೊದಲ ವರದಿಯನ್ನು ನಾನು ನೋಡಿದೆನು. ಇದು ಅವೈಜ್ಞಾನಿಕವಾಗಿರುವ ವರದಿ. ಈ ವರದಿಯ ಪೂರ್ಣ ಪ್ರಮಾಣದ ವ್ಯವಸ್ಥೆಯನ್ನು ನಾವು ನೋಡಿದ್ದೇ ಆದಲ್ಲಿ ನಾವು ಯಾವ ದೇಶಕ್ಕೆ ಹೋಗುತ್ತಿದ್ದೇವೆಂದು ನನಗನಿಸುತ್ತದೆ. ಈ ವ್ಯವಸ್ಥೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತಿದ್ದೇವೆ, ಇದರ ಸಾಧಕ ಬಾಧಕಗಳೇನು? ಬೆಂಗಳೂರು ಎಂದರೆ ಕೇವಲ ನಗರ ಪಾಲಿಕೆ ಮಾತ್ರವಲ್ಲ, ಬೆಂಗಳೂರು ಎಂದರೆ ಬೆಂಗಳೂರು ಜಲಮಂಡಳಿ, ಬೆಸ್ಕಾಂ, ಬಿಎಂಟಿಸಿ,

ಬಿಎಂಆರ್‌ಡಿಎ, ಬಿಡಿಎ ಎಲ್ಲವೂ ಬರುತ್ತದೆ. ಇದರ ಜೊತೆಯಲ್ಲಿ ಈಗ ಇರುವ ಬಿಡಿಎ ವ್ಯಾಪ್ತಿಯನ್ನು ಇನ್ನು 200 ಚ.ಮೀ ಮುಂದಕ್ಕೆ ಹೋಗಬೇಕೆಂದು ಈ ವರದಿಯಲ್ಲಿ ಹೇಳಲಾಗಿದೆ. ಇಂತಹ ಅವೈಜ್ಞಾನಿಕವಾಗಿರುವ ಒಂದು ವರದಿಯನ್ನು ಮುಂದಿಟ್ಟುಕೊಂಡು 125 ವರ್ಷಗಳ ಇತಿಹಾಸ ಹೊಂದಿರುವ, ದೇಶಕ್ಕೆ ತನ್ನದೇ ಆದ ಒಂದು ಕೊಡುಗೆಯನ್ನು ನೀಡಿರುವ ಇಂತಹ ಒಂದು ದೊಡ್ಡ ಸಂಸ್ಥೆಯನ್ನು ಹೀಗೆ ಮಾಡುತ್ತಿರುವುದು ಎಷ್ಟು ಸರಿ? ಚೆನ್ನೈ, ಬಾಂಬೆ ಕಲ್ಕತ್ತಾದಂತಹ ದೊಡ್ಡ ನಗರಗಳಲ್ಲಿಯೂ ಸಹ ಈ ರೀತಿ ಮಾಡಿರುವುದಿಲ್ಲ. ಆದರೆ ನಮ್ಮಲ್ಲಿ ಏಕೆ ಈ ವಕ್ರದೃಷ್ಟಿ? ಇಲ್ಲಿ ಯಾವ ಭಾಷೆಯ ಜನರು ವಾಸ ಮಾಡುತ್ತಿಲ್ಲ? ಯಾವ ಸಮಾಜದ ಜನರು ಇಲ್ಲಿ ವಾಸ ಮಾಡುತ್ತಿಲ್ಲ? 1580ರಲ್ಲಿ ಕೆಂಪೇಗೌಡರ ವಿಷನ್ ಪ್ರಕಾರ ನಾಲ್ಕು ಕಂಬಗಳನ್ನು ಹಾಕಿದ್ದರು ಮತ್ತು ಅವರ ಚಿಂತನೆಗಳೇ ಬೇರೆ ಇದ್ದವು. ಈಗ ಆ ಕಂಬಗಳ ಪ್ರದೇಶವನ್ನೇ ಒಂದು ಮಾಡಿ, ಉಳಿದಿದ್ದನ್ನು ಬೇರೆ ಮಾಡಿದರೆ ಜನರು ಬಿಡುವರೆ? ಇದನ್ನೆಲ್ಲ ಮಾಡಲು ಸಾಧ್ಯವೇ? ಈ ವಿಭಜನೆ ಯಾವ ಪುರುಷಾರ್ಥಕ್ಕೆ? ನಮ್ಮ ಮೇಲೆ ಕೋಪ ಇದ್ದರೆ ಹೇಳಿ, ನಾಳೆಯೇ ನಮ್ಮ ನಾಯಕರನ್ನು ಕರೆದುಕೊಂಡು ಬಂದು ನಿಮ್ಮ ಮುಖ್ಯಮಂತ್ರಿಗಳಿಗೆ ಒಂದು ಹೂವಿನ ಹಾರವನ್ನು ಹಾಕಿ ಈ ನಗರಪಾಲಿಕೆ ಒಂದಾಗಿ ಉಳಿಯುವುದಕ್ಕೆ ಒಂದು ರಾಮಲಿಂಗರೆಡ್ಡಿಯವರು ಮತ್ತೊಬ್ಬರು ನಮ್ಮ ಮುಖ್ಯಮಂತ್ರಿಗಳು ಎಂದು ಹೇಳುತ್ತೇವೆ.

ಮಾನ್ಯ ಸಭಾಪತಿಗಳೇ, ನಮ್ಮ ವಿನಮ್ರ ವಿನಂತಿ ಏನೆಂದರೆ 1983ರಲ್ಲಿ ನಾನು ನಗರಪಾಲಿಕೆಯ ಸದಸ್ಯನಾದೆನು, ಆಗ ರಾಮಲಿಂಗರೆಡ್ಡಿಯವರು ಸಹ ಸದಸ್ಯರಾಗಿದ್ದರು, ಅವರು ತಕ್ಷಣವೇ ಅಲ್ಲಿಂದ ಬಂದರು. ಆದರೆ ನಾನು ಎರಡು ಬಾರಿ ನಗರ ಪಾಲಿಕೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನನಗೆ ಭಾಷೆಯ ಸೂಕ್ಷ್ಮತೆಗಿಂತ ಹೆಚ್ಚಾಗಿ ಈ ನಗರದ ಜೀವನ ಮಟ್ಟದ ಬಗ್ಗೆ ಚಿಂತನೆ ಇದೆ, 9000 ಕ್ಕೂ ಹೆಚ್ಚು ಪ್ರತ್ಯೇಕ ಮನೆಗಳನ್ನು ನಮ್ಮ ನಗರಪಾಲಿಕೆಯಲ್ಲಿ ನಾವೆಲ್ಲರೂ ಸೇರಿ ಕಟ್ಟಿದ್ದೇವೆ. ಇನ್ನು 1–2 ಲಕ್ಷ ಮನೆಗಳನ್ನು ಕಟ್ಟಿದರೂ ಸಹ ನಗರವನ್ನು ಇನ್ನು ಉತ್ತಮದಾರಿಗೆ ತರಬೇಕಾಗಿದೆ. ಇನ್ನು ಬಡತನ ಸಾಕಷ್ಟಿದೆ. ಕಳೆದ ಸಲ ನಾವು 54,000 ಸ್ಲಮ್‌ಗಳನ್ನು ಕ್ಲಿಯರ್ ಮಾಡಿದ್ದೇವೆ. ಇನ್ನೂ 350–400 ಸ್ಲಮ್‌ಗಳು ನಮ್ಮ ನಗರದಲ್ಲಿವೆ. ಒಟ್ಟಾರೆಯಾಗಿ ಈ ನಗರ ರಾಷ್ಟ್ರದ ಜನರ ಮನ್ನಣೆಯನ್ನು ಗಳಿಸಿರುವ ನಗರ. ಈ ನಗರದ ಜನಸಾಂದ್ರತೆಗಿಂತ ಹೆಚ್ಚಾಗಿ ಇದು ಸಂಸ್ಕಾರದ ಸ್ವಾಭಿಮಾನದ ನಗರ ಇದು. ಇಲ್ಲಿ ಎಲ್ಲಾ ಜಾತಿ ಭಾಷೆಯವರು ಒಟ್ಟಾಗಿ ಬಾಳುತ್ತಿರುವ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಬೆಂಗಳೂರನ್ನು ವಿಭಜನೆ ಮಾಡುವ ಚಿಂತನೆ ಮತ್ತು ಈ ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಮುಂಚಿತವಾಗಿ ಸರ್ಕಾರ ನೂರು ಸಲ ಯೋಚನೆಯನ್ನು ಮಾಡಬೇಕು. ಒಂದು ಸಲ ಎಡವಿದ ಮೇಲೆ ಆ ಗಾಯವನ್ನು ವಾಸಿ ಮಾಡುವುದು ಕಷ್ಟ. ಆ ಗಾಯವನ್ನು ವಾಸಿ ಮಾಡುವುದು ಬೇಡ ಎಂದರೆ ತುಂಬಾ ಅನುಭವ ಇರುವ

ನಿಮ್ಮಂತಹವರಿಗೆ ಈ ನಗರದ ಹಿತದೃಷ್ಟಿಯ ಅವಶ್ಯಕತೆ ಇದೆ ಎನ್ನುವುದಾದರೆ ನಾಡಪ್ರಭುವಿನ ಹೆಸರನ್ನು ವಿದೇಶಗಳಲ್ಲಿ ಮತ್ತು ವಿಶ್ವ ಭೂಪಟದಲ್ಲಿ ಕಾಣುವುದಾದರೆ ಈ ವಿಭಜನೆ ಖಂಡಿತ ಬೇಡ. ಈ ವಿಧಾನಸೌಧವನ್ನು ಕಟ್ಟಿಸಿದ ಕೆಂಗಲ್ ಹನುಮಂತಯ್ಯನವರು ಒಂದು ದಿವಸ ಇದರ ಒಳಗೆ ಬರಲಿಲ್ಲ. ಅಂತಹ ಪುಣ್ಯಾತ್ಮರು ಕಟ್ಟಿರತಕ್ಕ ಈ ಬೆಂಗಳೂರು ನಗರವನ್ನು ವಿಶ್ವದ ಭೂಪಟದಲ್ಲಿ ಕೊಂಡೊಯ್ಯುವುದಕ್ಕೆ ನಿಮ್ಮ ಕಾಣಿಕೆ ಅಥವಾ ಬಳುವಳಿ ಏನಾದರೂ ಇದ್ದಲ್ಲಿ, ಯಾವುದೇ ಸರ್ಕಾರ ಆಗಲಿ ಏನಾದರೂ ಅಪಚಾರವನ್ನು ಮಾಡಿದ್ದಲ್ಲಿ ನಮ್ಮನ್ನು ಕೂಡ ಕಾನೂನಿನ ಚೌಕಟ್ಟಿಗೆ ತಂದು ಶಿಕ್ಷೆಯನ್ನು ಕೊಡಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ಬಿಟ್ಟು ಈ ಮಹಾನಗರ ಪಾಲಿಕೆಯನ್ನು 3–4 ಭಾಗಗಳನ್ನಾಗಿ ಮಾಡುವುದಾದರೆ ಮಾಡಿ, ಆಡಳಿತ ಅಧಿಕಾರದ ದೃಷ್ಟಿಯಿಂದ 8–5–5 ಎಷ್ಟಾದರೂ ಮಾಡಿ, ಅದರ ಬಗ್ಗೆ ನಮಗೆ ಬೇಸರಿಕೆ ಏನಿಲ್ಲ. ಆದರೆ ಅಧಿಕಾರವನ್ನು ನೀಡುವಾಗ ಮಹಾಪೌರರು ಹಾಗೂ ಉಪ ಮಹಾಪೌರರನ್ನು ಮುಂದಿಟ್ಟುಕೊಂಡು, ಸೋಲಿನ ಭೀತಿಯಿಂದ ಈ ರೀತಿ ಮಾಡುವುದು ಸರಿಯಲ್ಲ. ನಾವು ಗೆದ್ದರೆ ಏನೋ ಆಗುತ್ತದೆ ಎಂದುಕೊಳ್ಳಬಹುದು. ಆದರೆ ಏನು ಆಗುವುದಿಲ್ಲ. ಚುನಾವಣೆ ನಡೆದಾಗ ಸೋತವರು ಒಂದಷ್ಟು ದಿವಸ ಬೇಸರಿಕೆಯಲ್ಲಿದ್ದು, ಆನಂತರ ಗೆದ್ದವರಿಗೆ ನಮಸ್ಕಾರ ಹೊಡೆಯುತ್ತೇವೆ. ಇದು ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಇಲ್ಲಿ ಯಾರು ಯಾರಿಗೂ ಶತ್ರುಗಳಲ್ಲ ಹಾಗೂ ಮಿತ್ರರಲ್ಲ. ವಿಶಾಲವಾದ ತಳಹದಿ ಮೇಲೆ ನಿರ್ಮಾಣವಾಗಿರುವ ಈ ನಗರಕ್ಕೆ ಮೂಲಭೂತ ಸೌಲಭ್ಯವನ್ನು ಕೊಡಲು 8–10 ಸ್ಥಾಯಿ ಸಮಿತಿಗಳು ಇವೆ. ಇವುಗಳನ್ನು ಚುರುಕುಗೊಳಿಸಬೇಕಾಗುತ್ತದೆ. ತನ್ಮೂಲಕ ನಗರದ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡಬೇಕು ಎನ್ನುವುದಾದರೆ ಇವತ್ತಿನ ವ್ಯವಸ್ಥೆಯನ್ನು ಚುರುಕುಗೊಳಿಸಿ, ಆಡಳಿತಾತ್ಮಕವಾದ ವ್ಯವಸ್ಥೆಯಲ್ಲಿ ಬದಲಾವಣೆ ತನ್ನಿ. ಅದಕ್ಕೆ ಸಂಬಂಧಪಟ್ಟ ನುರಿತ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ಹಾಕಿ. ಚಾಟಿಯನ್ನು ಹಿಡಿದು ಕೆಲಸವನ್ನು ಮಾಡಬೇಕಾಗಿದೆ. ಇನ್ನು ಮುಂದೆ ಜನಪ್ರತಿನಿದಿಗಳು ಕೂಡಾ ಕಾನೂನಿನ ಚೌಕಟ್ಟಿನಲ್ಲಿ ಏನಾದರು ತಪ್ಪು ಮಾಡಿದರೆ ಅವರಿಗೂ ಶಿಕ್ಷೆಯನ್ನು ನೀಡುವಂತಹ ಕಾಯಿದೆಯನ್ನು ತನ್ನಿ. ಈ ಕೆಲಸವನ್ನು ಮಾಡಬೇಕೆ ವಿನಃ ಇವತ್ತು ತಂದಿರುವ ಕಾಯಿದೆಯನ್ನು ಯಾರು ಒಪ್ಪುವುದಿಲ್ಲ. ಈ ಕಾಯಿದೆ ಬೇಡ. ನಮ್ಮ ಮನಸ್ಸಿಗಿಂತ ಹೆಚ್ಚಾಗಿ ಇಡೀ ವಿಶ್ವದ ಮನಸ್ಸು ಈ ಬೆಂಗಳೂರಿನಲ್ಲಿ ಇದೆ. ಈ ವಿಶ್ವದ ಮನಸ್ಸನ್ನು ವಿಚ್ಛಿದ್ರಕಾರಿಗಳ ಕೈಗೆ ಕೊಡಬೇಡಿ. ರಾಜಧಾನಿಯಲ್ಲಿರುವ ಎಲ್ಲಾ ಭಾಷೆಯ, ವರ್ಗದ ಜನರ ಸೂಕ್ಷ್ಮತೆಗಳನ್ನು ರೋಡಿಗೆ ಬಿಟ್ಟ ಮೇಲೆ ಅಲ್ಲಿ ಆಗುವಂತಹ ಅನಾಹುತಕ್ಕೆ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಾರಣ ಎನ್ನುವ ಹಣೆಪಟ್ಟಿಯನ್ನು ಕಟ್ಟಿಕೊಳ್ಳುವ ಚಿಂತನೆ ನಿಮಗೆ ಇದ್ದರೆ ಯಾರ ಆಣೆಗೂ ಏನು ಮಾಡಲು ಆಗುವುದಿಲ್ಲ. ದೇವರು ನಿಮ್ಮನ್ನು ಕ್ಷಮಿಸುವುದು ಇಲ್ಲ. ಅದು ಆಗಬಾರದು ಎನ್ನುವುದಾದರೆ ದಯಮಾಡಿ ಇದನ್ನು ವಾಪಸ್ ತೆಗೆದುಕೊಳ್ಳಿ. ಬೇರೆ ರೀತಿಯಲ್ಲಿ

ಆಡಳಿತವನ್ನು ಸರಿಯಾದ ಮಟ್ಟದಲ್ಲಿ ತರಬೇಕು ಎನ್ನುವ ದೂರ ದೃಷ್ಟಿ ನಿಮಗೇನಾದರು ಇದ್ದರೆ, ಇಚ್ಛಾಶಕ್ತಿ ಇದ್ದರೆ ಅದನ್ನು ಪ್ರದರ್ಶನ ಮಾಡಿ. ತನ್ಮೂಲಕ ರಾಜ್ಯದ ಜನರಿಗೆ, ರಾಜಧಾನಿಗೆ ವಿಶ್ವದ ಭೂಪಟದಲ್ಲಿ ಅಭಿವೃದ್ಧಿ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನೀವು ಮಾಡಿರುವ ಈ ಕಾಯಿದೆಗೆ ಮೂರು ಕಾಸಿನ ಬೆಲೆ ಇಲ್ಲ. ಇದಕ್ಕೆ ಯಾರು ಬೆಲೆ ಕೊಡುವುದಿಲ್ಲ. ಬೆಲೆ ಇಲ್ಲದ ಈ ಕಾಯಿದೆಯನ್ನು ನಾನು ಕೂಡಾ ಹರಿದು ಹಾಕಬೇಕಾಗುತ್ತದೆ. ಇದನ್ನು ಯಾವ ಕಾರಣಕ್ಕೂ ಮಾಡಬೇಡಿ, ಇದು ನನ್ನ ವಿನಮ್ರ ವಿನಂತಿ. ಒಬ್ಬ ಬೆಂಗಳೂರಿನ ಪ್ರಿಯನಾಗಿ ಸಿದ್ದರಾಮಯ್ಯನವರ ಕೆಲಸನವನ್ನು ನಾನು ಹತ್ತಿರದಿಂದ ನೋಡಿರುವುದರಿಂದ, ಇವತ್ತು ಅವರ ತಲೆ ಕೆಡಿಸಿ ಪಾಪದ ದಿನಗಳಲ್ಲಿ ಮಾನ್ಯ ಸಿದ್ದರಾಮಯ್ಯನವರು ಖಳನಾಯಕರು, ರಾಜಧಾನಿಯನ್ನು ಮೂರು ಭಾಗಗಳಾಗಿ ಮಾಡಿ, ಭಾಷಾವಾರು ಪ್ರಾಂತ್ಯಗಳು ಯಾವರೀತಿ ನಿರ್ಮಾಣವಾಗುತ್ತವೆ ಅದೇ ರೀತಿ ಬೆಂಗಳೂರು ನಗರವನ್ನು ವಿಭಜನೆ ಮಾಡಿ ಬೆಂಗಳೂರನ್ನು ಛಿದ್ರಛಿದ್ರ ಮಾಡಿ, ಎ ಒನ್ ಸಿಟಿಯನ್ನು ಬಿ ಸಿಟಿಯನ್ನಾಗಿ ಬಿ ಸಿಟಿಯನ್ನು ಸಿ ಸಿಟಿಯನ್ನಾಗಿ ಮಾಡಿ, ಈ ಪಾಪದ ಕೂಸು ನಿಮ್ಮ ಮೇಲೆ ಬರಬಾರದು ಎನ್ನುವುದಾದರೆ ಇದನ್ನು ಹಾಗೆ ಇಟ್ಟುಕೊಳ್ಳಬೇಕು. ಬೆಂಗಳೂರು ಬೆಂಗಳೂರಾಗೇ ಇರಬೇಕು. ಬೆಂಗಳೂರನ್ನು ಒಡೆಯುವಂತಹ ಈ ಕಾಯಿದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿ, ನನಗೆ ಅವಕಾಶ ಕೊಟ್ಟಿದಕ್ಕಾಗಿ ಅಭಿನಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಇಂಧನ ಸಚಿವರಾದ ಡಿ.ಕೆ. ಶಿವಕುಮಾರ್‌ರವರು ಎಲ್ಲಾ ಶಾಸಕರನ್ನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನಕ್ಕೆ ಆಹ್ವಾನ ಮಾಡಿದ್ದಾರೆ. ಎಲ್ಲರೂ ಹೋಗಬೇಕು. ಸಭೆಯನ್ನು ಭೋಜನ ವಿರಾಮಕ್ಕಾಗಿ 3–00 ಗಂಟೆವರೆಗೆ ಮುಂದೂಡಲಾಗುತ್ತದೆ.

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1–53 ಗಂಟೆಗೆ ಮುಂದೂಡಲ್ಪಟ್ಟ**

**ಸದನವು ಪುನಃ 3–27 ಗಂಟೆಗೆ ಪ್ರಾರಂಭವಾಯಿತು)**

**(ಪೀಠದಲ್ಲಿ ಸಭಾಪತಿಯವರು ಉಪಸ್ಥಿತರಾದರು)**

**ಸಭಾಪತಿಯವರು:–** ಈಗ ವಿಧೇಯಕದ ಮೇಲಿನ ಚರ್ಚೆಯನ್ನು ಮುಂದುವರೆಸೋಣ. ಈಗ ಮಾನ್ಯ ಎಂ.ಆರ್. ಸೀತಾರಾಂರವರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ. ನೀವು ಪ್ರಾರಂಭ ಮಾಡುವುದಕ್ಕೆ ನಾನು ಅಡ್ಡ ಬಂದೆ ಎಂದು ತಿಳಿಯಬೇಡಿ. ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಮಾತನಾಡಬೇಕಾದ ತುಂಬಾ ಜನರ ಹೆಸರು ನನ್ನ ಬಳಿ ಇದೆ. 28 ಜನರ ಹೆಸರು ನನ್ನ ಬಳಿ ಇದೆ. ಅದರಲ್ಲಿ ಒಬ್ಬರು ಮಾತ್ರ ಮಾತನಾಡಿದ್ದಾರೆ. ಒಬ್ಬೊಬ್ಬರು 10 ನಿಮಿಷಗಳ ಕಾಲ ಮಾತನಾಡಿ ಮುಗಿಸಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. I leave it to you. ನಾನೇನು ಹೆಚ್ಚಾಗಿ ಮಧ್ಯದಲ್ಲಿ ಬಾಯಿ ಹಾಕುವುದಿಲ್ಲ.

**ಶ್ರೀ ಎಂ.ಆರ್. ಸೀತಾರಾಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸೋಮಣ್ಣನವರು ಒಬ್ಬರೆ ಸುಮಾರು ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ.

**ಸಭಾಪತಿಯವರು:–** ಎಲ್ಲರಿಗೂ ಎರಡೂವರೆ ಗಂಟೆಗಳ ಕಾಲ ಸಮಯವನ್ನು ಕೊಡುವುದಕ್ಕೆ ನನ್ನ ಹತ್ತಿರ ಅಷ್ಟು ಸಮಯವಿಲ್ಲ.

## ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2015 (ಮುಂದುವರೆದ ಚರ್ಚೆ)

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದಿಂದ ನಾನೇ ಮೊದಲನೆಯದಾಗಿ ಮಾತನಾಡುತ್ತಿರುವುದು. ಪ್ರಾರಂಭದಲ್ಲಿಯೇ ನೀವು ಈ ರೀತಿ ಹೇಳಿದರೆ ಕಷ್ಟವಾಗುತ್ತದೆ. ನಾವು ವಿಧೇಯಕದ ಪರವಾಗಿ ವಾದ ಮಾಡಬೇಕಾಗಿರುವುದರಿಂದ ವಿಸ್ತಾರವಾಗಿ ಮಾತನಾಡುತ್ತೇನೆ. ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವಿಧೇಯಕವನ್ನು ನಾನು ಸ್ವಾಗತಿಸುತ್ತಾ, ಈಗ ಸರ್ಕಾರ ಈ ಒಂದು ನಿಲುವಿಗೆ ಏಕೆ ಬಂದಿದೆ, ಇದರ ಕಳೆದ ಇತಿಹಾಸ ಇವೆಲ್ಲದರ ಬಗ್ಗೆ ನಾನು ವಿಸ್ತಾರವಾಗಿ ಮಾತನಾಡಬೇಕಾಗುತ್ತದೆ. ನಿನ್ನೆಯ ದಿವಸ ನನ್ನ ಮಿತ್ರರಾದ ಸೋಮಣ್ಣನವರು ಬೆಂಗಳೂರು ನಗರದಲ್ಲಿ ಬಹಳ ಹೆಚ್ಚಿನ ಅಭಿವೃದ್ಧಿ, ಪ್ರಗತಿ ಮಾಡಿರುವ ಕೆಲವು ಜನರ ಹೆಸರುಗಳನ್ನು ಅವರು ಪ್ರಸ್ತಾಪ ಮಾಡುತ್ತಾ ಲಕ್ಷ್ಮಣ್‌ರಾಯರು, ಬಾಲಸುಬ್ರಮಣ್ಯಂರವರು ಮತ್ತು ದಿಲೀಪ್‌ರಾವ್‌ರವರ ಹೆಸರುಗಳನ್ನು ಹೇಳಿದರು. ಆದರೆ ಇವರೆಲ್ಲರೂ ಆಡಳಿತಾಧಿಕಾರಿಗಳಾಗಿದ್ದರು. ಕೌನ್ಸಿಲ್ ನಡೆದಾಗ ಇವರೆಲ್ಲಾ ಆಡಳಿತವನ್ನು ಮಾಡುತ್ತಿದ್ದವರಲ್ಲ. ಕೌನ್ಸಿಲ್ ಇಲ್ಲದೇ ಇರುವಾಗ ಆಡಳಿತವನ್ನು ಮಾಡಿದವರು ನಮ್ಮ ಎಲ್ಲಾ ಆಡಳಿತಾಧಿಕಾರಿಗಳು. 1970ನೇ ಇಸವಿಯಿಂದ 2014ರವರೆವಿಗೂ ಸುಮಾರು 44 ವರ್ಷಗಳಲ್ಲಿ...

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಜಿ. ನಾರಾಯಣರವರು, ಕೆ.ಎಂ. ನಂಜಪ್ಪನವರು ಮತ್ತು ಜೆ. ಲಿಂಗಯ್ಯನವರು ಇವರೆಲ್ಲಾ ಮೇಯರ್‌ಗಳಾಗಿದ್ದರು.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಅವರಲ್ಲ. ನಿನ್ನೆಯ ದಿವಸ ಮಾನ್ಯ ಸೋಮಣ್ಣನವರು ಮಾತನಾಡುವಾಗ ಲಕ್ಷ್ಮಣ್‌ರಾಯರು, ಬಾಲಸುಬ್ರಮಣ್ಯಂರವರು ಮತ್ತು ದಿಲೀಪ್‌ರಾವ್‌ರವರ ಹೆಸರುಗಳನ್ನು ಹೇಳಿದರಲ್ಲಾ, ಅವರು ಆಡಳಿತಾಧಿಕಾರಿಗಳು, ಅವರು ಮೇಯರ್‌ಗಳಲ್ಲ. ಈ ಒಂದು ಅವಧಿಯಲ್ಲಿ ಅವರೂ ಸಹ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಸರ್ಕಾರ ಏಕೆ ಈ ಒಂದು ವಿಧೇಯಕವನ್ನು ಮಂಡಿಸುತ್ತಿದೆ, ಏಕೆ ಇದನ್ನು ಯೋಚನೆ ಮಾಡಿ ತಂದಿದ್ದೇವೆ ಎನ್ನತಕ್ಕಂಥಾದ್ದರ ಬಗ್ಗೆ ಬೆಳಕು ಚೆಲ್ಲಲು ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

(3–30 ಗಂಟೆ)

ಬೆಂಗಳೂರು ನಗರದಲ್ಲಿ ನಾನು, ಮಾನ್ಯ ಸೋಮಣ್ಣನವರು, ಮಾನ್ಯ ರಾಮಲಿಂಗಾರೆಡ್ಡಿಯವರು, ಜಾರ್ಜ್‌ರವರು ಎಲ್ಲರೂ ಶಾಸಕರಾಗಿ ಕೆಲಸವನ್ನು ಮಾಡಿದ್ದೇವೆ. ನಾನು ಸುಮಾರು 18–20 ವರ್ಷಗಳ ಕಾಲ ಶಾಸಕನಾಗಿ, ಸಕ್ರಿಯವಾಗಿ ಬೆಂಗಳೂರು ನಗರದ ಎಲ್ಲಾ ಆಗು–ಹೋಗುಗಳನ್ನು ನೋಡುತ್ತಿದ್ದೇನೆ. ಕಳೆದ 15 ವರ್ಷಗಳಿಂದ ಬೆಂಗಳೂರನ್ನು ನೋಡಿಕೊಂಡು ಬಂದರೆ ಯಾವ ರೀತಿಯಾಗಿ ಪ್ರಗತಿಯಾಗುತ್ತಿತ್ತು, ಯಾವ ರೀತಿಯ ನಿಯಂತ್ರಣವಿತ್ತು ಎಂಬುದು ಗೊತ್ತಾಗುತ್ತದೆ. ಈಗ 7–8 ವರ್ಷಗಳ ಕಾಲ ಎಲ್ಲಾ ನಿಯಂತ್ರಣವನ್ನು ಕಳೆದುಕೊಂಡು financial irregularity, financial indiscipline ಇವೆಲ್ಲವನ್ನು ನಾವು ನೋಡುತ್ತಿದ್ದೇವೆ. 2012ನೇ ಇಸವಿಯಲ್ಲಿ ನಾನು ಮೊದಲನೆಯ ಬಾರಿ ಈ ಮೇಲ್ಮನೆಗೆ ಸದಸ್ಯನಾಗಿ ಬಂದಾಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ತನಿಖೆಯನ್ನು ಮಾಡಿ ಎಂದು ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಗಲಾಟೆಯನ್ನು ಸಹ ಮಾಡಿದ್ದೇವೆ. ಅಂದರೆ ಪಕ್ಷಾತೀತವಾಗಿ ಮಾತನಾಡುವುದಾದರೆ ಪಕ್ಷಗಳಿಗಿಂತ ಇಲ್ಲಿರುವ ನಗರಸಭಾ ಸದಸ್ಯರು, ಶಾಸಕರಾಗಲಿ, ಇಲ್ಲಿರುವ ನಾವೆಲ್ಲರೂ ಸಹ ಏನು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು ಎಂದು ಒಂದು ಕಡೆ ನಾವು ಮಾತನಾಡುತ್ತೇವೆ. ಆದರೆ ಈ ವ್ಯವಸ್ಥೆಯಲ್ಲಿ ಅಧಿಕಾರಿಗಳು, ಗುತ್ತಿಗೆದಾರರು, ನಮ್ಮ ಜನಪ್ರತಿನಿಧಿಗಳು ಎಲ್ಲರೂ ಒಂದಾದಾಗ ಮಾತ್ರ ಇದು ಆಗುವುದಕ್ಕೆ ಸಾಧ್ಯವಾಗುತ್ತದೆ. ಕಳೆದ 2000 ರಿಂದ 2004ರವರೆವಿಗೂ ಬಿಬಿಎಂಪಿ ಬಜೆಟ್ ಇದ್ದುದು ವರ್ಷಕ್ಕೆ ಸುಮಾರು 1,200 ರಿಂದ 1,300 ಕೋಟಿ ರೂಪಾಯಿ. ನಾನು ಸುಮಾರು ಒಂಭತ್ತುವರೆ ವರ್ಷಗಳ ಕಾಲ ಮಲ್ಲೇಶ್ವರ ಕ್ಷೇತ್ರಕ್ಕೆ ಶಾಸಕನಾಗಿದ್ದೆ. 1999 ರಿಂದ 2008ರವರೆಗೆ ಅಂದರೆ ಒಂಭತ್ತು ವರ್ಷಗಳ ಕಾಲ ನನ್ನ ಕೈಯಲ್ಲಿ 114 ಕೋಟಿ ರೂಪಾಯಿ

ಮಾತ್ರ ಖರ್ಚಾಗುವುದಕ್ಕೆ ಸಾಧ್ಯವಾಯಿತು. ಈ 10 ವರ್ಷಗಳಲ್ಲಿ ಮಲ್ಲೇಶ್ವರದಲ್ಲಿರುವ ಅಂಡರ್‌ಪಾಸ್ ಇರಬಹುದು, ಯಶವಂತಪುರದಲ್ಲಿರುವ ರೇಲ್ ಓವರ್ ಬ್ರಿಡ್ಜ್ ಇರಬಹುದು, ನಮ್ಮ ಗೋಕುಲದಲ್ಲಿರುವ ರೇಲ್ ಓವರ್ ಬ್ರಿಡ್ಜ್, ಫ್ಲೈಓವರ್, ಸ್ಯಾಂಕಿ ಟ್ಯಾಂಕ್‌ನ ದೊಡ್ಡ ಪಾರ್ಕ್ ಮತ್ತು rejuvenation of Sankey Tank ಇವೆಲ್ಲವೂ ಸಹ ಇವತ್ತು ಸಾಕ್ಷಿಗಳಾಗಿ ನಿಂತಿವೆ. ಆದರೆ 2008-09, 2009-2010, 2010-2011 ಈ ಅವಧಿಯಲ್ಲಿ ಮಲ್ಲೇಶ್ವರ ಒಂದೇ ಕ್ಷೇತ್ರದಲ್ಲಿ ಖರ್ಚಾಗಿದ್ದು 497 ಕೋಟಿ ರೂಪಾಯಿ. ನಾನು ಕೇವಲ ಒಂದೇ ಕ್ಷೇತ್ರದ ಬಗ್ಗೆ ಮಾತನಾಡುತ್ತಿದ್ದೇನೆ. ಇದರ ಜೊತೆಗೆ ಈ ಕ್ಷೇತ್ರದಲ್ಲಿ ಆ ಮೂರು ವರ್ಷಕ್ಕೆ ಯಾವುದೇ ಒಂದು ಒಳ್ಳೆಯ ಪ್ರಾಜೆಕ್ಟ್ ಆಗಿಲ್ಲ. ಇದರಲ್ಲಿ ನಿರ್ವಹಣೆ ಒಂದನ್ನು ಬಿಟ್ಟರೆ, ಇತ್ತೀಚೆಗೆ ಸಿ.ವಿ. ರಾಮನ್ ಅಂಡರ್‌ಪಾಸ್ ಒಂದು ಆಗಿದೆ. ಅಂದರೆ ಆ ಮೂರು ವರ್ಷಗಳ ಅವಧಿಯಲ್ಲಿ ಯಾವುದೇ ಒಂದು ಯೋಜನೆ ಇಲ್ಲದೇ 500 ಕೋಟಿ ರೂಪಾಯಿ ಒಂದೇ ಕ್ಷೇತ್ರದಲ್ಲಿ ಖರ್ಚಾಗಿದೆ. ಇದೇ ತರಹ ರಾಜರಾಜೇಶ್ವರಿ ನಗರದಲ್ಲಿ 700 ಕೋಟಿ ರೂಪಾಯಿ, ದಾಸರಹಳ್ಳಿಯಲ್ಲಿ 700 ಕೋಟಿ ಮತ್ತು ಬೆಂಗಳೂರು ನಗರದಲ್ಲಿ ಹಾಗೂ ಇನ್ನು ಹಲವಾರು ಕ್ಷೇತ್ರಗಳಲ್ಲಿ 400, 500, 600 ಕೋಟಿ ರೂಪಾಯಿ ಖರ್ಚಾಗಿದೆ. ಈ ಎರಡು ವರ್ಷಗಳಲ್ಲಿ ಇಷ್ಟು ಹಣ ಖರ್ಚಾಗುವುದಕ್ಕೆ ಸಾಧ್ಯವಾಗುತ್ತದೆಯೇ? ಏಕೆಂದರೆ ನಾವು ಅಧಿಕಾರಿಗಳ ಮಧ್ಯದಲ್ಲಿ ಮಾತನಾಡುವಾಗ ಅವರು ಟೆಂಡರ್‌ಗಳನ್ನು ಮಾಡುತ್ತಾರೆ. ಅಧಿಕಾರಿಗಳು ಮಾಡುವ ಪ್ರೊಸೀಜರ್ಸ್‌ಗೆ ನಾವು ಶಾಸಕರುಗಳಿಗೆ ಸಾಕಾಗಿ ಬಿಡುತ್ತದೆ. ಆಗ ಅವರ ಹಿಂದೆ ಬಿದ್ದು ಕೆಲಸವನ್ನು ಮಾಡಿಸಿಕೊಳ್ಳಬೇಕಾಗಿರುವುದು ತಮಗೆ ಮತ್ತು ನಮಗೆಲ್ಲರಿಗೂ ಗೊತ್ತಿರುವಂಥ ವಿಷಯವಾಗಿದೆ. ಆದರೆ ಈ ಎರಡು ವರ್ಷಗಳ ಕಾಲದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣ ಖರ್ಚಾಗುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ? ಇದರ ಬಗ್ಗೆ ಮಹಾನಗರ ಪಾಲಿಕೆಯಲ್ಲಿರುವ ಟಿವಿಸಿಸಿ ಸಮಿತಿ ಒಂದು ವರದಿಯನ್ನು ಸಹ ಮಾಡಿ ಇಷ್ಟು gross misuse ಇದೆ ಎಂದು ಒಂದು ವರದಿಯೂ ಸಹ ಬಂದಿದೆ. ಇದರಲ್ಲಿ ನಿರಾಧಾರವಾಗಿ ಏನು ಹಣ ಖರ್ಚಾಗಿದೆ, ಯಾವುದೇ ರೀತಿಯ ಪ್ರೊಸೀಜರ್ಸ್ ಇಲ್ಲ, ಪಾರದರ್ಶಕ ಕಾಯ್ದೆಯನ್ನು ಅನುಸರಿಸಿಲ್ಲ ಮತ್ತು ಹಣಕ್ಕೆ accountability ಸಹ ಇಲ್ಲ. ನಾನು ಒಬ್ಬ ಆಯುಕ್ತರ ವಿಷಯವನ್ನು ಹೇಳುತ್ತೇನೆ. ಇದರಲ್ಲಿ ಹುಂಡಿ ಸಿಸ್ಟಂ ಎಂದು ಮಾಡುತ್ತಾರೆ. ಹುಂಡಿ ಸಿಸ್ಟಂನಲ್ಲಿ ನಾನು ಗುತ್ತಿಗೆದಾರನಾಗಿದ್ದರೆ, ನಾನು 100 ಅಥವಾ 200 ಕೋಟಿ ರೂಪಾಯಿಯ ಕೆಲಸವನ್ನು ಮಾಡಿ ಎಇಇ, ಜೆಇ, ಇಇ ಹತ್ತಿರ ಬಿಲ್ ಅಪ್ರೂವ್ ಮಾಡಿಸಿಕೊಂಡು ಅದಕ್ಕೆ ಆಯುಕ್ತರ ಸಹಿಯನ್ನು ಹಾಕಿಸಿ ಅದನ್ನು ಅಕೌಂಟ್ಸ್ ಆಫೀಸರ್‌ಗೆ ಕೊಟ್ಟು ಬಿಟ್ಟರೆ ಅವರು ಒಂದು ಸೀಲ್ ಹಾಕಿ ಕೊಡುತ್ತಾರೆ. ಆಗ ನಾನು ಬ್ಯಾಂಕ್‌ಗೆ ಹೋಗಿ ಹಣವನ್ನು ತೆಗೆದುಕೊಂಡು ಬಿಡಬಹುದು. The Bank will release 75% money. ಈಗ ಈ ಹುಂಡಿ ಪದ್ಧತಿ ನಿಂತು ಹೋಗಿದೆ. ಈ ಹಣದ ಬಗ್ಗೆ ಹೇಳುವುದಾದರೆ, ಬ್ಯಾಂಕ್ ಬಿಬಿಎಂಪಿ ಪರವಾಗಿ

ಸಾಲವನ್ನು ಕೊಡುತ್ತದೆ. ಆದರೆ ಬಡ್ಡಿಯನ್ನು ಕಟ್ಟುವುದು ಬಿಬಿಎಂಪಿ. ಒಂದು ಕಾಲದಲ್ಲಿ ಒಂದು ತಿಂಗಳಿಗೆ ಬಿಬಿಎಂಪಿ 41 ಕೋಟಿ ರೂಪಾಯಿ ಬಡ್ಡಿಯನ್ನು ಕೊಡುತ್ತಿತ್ತು. ನಾವು–ನೀವೆಲ್ಲರೂ ಸೇರಿ ಪಕ್ಷಾತೀತವಾಗಿ ಇದರ ಬಗ್ಗೆ ಯೋಚನೆ ಮಾಡಬೇಕು. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ 7,000 ದಿಂದ 8,000 ಕೋಟಿ ರೂಪಾಯಿಯಷ್ಟು ಸಾಲವಿದೆ. ಕಳೆದ 10 ವರ್ಷಗಳಲ್ಲಿ ಖರ್ಚಾಗಿರುವುದು 8,000 ದಿಂದ 10,000 ಕೋಟಿ ರೂಪಾಯಿ. ಒಟ್ಟಾರೆ 80,000 ಕೋಟಿ ರೂಪಾಯಿ ಇದ್ದರೆ ಕಳೆದ 5–6 ವರ್ಷಗಳಲ್ಲಿಯೇ 20,000 ಕೋಟಿ ರೂಪಾಯಿ ಖರ್ಚಾಗಿದೆ. ಎಲ್ಲಾದರೂ ಒಂದು ಕಡೆ ನಾವೆಲ್ಲರೂ ರಾಜಕೀಯವನ್ನು ಬಿಡಬೇಕು. ಪ್ರಾಮಾಣಿಕವಾಗಿ ಜನರು ನಮ್ಮನ್ನು ಆರಿಸಿ ಕಳುಹಿಸಿದ ಮೇಲೆ ನಾವು ಅವರಿಗೆ ಶೇಕಡ 100ಕ್ಕೆ 100ರಷ್ಟು ತೃಪ್ತಿ ಪಡಿಸುವುದಕ್ಕಾಗುವುದಿಲ್ಲ. ಆದರೆ ಕಡೇ ಪಕ್ಷ ಶೇಕಡ 70ರಷ್ಟು ಅಥವಾ 80ರಷ್ಟು diligence ಮಾಡಿ ಅವರಿಗೆ deliver ಮಾಡುವಂಥ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ಇದರಲ್ಲಿ ನಾನು 2008–09 ಮತ್ತು 2009–2010ನೇ ಸಾಲಿನ ಬಗ್ಗೆ ಹೇಳಿದೆ. ಈ 5–6 ವಿಧಾನ ಸಭಾ ಕ್ಷೇತ್ರಗಳಲ್ಲಿ ಹೆಚ್ಚು–ಕಡಿಮೆ 3,000 ಕೋಟಿ ರೂಪಾಯಿ ಖರ್ಚಾಗಿದೆ. ನಾಲ್ಕೈದು ವಿಧಾನ ಸಭಾ ಕ್ಷೇತ್ರಗಳಲ್ಲಿ ದುಡ್ಡಿಲ್ಲದಿದ್ದರೆ ಹುಂಡಿ ಬಿಲ್ಲುಗಳನ್ನು ಮಾಡುವುದು. ಹೊಲದಲ್ಲಿರುವವರೆಲ್ಲರೂ ಕಳ್ಳರಾದರೆ, ಅಂದರೆ ಆವತ್ತು ನಾನೂ ಸಹ ಶಾಸಕನಾಗಿರಬಹುದು, ನಾನೂ ಸಹ ಕಳ್ಳ ಎಂದು ಹೇಳಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ ನಾನು ಕಳ್ಳತನವನ್ನು ಮಾಡಿಲ್ಲ. ಆದರೂ ಸಹ ಒಂದು ವ್ಯವಸ್ಥೆಯಲ್ಲಿಯಾರೂ ಸಹ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ನಾವೆಲ್ಲರೂ ಸೇರಿ ಯಾವುದಾದರೂ ಒಂದು ರೀತಿಯ ಪಾರದರ್ಶಕವಾದ ವ್ಯವಸ್ಥೆಯನ್ನು ತಂದರೆ ಮಾತ್ರ ಏನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾವೆಲ್ಲರೂ ರಾಜಕಾರಣದಲ್ಲಿ ಜನರ ಸೇವೆಯನ್ನು ಮಾಡುವುದು ಸಾರ್ಥಕವಾಗುತ್ತದೆ. ನಾನು ನಮ್ಮೆಲ್ಲಾ ಮಿತ್ರರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ. ತಾವೆಲ್ಲರೂ ದಯವಿಟ್ಟು ಇದಕ್ಕೆ ಸಹಕಾರವನ್ನು ಮಾಡಬೇಕು. ವಿರೋಧ ಪಕ್ಷದವರ ಎಲ್ಲಾ ಸಲಹೆಗಳನ್ನು ನಾವು ಕೇಳುತ್ತೇವೆ. ಸರ್ಕಾರ ಸಲಹೆಗಳನ್ನು ಸ್ವೀಕರಿಸಲು open minded ಆಗಿರುತ್ತದೆ. ಆದರೆ ಇಂತಹ ಹಗಲು ದರೋಡೆಯಾಗುವುದನ್ನು ನೀವು–ನಾವು ಎಲ್ಲರೂ ಸೇರಿ ನಿಲ್ಲಿಸಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸೀತಾರಾಂರವರು ಹೇಳಿದ್ದು ಸರಿಯಾಗಿದೆ, ಅವರು ಚೆನ್ನಾಗಿಯೇ ಮಾತನಾಡುತ್ತಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ:–** ನಾನು ಕೇವಲ ಮಾತನಾಡುತ್ತಿಲ್ಲ, ವಾಸ್ತವಾಂಶವನ್ನು ಹೇಳುತ್ತಿದ್ದೇನೆ ಮತ್ತು Right to Information Act (RTI) ಅಡಿಯಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಡೆದುಕೊಂಡಿರುವ ಅಂಕಿ–ಅಂಶಗಳನ್ನು ಹೇಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನೀವು ಚೆನ್ನಾಗಿಯೇ ಮಾತನಾಡುತ್ತಿದ್ದೀರಿ. ತಾವು ಹೇಳಿದ ಹಾಗೆ ಪಾರದರ್ಶಕತೆ, ಅವ್ಯವಸ್ಥೆ, ಭ್ರಷ್ಟಾಚಾರ ಈ ಎಲ್ಲಾ ಸಂಗತಿಗಳು ಮತ್ತು ಅದೇ ರೀತಿ ಕಸ ವಿಲೇವಾರಿ, ಘನ ತ್ಯಾಜ್ಯ ವಿಲೇವಾರಿ ಈ ಎಲ್ಲಾ ವಿಚಾರಗಳಿಗೆ ಇದು ಹೇಗೆ ಸಹಾಯ ಮಾಡುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಾನು ಆ ಎಲ್ಲಾ ವಿಚಾರಗಳನ್ನು ಸಹ ಹೇಳುತ್ತೇನೆ. ತಾವು ಕಸ ವಿಲೇವಾರಿ ಬಗ್ಗೆ ಹೇಳಿದಿರಿ.

**ಶ್ರೀಮತಿ ಮೋಟಮ್ಮ:–** "ಚಿಕ್ಕದಾಗಿರುವುದು ಚೊಕ್ಕವಾಗಿರುತ್ತದೆ" "ಚಿಕ್ಕ ಸಂಸಾರ ಸುಖ ಸಂಸಾರ" ಎಂದು ಹೇಳುತ್ತಾರೆ. ಚಿಕ್ಕ ಮನೆ ಇದ್ದರೆ ಚೆನ್ನಾಗಿರುತ್ತದೆ ಮತ್ತು ನಿರ್ವಹಣೆ ಸುಲಭವಾಗಿರುತ್ತದೆ.

**ಶ್ರೀಮತಿ ತಾರಾ ಅನೂರಾಧ:–** ಹಾಗಾದರೆ ಕೂಡಿ ಬಾಳುವುದು ತಪ್ಪಾ? ಎಲ್ಲರೂ ಒಟ್ಟಿಗೆ ಇರುವುದು ತಪ್ಪು ಎಂದು ಹೇಳುತ್ತೀರಾ? ಎಲ್ಲವನ್ನು ಒಡೆದು ಚಿಕ್ಕಚಿಕ್ಕ ಮನೆಗಳನ್ನು ಮಾಡಲಿ ಎನ್ನುತ್ತೀರಾ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** 35 ಜನರು ಇರುವ ಕ್ಯಾಬಿನೆಟ್ ಸಚಿವರನ್ನು 25 ಜನ ಕ್ಯಾಬಿನೆಟ್ ಸಚಿವರನ್ನಾಗಿ ಮಾಡಿ ಚೆನ್ನಾಗಿರುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮೋಟಮ್ಮನವರೆ, ನೀವು ಚಿಕ್ಕದಾಗಿರುವುದು ಚೊಕ್ಕದಾಗಿರುತ್ತದೆ ಎಂದು ಹೇಳಿದಿರಿ. ಹಾಗಾದರೆ ಚಿಕ್ಕಮಗಳೂರನ್ನೇ ಒಂದು ರಾಜ್ಯವನ್ನಾಗಿ ಮಾಡಿ ಬಿಡೋಣ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಾವು ಚಿಕ್ಕಮಗಳೂರನ್ನು ರಾಜ್ಯವನ್ನಾಗಿ ಮಾಡಿ ಎಂದು ಕೇಳಿಯೇ ಇಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 1968ನೇ ಇಸವಿಯಲ್ಲಿ ನಾವು ಕಾಲೇಜಿಗೆ ಬರುವಾಗ ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಇಳಿಯುತ್ತಿದ್ದೆವು. ಎಲ್ಲಾ ಸರ್ಕಾರಿ ಬಸ್ಸುಗಳು ಹಾಗೂ ಖಾಸಗಿ ಬಸ್ಸುಗಳು ಅಲ್ಲಿಯೇ ಬರುತ್ತಿದ್ದವು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಮಾಡಿದ ಮೇಲಾದರೂ ಕಲಾಸಿಪಾಳ್ಯ ಬಸ್ ನಿಲ್ದಾಣ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ಏನಾದರೂ ಬದಲಾಗಿದೆಯೇ? ಕಲಾಸಿಪಾಳ್ಯ ಬಸ್ ನಿಲ್ದಾಣ ಅಷ್ಟೇ ಹೊಲಸಾಗಿದೆ, ಕೊಳಕಾಗಿದೆ, ಅದೇನು ಬದಲಾಗಿಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮೋಟಮ್ಮನವರೆ, 55 ವರ್ಷಗಳ ಕಾಲ ನಿಮ್ಮ ಪಕ್ಷದ ಸರ್ಕಾರ ಆಡಳಿತವನ್ನು ನಡೆಸಿದವರು. ನಾವು ಕೇವಲ 5 ವರ್ಷಗಳ ಕಾಲ ಇದ್ದೆವು.

**ಶ್ರೀಮತಿ ಮೋಟಮ್ಮ:–** ನೀವು ಬೇರೆ ರೀತಿಯಲ್ಲಿ ಹೇಳಬಹುದು. ಒಂದು ಭಾಷೆ ಮಾತನಾಡುವವರು ಒಂದು ಕಡೆ ಸೇರುತ್ತಾರೆ, ಒಂದು ಕಡೆ ಬರುವ ಆದಾಯವೇ ಒಂದು ಕಡೆ ಬರುತ್ತದೆ, ಬೇರೆ ಬೇರೆ ಕಡೆ ಇರುವವರು ಸಫರ್ ಆಗುತ್ತಾರೆ ಎಂದು ಹೇಳಿದರು. ವಿಷಯ ಅದಲ್ಲಾ, ನಿರ್ವಹಣೆ ಮಾಡುವುದು ತುಂಬಾ ಸುಲಭ ಹಾಗೂ ಚೆನ್ನಾಗಿ ಆಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಮಾನ್ಯ ಗಣೇಶ್ ಕಾರ್ಣಿಕ್‌ರವರು ಕಸದ ವಿಲೇವಾರಿ ಬಗ್ಗೆ ಮಾತನಾಡುತ್ತಿದ್ದರು. ನಾನು ಇವತ್ತಿನ ದಿವಸ ಮೂಲಭೂತವಾಗಿ ಏನು ನಡೆಯುತ್ತಿದೆ ಎನ್ನುವುದನ್ನು ಎಲ್ಲರ ಮುಂದೆ ವಿವರವಾಗಿ ಹೇಳುತ್ತೇನೆ. ನಾನು ಪಕ್ಷಾತೀತವಾಗಿ ಮಾತನಾಡುತ್ತೇನೆ ಎಂದು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸೀತಾರಾಂರವರೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ತಾವು ಹೃದಯದಿಂದ ಹೇಳಿ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಾನು yield ಆಗಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ನೀವು yield ಆಗುವುದು ಬೇಡ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಾನು ಚರ್ಚೆ ಮಾಡುತ್ತೇನೆ ಮತ್ತು ಸರ್ಕಾರ ಏಕೆ ಈ ವಿಧೇಯಕವನ್ನು ಸಮರ್ಥನೆ ಮಾಡುತ್ತಿದೆ ಎನ್ನುವುದನ್ನು ಹೇಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ನಾನೇನು ಹೇಳುತ್ತೇನೆಂದರೆ, ಇದನ್ನೇ ಇನ್ನೊಂದು 27 ವಾರ್ಡ್ ಹೆಚ್ಚಾಗಿ ಮಾಡಿ 225 ವಾರ್ಡ್‌ಗಳನ್ನು ಮಾಡಿ. ಆಗ ಅವು ಸಣ್ಣ ಸಣ್ಣ ವಾರ್ಡ್‌ಗಳಾಗುತ್ತವೆ. ಅದನ್ನೇ ಮಾಡಿ, ಬೆಂಗಳೂರು ಮಹಾನಗರ ಪಾಲಿಕೆಯನ್ನು ಏಕೆ ಒಡೆಯುತ್ತೀರಿ?

**ಶ್ರೀ ಎಂ.ಆರ್. ಸೀತಾರಾಂ:–** ಆ ತರಹ ಇದ್ದರೆ ಲಂಡನ್‌ನಲ್ಲಿ 57 Boroughs ಇವೆ. ಸಣ್ಣ ಸಣ್ಣದ್ದು ಒಂದೊಂದು ಕೌನ್ಸಿಲ್ ಆಗಿದೆ. ನಾವು ಆ ತರಹ ಮಾಡುತ್ತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಇದರಿಂದೇನೂ ಆಗುವುದಿಲ್ಲ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, there is no solution. ಆ ರೀತಿಯಾಗಿ ಮಾತನಾಡುವುದರಿಂದ ಅದಕ್ಕೆ ಏನು ಅವರು ಹೇಳುವಂಥದ್ದು ಉತ್ತರವಲ್ಲ. ನಾನು ಮೂಲಭೂತವಾಗಿ ಮಾನ್ಯ ಸದಸ್ಯರು ಹೇಳುತ್ತಿರುವಂತೆ, ದಕ್ಷತೆ ಇರಬೇಕು, ಸ್ವಚ್ಛತೆ ಇರಬೇಕು. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು. ಇದೆಲ್ಲಾ ಇದೆ. ಬರೀ ಒಂದೇ ಅಲ್ಲ. ನಾವು ಬರೀ ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕಲ್ಲ.

**ಶ್ರೀ ಅರುಣ ಶಹಪುರ್:–** ಮಾನ್ಯ ಸಭಾಪತಿಯವರೆ, ಇದು ಬರೀ ಬಿಬಿಎಂಪಿ ವ್ಯವಸ್ಥೆಗೆ ಮಾತ್ರವೋ, ಇಲ್ಲ ಇಡೀ ರಾಜ್ಯದ ವ್ಯವಸ್ಥೆಗೇ ಈ ರೀತಿಯಾಗಬೇಕಾ?

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಇವತ್ತು ನಾವು ಬರೀ ಬಿಬಿಎಂಪಿ ವಿಧೇಯಕವನ್ನು ಮಂಡಿಸುವುದು. ಅದುದರಿಂದ ನಾನು ಬಿಬಿಎಂಪಿ ಪರ ಮಾತ್ರ ಮಾತನಾಡುತ್ತಿರುವುದು. ರಾಜ್ಯದಲ್ಲಿ, ದೇಶದಲ್ಲಿ ಎಲ್ಲಾ ಕಡೆ ಇರುವುದರಿಂದ ಈಗ ಬಿಜೆಪಿ ಸರ್ಕಾರ ನಮ್ಮ ದೇಶದಲ್ಲಿ ಅಧಿಕಾರಕ್ಕೆ ಬಂದಿದೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ ನಮ್ಮ ಪ್ರಧಾನ ಮಂತ್ರಿಗಳೇ ಬಂದಿದ್ದಾರೆ.

**ಶ್ರೀ ಅರುಣ ಶಹಪುರ್:–** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಪಕ್ಷದ ಒಬ್ಬರು ಶ್ರೀ ಎಂ.ಬಿ. ಪಾಟೀಲ್ ಬಿಜಾಪುರ ಎಂಎಲ್ಎ ಯವರು ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಅದು ಬೇರೆ.

**ಶ್ರೀ ಅರುಣ ಶಹಪುರ್:–** ಮಾನ್ಯ ಸಭಾಪತಿಯವರೆ, ಆ ರೀತಿಯಾಗಿ ಇದು ಬಿಬಿಎಂಪಿ ಗೆ ಮಾತ್ರ ಈ ಸೂತ್ರನೋ, ಇಲ್ಲ ಇಡೀ ರಾಜ್ಯಕ್ಕೂ ಈ ಸೂತ್ರ ಅನ್ವಯಿಸುತ್ತದೆಯೋ?

**ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):–** ಮಾನ್ಯ ಸಭಾಪತಿಯವರೆ, ಬಿಜೆಪಿ ಯ ಶ್ರೀ ಉಮೇಶ್ ಕತ್ತಿಯವರ ಬಗ್ಗೆ ಕೂಡ ಬಿಜೆಪಿ ಯವರು ಹೇಳಬೇಕು.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಮಾನ್ಯ ಅರುಣ ಶಹಪುರ್‌ರವರು ಮೊದಲು ಶ್ರೀ ಉಮೇಶ್ ಕತ್ತಿಯವರ ಬಗ್ಗೆ ಮಾತನಾಡಲಿ.

**ಶ್ರೀ ಅರುಣ ಶಹಪುರ್:–** ಮಾನ್ಯ ಸಭಾಪತಿಯವರೆ, ಈ ಸರ್ಕಾರದಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂದು ಕಾಂಗ್ರೆಸ್ ಪಕ್ಷದ ಶಾಸಕರೇ ಹೇಳಿರುವಂಥದ್ದು.

**ಸಭಾಪತಿಯವರು:–** ಈಗ ಚರ್ಚೆಯನ್ನು ಬಿಬಿಎಂಪಿ ಬಗ್ಗೆ ಮಾತ್ರ ಮಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಶ್ರೀ ಎ.ಬಿ. ಪಾಟೀಲ್ ಮತ್ತು ಶ್ರೀ ಉಮೇಶ್ ಕತ್ತಿ ಇಬ್ಬರು ಒಂದಾಗಿದ್ದಾರೆ.

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಯಾವತ್ತು ಕೂಡ ಇಡೀ ಅಖಂಡ ಕರ್ನಾಟಕ ಒಂದಾಗಿರಬೇಕು. ನಾವು ಬೆಂಗಳೂರು ನಗರವನ್ನು ಒಡೆದಿಲ್ಲ. ನಿಮಗೆ ಏನೂ ಸಿಗುವುದಿಲ್ಲ. ಅದಕ್ಕೆ ಉತ್ತರವನ್ನು ಹೇಳುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಸೀತಾರಾಂರವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಮೂರು ಜನ ಮೇಯರ್ ಮತ್ತು ಮೂರು ಡೆಪ್ಯೂಟಿ ಮೇಯರ್‌ಗಳನ್ನು ಮಾಡಿಬಿಟ್ಟರೆ ಎಲ್ಲಾ ಸಮಸ್ಯೆಗಳು ಪರಿಹಾರವಾಗಿ ಬಿಡುತ್ತದೆಯೇ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಸರ್ಕಾರ ಸರಿಯೋ ತಪ್ಪೋ ಸರ್ಕಾರ ವಿಧೇಯಕವನ್ನು ತೆಗೆದುಕೊಂಡು ಬಂದಿದೆ. ಅವರು ಆಡಳಿತ ಪಕ್ಷದವರಾಗಿ ಅದನ್ನು ಅವರು ಡಿಫೆಂಡ್ ಮಾಡಿಕೊಳ್ಳಬೇಕು ಮಾಡಿಕೊಳ್ಳಲಿ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡುತ್ತಿರುವುದು ವ್ಯವಸ್ಥೆಯನ್ನು ಸರಿ ಮಾಡಬೇಕು. ದೊಡ್ಡ ಪ್ರಮಾಣದಲ್ಲಿ ಹಣ ಪೋಲು ಅಗುತ್ತಿದೆ. ದಯವಿಟ್ಟು ಅದನ್ನು ಅರ್ಥಮಾಡಿಕೊಳ್ಳಿ. ದಯವಿಟ್ಟು ಮರಿತಿಬ್ಬೇಗೌಡರೆ ಅದನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವುದು ಬೇಡ. ಇದರಲ್ಲಿ ಒಳಗಡೆ ಇರುವಂತಹ ಸಿಸ್ಟಂ ಅನ್ನು ನೋಡಿದ ಮೇಲೆ ನಾನು ಹೇಳುತ್ತಿರುವುದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಹಣ ಪೋಲು ಯಾವಾಗ ಅಗುತ್ತದೆ?

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಹೇಳಿದೆನಲ್ಲಾ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅದು ಈಗ ಗೊತ್ತಾಯಿತಾ? ಎರಡು ವರ್ಷಗಳ ಹಿಂದೆಯೇ ಆಗಿತ್ತಲ್ಲಾ ಆಗಲೇ ಮಾಡಬೇಕಾಗಿತ್ತು.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ದಯವಿಟ್ಟು ಮಾನ್ಯ ಬಸವರಾಜ ಹೊರಟ್ಟಿಯವರು ಕುಳಿತುಕೊಳ್ಳಬೇಕು. ನಾನು ಯೀಲ್ಡ್ ಆಗಿಲ್ಲ. 2012ನೇ ಇಸವಿಯಲ್ಲಿ ಇದು ಟಿವಿಸಿಸಿ ರಿಪೋರ್ಟ್ ಬಂದ ತಕ್ಷಣ ನಾನು ಆಗತಾನೇ ಮೇಲ್ಮನೆ ಸದಸ್ಯನಾಗಿ ಬಂದಿದೆ. ನನ್ನ ಮೊದಲನೆಯ ಪ್ರಶ್ನೆ ಸದನದಲ್ಲಿ ಅಂದಿನ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಮಾಡಿ, ತನಿಖೆ ಮಾಡಿಸುತ್ತೀರಾ ಎಂದು ಕೇಳಿದ್ದು ನಿಜವೋ ಅಲ್ಲವೋ ಎನ್ನುವುದನ್ನು ಬೇಕಾದರೆ ರೆಕಾರ್ಡ್‌ನಲ್ಲಿರುತ್ತದೆ ನೋಡಿ. ನಾವೆಲ್ಲರೂ ಸೇರಿಕೊಂಡು ಇದನ್ನು ಯೋಚನೆ ಮಾಡಬೇಕಾಗಿದೆ. ಈ ತಿದ್ದುಪಡಿ ವಿಧೇಯಕವನ್ನು ಕಾಂಗ್ರೆಸ್ ಪಕ್ಷದವರು ತೆಗೆದುಕೊಂಡು ಬಂದಿದ್ದಾರೆ ಅದನ್ನು ವಿರೋಧಿಸೋಣ ಎನ್ನುವುದಲ್ಲ. ಅದಕ್ಕೋಸ್ಕರವಾಗಿ ನಾನು ಮಾತನಾಡುತ್ತಿರುವುದು. ಬೆಂಗಳೂರಿನ ಬಿಬಿಎಂಪಿ ವ್ಯವಸ್ಥೆಯಲ್ಲಿ ಇದನ್ನು ಎರಡು ಮೂರು ಮಹಾನಗರ ಪಾಲಿಕೆಗಳನ್ನು ಮಾಡಬೇಕೆಂದು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಕೇಳುತ್ತಿದ್ದರು. ಅವರಿಗೆ ಈ ಒಂದು ಭಾಗದಲ್ಲಿ ಕಸದ ವಿಲೇವಾರಿಯಲ್ಲಿ 2008–09ನಲ್ಲಿ Garbage contract award ಮಾಡಿದ್ದು ಹಳೆ census ಪ್ರಕಾರ. 2001–02ರ census ಪ್ರಕಾರ ಒಂದು ದಿವಸಕ್ಕೆ ಬೆಂಗಳೂರು ನಗರ ಪಾಲಿಕೆಯಲ್ಲಿ ಸುಮಾರು 2,000 ಟನ್, 3,000 ಟನ್ ಕಸ ಶೇಖರಣೆಯಾಗಬೇಕೆಂಬ ಆಧಾರದ ಮೇಲೆ ಕೊಟ್ಟಿದ್ದು. ಈಗ 8,000 ರಿಂದ 12,000 ಟನ್ ವರೆಗೆ ಕಸ ಕಲೆಕ್ಟ್ ಆಗುತ್ತಿದೆ. ಈಗ ಏನಾಗಿದೆ ಎಂದರೆ ಅವತ್ತು ನಾವು ತಮಗೆ ನೆನಪು ಇರಬಹುದು ಸಮಿಶ್ರ ಸರ್ಕಾರ ಇದ್ದಾಗ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಸುಮಾರು ಟಿಎಂಸಿಗಳನ್ನು ಸೇರಿ ಹಳ್ಳಿಗಳ ಭಾಗವನ್ನು ಬಿಬಿಎಂಪಿ ಗೆ ಸೇರಿಸಬೇಕೆಂದಾಗ ಬೆಂಗಳೂರು ನಗರದ ಎಲ್ಲಾ ಶಾಸಕರುಗಳು ಇದರಲ್ಲಿ ಬಿಜೆಪಿ ಶಾಸಕರುಗಳು ಅವತ್ತಿನ ದಿವಸ ಶ್ರೀ ವಿ.ಸೋಮಣ್ಣನವರು ಕೂಡ ಅದನ್ನು ವಿರೋಧಿಸಿದರು. ಶ್ರೀ ಸುರೇಶ್‌ಕುಮಾರ್‌ರವರು ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಹಳ್ಳಿಗಳನ್ನೆಲ್ಲಾ ಸೇರಿಸಿ ಇದನ್ನು ಮಾಡುವುದು ಬೇಡವೆಂದು ಸಲಹೆಯನ್ನು ಕೊಟ್ಟರು. ಇದನ್ನು ಮಾಡುವುದರಿಂದ ದೊಡ್ಡ ಹೊರೆಯಾಗುತ್ತದೆಂದು ಹೇಳಿದರು. 'we cannot manage' ಎಂದು ಹೇಳಿರುವುದು ಕೂಡ ನಿಜ. ಇವತ್ತಿನ ದಿವಸ ಬಿಬಿಎಂಪಿ ವ್ಯಾಪ್ತಿ ಇಷ್ಟೊಂದು ಬೆಳೆದಿರುವುದರಿಂದ ಯಾರಿಗೂ ಹತೋಟಿಗೆ ತರುವುದಕ್ಕಾಗುತ್ತಿಲ್ಲ. ಇವತ್ತಿನ ದಿವಸ ಹೊಸದಾಗಿ 2–3 ವಿಭಾಗಗಳನ್ನಾಗಿ ಮಾಡಿದಾಗ ಏನಾಗುತ್ತದೆ ಎರಡು ಮೂರು ವಿಭಾಗಗಳನ್ನಾಗಿ ಮಾಡುತ್ತೇವೆಂದು ಏನು ಬಿಲ್‌ನಲ್ಲಿ ಹೇಳಿಲ್ಲ. ಎರಡು ಮೇಯರ್, ಮೂರು ಮೇಯರ್ ಮಾಡುತ್ತೇವೆ ಎಂದು ಏನೂ ಬಿಲ್‌ನಲ್ಲಿಲ್ಲ. ಅದನ್ನು ಸುಮ್ಮನೆ ಯೋಚನೆ ಮಾಡುತ್ತಿದ್ದೇವೆಯೇ ಹೊರತು, ಅದನ್ನು ತಾವುಗಳೆಲ್ಲರೂ ಸಲಹೆಯನ್ನು ಕೊಟ್ಟ ಹಾಗೆ ಸರ್ಕಾರ ಮಾಡುತ್ತದೆ. ಆದರೆ ಮೂಲಭೂತವಾಗಿ 'Bengaluru is a garbage city' ಎಂದು **Newyork Times**ನಲ್ಲಿ ಬರುತ್ತದೆ. ಇವತ್ತಿನ ದಿವಸ investment to Bengaluru is

reduced. ಅದು ನಮಗೆ ಡೈರೆಕ್ಟ್ ಆಗಿ ಗೊತ್ತಾಗುವುದಿಲ್ಲ. Even then, how this image is projected in the international media, ಅದರ ಆಧಾರದ ಮೇಲೆ ಬೆಂಗಳೂರಿನ ಒಳಗೆ influx ಬರುವುದು ಸ್ವಲ್ಪ ಕಡಿಮೆಯಾಗುತ್ತದೆ. ಪುಣೆ ನಗರಕ್ಕೆ ಹೆಚ್ಚಾಗಿದೆ, ಚೆನ್ನೈಗೆ ಪುನಃ ಹೋಗುವುದಕ್ಕೆ ಶುರು ಮಾಡಿದ್ದಾರೆ. ಇವೆಲ್ಲವುಗಳನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಆಮೇಲೆ ಬಿಬಿಎಂಪಿ ಯನ್ನು ಮೂರು ಭಾಗ ಮಾಡುವುದರಿಂದ ಮರ್ಡರ್ ಮಾಡುತ್ತಿದ್ದೀರಿ, ಮತ್ತೊಂದು ಮಾಡುತ್ತಿದ್ದೀರಿ, ಬೆಂಗಳೂರಿನ ಹಿರಿಮೆಗೆ ಧಕ್ಕೆಯನ್ನು ತರುತ್ತಿದ್ದೀರಿ ಎಂದು ಹೇಳುತ್ತಿದ್ದೀರಿ. ಇದೆಲ್ಲವೂ ಕೂಡ ಸುಳ್ಳು. ಏಕೆಂದರೆ administration system ಸರಿಯಾಗುವುದಕ್ಕೆ ಮೂರು ವಿಭಾಗಗಳನ್ನಾಗಿ ಮಾಡುತ್ತಿದ್ದೇವೆಯೇ ಹೊರತು, it will always remain a single body. ಬೆಂಗಳೂರು ನಗರ ಒಂದೇ ಇರುತ್ತದೆ. ಬೆಂಗಳೂರು ನಗರವನ್ನು ನಾವು ನಾಲ್ಕು ಭಾಗಗಳನ್ನಾಗಿ ಮಾಡುತ್ತಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಒಬ್ಬರೇ ಮೇಯರ್ ಇರುತ್ತಾರೆಯೇ?

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಇದರೊಳಗೆ ಅದರ ಬಗ್ಗೆ ಚರ್ಚೆಯೇ ಇಲ್ಲ. ಆ ವಿಷಯವನ್ನು ಕೂಡ ವಿಧೇಯಕದಲ್ಲಿ ಸೇರಿಸಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನು ನಮಗೆ ಹೇಳಿದರೆ ಸಾಕು. ನಾನು ಕೇಳುತ್ತಿರುವುದು ಬೆಂಗಳೂರಿನ ಮಹಾಪೌರರು, ಉಪ ಮಹಾಪೌರರು, ಸ್ಥಾಯಿ ಸಮಿತಿಗಳು ಒಂದೇ ಇರುತ್ತದೆಯೇ? ಆಡಳಿತ ವಿಕೇಂದ್ರೀಕರಣವನ್ನು ಮಾಡುವುದಕ್ಕೆ ನಮ್ಮದು ಯಾರದ್ದು ಕೂಡ ತಕರಾರು ಇಲ್ಲ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ತಾವು ಸಲಹೆಗಳನ್ನು ಕೊಟ್ಟರೆ ಸರ್ಕಾರ ಅದನ್ನು ಮುಕ್ತವಾಗಿ ಸ್ವೀಕಾರ ಮಾಡುತ್ತದೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಸರ್ಕಾರ ಈ ತಿದ್ದುಪಡಿ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು ಅದಕ್ಕೆ ಸ್ಪಷ್ಟೀಕರಣವನ್ನು ಕೊಡಲಿ. ನಾವು ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನೀವು ಅದರ ಬಗ್ಗೆ ಸಲಹೆಗಳನ್ನು ಕೊಡಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ತಿದ್ದುಪಡಿ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳು ಸಲಹೆಗಳನ್ನು ಕೊಡಲಿ. ಅದನ್ನು ಸರ್ಕಾರ ಮುಕ್ತವಾಗಿ ಸ್ವೀಕಾರ ಮಾಡುತ್ತದೆ. ತಿದ್ದುಪಡಿ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವುದಲ್ಲ. ನಾನು ಈ ವಿಧೇಯಕದ ಪರವಾಗಿ ಮಾತನಾಡುತ್ತಿದ್ದೇನೆ. ಸರ್ಕಾರಕ್ಕೆ ಮಾನ್ಯ ಸದಸ್ಯರುಗಳು ಸಲಹೆಗಳನ್ನು ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿದ ಮೇಲೆ ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ. ಆಗ ನಿಮ್ಮ ಸಲಹೆಗಳನ್ನು ಅವರು ಗಮನಿಸಿಕೊಳ್ಳುತ್ತಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಬಿಬಿಎಂಪಿ ಯನ್ನು ಎಷ್ಟು ಭಾಗಗಳನ್ನಾಗಿ ಮಾಡುತ್ತೀರಿ. ಎರಡು ಮಾಡುತ್ತಿರೋ ಅಥವಾ ಮೂರು ಮಾಡುತ್ತಿರೋ?

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ದಯಮಾಡಿ ಆ ತಿದ್ದುಪಡಿ ವಿಧೇಯಕದಲ್ಲಿ ಎಷ್ಟು ಭಾಗಗಳನ್ನಾಗಿ ಮಾಡಲಾಗುವುದೆಂದು ಇಲ್ಲ. ನೀವುಗಳು ಸಲಹೆಗಳನ್ನು ಕೊಡಿ. ಮಾನ್ಯ ವೈ.ಎ. ನಾರಾಯಣಸ್ವಾಮಿಯವರೆ ನಿಮ್ಮ ಸಲಹೆಗಳಿದ್ದರೆ ಕೊಡಿ ಅದನ್ನು ಸರ್ಕಾರ ಪರಿಗಣಿಸುತ್ತದೆ. ಇನ್ನು ಪೂರ್ಣವಾಗಿ ನಿರ್ಧಾರ ಮಾಡಿಲ್ಲ. ಆದರೆ ಸರ್ಕಾರ ಮುಕ್ತವಾಗಿದೆ. ಒಟ್ಟಿನಲ್ಲಿ ಮೂಲ ಉದ್ದೇಶ ಏನೆಂದು ನಾವು ಹೇಳುತ್ತಿರುವುದು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಬೆಂಗಳೂರಿನಲ್ಲಿ ಒಂದೇ ಒಂದು ಬಿಬಿಎಂಪಿ ಇರಲಿ ಎಂದು ಹೇಳುತ್ತೇವೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಬಿಬಿಎಂಪಿ ಯನ್ನು ಈಗ ಯಾವ ರೀತಿಯಾಗಿದೆ ಅದೇ ರೀತಿಯಲ್ಲಿ ಇಡುವುದು ಎನ್ನುವ ಬಹಳ ಒಳ್ಳೆಯ ಸಲಹೆಯನ್ನು ಶ್ರೀ ಸೀತಾರಾಂ ರವರು ಕೊಡುತ್ತಿದ್ದಾರೆ ಅವರಿಗೆ ಧನ್ಯವಾದಗಳು.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದು. ನೀವು ಪೂರ್ವಭಾವಿಯಾಗಿ ಏನೋ ಹೇಳುವುದಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಲಹೆಯನ್ನು ಕನ್ಸಿಡರ್ ಮಾಡುತ್ತಾರೆಂದರೆ ನಮ್ಮ ಸಲಹೆ ಒಂದೇ ಬಿಬಿಎಂಪಿ ಇರಲಿ ಎಂದು.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಬಿಲ್ ತಂದಿರುವುದರ ಬಗ್ಗೆ ಸಲಹೆಗಳನ್ನು ಕೊಡಿ. ಈ ರೀತಿಯಾಗಿ ಮಾತನಾಡುವುದು ಸರಿಯಿಲ್ಲ. ಇದರ ಜೊತೆಯಲ್ಲಿ ಯಾವ್ಯಾವ ಕಾರಣಕ್ಕೆ ಬಿಬಿಎಂಪಿ ಯನ್ನು ವಿಭಜನೆ ಮಾಡುತ್ತಿರುವುದಕ್ಕೆ ಹಲವಾರು ಕಾರಣಗಳಿದೆ. ಇವತ್ತಿನ ದಿವಸವೇ ಎದ್ದು ಬಿಟ್ಟು ಬಿಬಿಎಂಪಿ ವಿಭಜನೆಯನ್ನು ಮಾಡಬೇಕೆಂದು ಮಾಡುತ್ತಿಲ್ಲ. ಆರು ತಿಂಗಳ ಮುಂಚೆಯೇ ಸಂವಿಧಾನದ ಪ್ರಕಾರವಾಗಿ ಬಿಬಿಎಂಪಿ ಗೆ ಐದು ವರ್ಷದ ಒಳಗೆ ಚುನಾವಣೆ ನಡೆಯಬೇಕಾಗಿತ್ತು. ಬಿಬಿಎಂಪಿ ಯಿಂದ ನಿಮಗೂ ನಮಗೂ ಎಲ್ಲರಿಗೂ ಗೊತ್ತು. ಆರು ತಿಂಗಳ ಮುಂಚೆ ಚುನಾವಣೆಯನ್ನು ಮಾಡಿ ಎಂದು ಯಾರಾದರೂ ಕಾರ್ಪೊರೇಟರ್‌ಗಳು ಪತ್ರವನ್ನು ಬರೆದಿದ್ದಾರೆಯೇ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಸರ್ಕಾರ ಈ ರೀತಿ ಎಲ್ಲಾ ಮಾಡುತ್ತೇವೆಂದು ಸರ್ಕಾರದಲ್ಲಿ ಗುಸು ಗುಸು ಎಂದು ಎನ್ನುತ್ತಿರುವಾಗ ಅವರು ಬರೆಯದೇ ಇರಬಹುದು. ಸರ್ಕಾರವೇ ಏಕೆ ಆರು ತಿಂಗಳ ಹಿಂದೆ ಒಂದು ಕಾಯ್ದೆಯನ್ನು ತೆಗೆದುಕೊಂಡು ಬರಬಾರದಿತ್ತು? ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಬೆಂಗಳೂರಿನ ಬಗ್ಗೆ ಸಾಕಷ್ಟು ಕಾಳಜಿ ಇದೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ನಗರಾಭಿವೃದ್ಧಿ ಕಾರ್ಯದರ್ಶಿಯವರು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಅದನ್ನು ದಯಮಾಡಿ ನೋಡಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಬಿಬಿಎಂಪಿ ಯನ್ನು ವಿಭಜನೆ ಮಾಡಬೇಕೆಂದು ಇತ್ತೀಚೆಗೆ ಸರ್ಕಾರಕ್ಕೆ ಯೋಚನೆ ಬಂದಿದ್ದು ಅಲ್ಲ. 2013ರ ಚುನಾವಣೆಯಲ್ಲಿ ಬಿಜೆಪಿ ಪ್ರಣಾಳಿಕೆಯಲ್ಲಿಯೂ ಕೂಡ ಹೇಳಿದ್ದಾರೆ. Restructure ಮಾಡಬೇಕೆಂದು. ಇದು ಇದ್ದಕ್ಕಿದ್ದ ಹಾಗೆ ಉದ್ಭವವಾಗಿರುವಂಥದ್ದಲ್ಲ. ಅದರ ಜೊತೆಗೆ ಒಂದು ಸೆಮಿನಾರ್ ಅಗಿದೆ. ಆ ಸೆಮಿನಾರ್‌ನಲ್ಲಿ ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಬಿಬಿಎಂಪಿ ಇದು division ಆಗಲೇಬೇಕು. Sri Suresh Kumar as Parliamentary Affairs Minister, ಕಾನೂನು ಮತ್ತು ನಗರಾಭಿವೃದ್ಧಿ ಸಚಿವರಾಗಿ he made a statement. ಅದೇನೆಂದರೆ, ಬಿಬಿಎಂಪಿ ಎರಡು ಅಥವಾ ಮೂರು ವಿಭಾಗಗಳಾಗಲೇಬೇಕು. ಇದನ್ನು ಬಿಜೆಪಿಯವರು ಹೇಳಿಬಿಟ್ಟು ಈಗ ಎಲ್ಲಿಂದ ಹುಟ್ಟಿತು ಎಂದು ಶ್ರೀ ವಿ.ಸೋಮಣ್ಣ ಹೇಳಿದರೆ ಏನು ಪ್ರಯೋಜನಾ?

**ಶ್ರೀ ಸಿದ್ದರಾಮಯ್ಯ:-** ನೀವು ಬಿ.ಜೆ.ಪಿ.ಗೆ ಹೋದ ಮೇಲೆ ಏಕೆ ಹೀಗಾಗಿದ್ದೀರಿ. ನಾನು ಹೇಳುವುದನ್ನು ಮೊದಲು ಕೇಳಿ. ಅದಾದ ಮೇಲೆ ನಾವು 2013ರ ನಮ್ಮ ಪ್ರಣಾಳಿಕೆಯಲ್ಲಿ ಜನ ನಮಗೆ ಆಶೀರ್ವಾದ ಮಾಡಿ ಅಧಿಕಾರ ಕೊಟ್ಟರೆ ಈಗ ಇರತಕ್ಕಂಥ ಬಿಬಿಎಂಪಿಯನ್ನು ಇಟ್ಟರೆ ಕಷ್ಟ ಆಗುತ್ತದೆ ಆದಕಾರಣ ಒಳ್ಳೆಯ ಅಡ್ಮಿನಿಸ್ಟ್ರೇಶನ್ ಕೊಡಲಿಕ್ಕೆ, ಪಾರದರ್ಶಕ ಆಡಳಿತ ಕೊಡಲಿಕ್ಕೆ, ಒಳ್ಳೆಯ ಉತ್ತಮವಾದಂಥ ಸೌಕರ್ಯಗಳನ್ನು ಒದಗಿಸಿಕೊಡಲಿಕ್ಕೆ, ಬೆಂಗಳೂರು ನಗರದಲ್ಲಿ ಒಳ್ಳೆಯ ಗುಣಮಟ್ಟದ ಜೀವನ ಮಾಡಲಿಕ್ಕೆ ಕಷ್ಟವಾಗುತ್ತದೆ, 2006-07ರಲ್ಲಿ 110 ಹಳ್ಳಿಗಳನ್ನು ಸೇರಿಸಿ 7 ನಗರಸಭೆಗಳನ್ನೆಲ್ಲಾ ಸೇರಿಸಿ, ಒಂದು ಪುರಸಭೆಯನ್ನು ಸೇರಿಸಿ 224 ಚದರ ಕಿ.ಮೀ ಇರುವುದನ್ನು 800 ಚದರ ಕಿ.ಮೀ ಮಾಡಿರುವ ಕಾರಣ ಇದನ್ನು ಮಾಡುತ್ತೇವೆಂದು ಹೇಳಿದ್ದೇವೆ. ಈ 110 ಹಳ್ಳಿಗಳನ್ನು ಸೇರಿಸಿದ ನಂತರ 5 ವರ್ಷ ಎಲೆಕ್ಟೆಡ್ ಬಾಡಿ ಇತ್ತು, ಇವೊತ್ತಿಗೂ ಕೂಡ ಆ 110 ಹಳ್ಳಿಗಳಿಗೆ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಮಾಡಿಕೊಡುವುದಕ್ಕೆ ಆಗಿದೆಯೇ? ಆಗಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು ಸ್ವಲ್ಪ ಕೇಳಲಿ. ಇದುವರೆಗೆ ಅದು ಯಾವುದು ಕೊಡುವುದಕ್ಕಾಗಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮೊದಲು ನಾನು ಏನು ಹೇಳುತ್ತೇನೆಂದು ಕೇಳುವುದಕ್ಕೆ ಇವರು ತಯಾರಿಲ್ಲ ಎಂದರೆ ನಾನೇನು ಮಾಡಬೇಕು. ನೀವು ಆಮೇಲೆ ಮಾತನಾಡಿ.

**(ಗೊಂದಲ)**

**ಸಭಾಪತಿಯವರು:-** ಮೊದಲು ಎಲ್ಲರು ಕುಳಿತುಕೊಳ್ಳಿ. ಅವರು ಮಾತನಾಡಲಿ. ಅವರು ಏನು ಹೇಳುತ್ತಾರೆಂದು ಕೇಳೋಣ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರಿಗೆ ನಂತರ ಅವಕಾಶವಿದೆ ಆಗ ಮಾತನಾಡಲಿ.

**(ಗೊಂದಲ)**

**ಸಭಾಪತಿಯವರು:–** ಮೊದಲು ಎಲ್ಲರು ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಮಾತನಾಡಲಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಐದು ವರ್ಷದಲ್ಲಿ ಅವರಿಗೆ ಯಾವುದೇ ಸೌಲಭ್ಯಗಳನ್ನು ಕೊಡುವುದಕ್ಕೆ ಆಗಿಲ್ಲ. 224 ಚದರ ಕಿ.ಮೀ ಇರುವುದನ್ನು 800 ಚದರ ಕಿ.ಮೀವರೆಗೆ ಮಾಡಿದ್ದೇವೆ. ಬೆಂಗಳೂರಿನಲ್ಲಿ 10.1 ಮಿಲಿಯನ್ ಜನಸಂಖ್ಯೆ ಇದೆ. ಇಡೀ ಜಗತ್ತಿನಲ್ಲಿ 10 ಮಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ಯಾವುದೇ ನಗರ ಒಂದೇ ಒಂದು ಕಾರ್ಪೊರೇಶನ್ ಇರತಕ್ಕಂಥ ನಿದರ್ಶನ ಇಲ್ಲ. ಇದು ಅನೇಕ ಕಡೆಗಳಲ್ಲಿ ಆಗಿದೆ. ಇದೇನು ಹೊಸದಾಗಿ ಸೃಷ್ಠಿ ಮಾಡಿರತಕ್ಕಂಥದ್ದಲ್ಲ. ಬಿ.ಜೆ.ಪಿಯವರು 2013ರಲ್ಲಿ ರೀಸ್ಟ್ರಕ್ಚರ್ ಮಾಡುತ್ತೇವೆಂದು ಹೇಳಿದ್ದಾರೆ. ನಾವು ಹೇಳಿದ್ದೇವೆ. ನಾವು ಒಂದು ಚುನಾಯಿತ ಕಾರ್ಪೊರೇಶನ್ ಇದೆ, ಜನರಿಂದ ಆಯ್ಕೆಯಾಗಿರತಕ್ಕಂಥ ಕಾರ್ಪೊರೇಶನ್ ಇದೆ ಅದನ್ನು ಮಧ್ಯದಲ್ಲಿ ಸೂಪರ್‌ಸೀಡ್ ಮಾಡುವುದು ಬೇಡ, ಅದಕ್ಕೆ ಮಧ್ಯದಲ್ಲಿ ಆಡಳಿತಾಧಿಕಾರಿ ಮಾಡುವುದು ಬೇಡ, ಅದನ್ನು ಅವಧಿ ಮುಗಿಯುವುದಕ್ಕಿಂತ ಮುಂಚಿತವಾಗಿ ಮಾಡುವುದು ಬೇಡ, ಅದನ್ನು ಮಾಡಿದರೆ ರಾಜಕೀಯ ಬಣ್ಣ ಬರುತ್ತದೆಂದು ನಾವು ಅದನ್ನು ಮಾಡುವುದಕ್ಕೆ ಹೋಗಲಿಲ್ಲ. ಇಲ್ಲದಿದ್ದರೆ ನಾವು ಅದನ್ನು ಮೊದಲೆ ಮಾಡುತ್ತಿದ್ದೆವು. ನಾವು ಬಂದ ತಕ್ಷಣ ಮಾಡಿ ಮುಗಿಸುತ್ತಿದ್ದೆವು. ಆ ಕಾರಣದಿಂದ ಮಾಡಿಲ್ಲ ಅಷ್ಟೆ. ನೀವು ಇದ್ದಕ್ಕಿದ್ದ ಹಾಗೆ ಮಾಡಿದ್ದೀರಿ, ಮೊದಲೇ ಸೂಪರ್‌ಸೀಡ್ ಮಾಡಬೇಕಾಗಿತ್ತು, ಈಗ ಏಕೆ ಮಾಡಿದ್ದೀರಿ? ಚುನಾವಣೆ ಮುಂದೂಡುವುದಕ್ಕೋಸ್ಕರ ಮಾಡಿದ್ದೀರಿ ಎಂದು ಹೇಳುವುದು ಸರಿಯಲ್ಲ. ಕಾಂಗ್ರೆಸ್ ಪಕ್ಷ ಚುನಾವಣೆಗೆ ಯಾವೊತ್ತು ಹೆದರಿಕೊಳ್ಳತಕ್ಕಂಥ ಪಕ್ಷ ಅಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾವು ಯಾವುದೇ ಚುನಾವಣೆಯನ್ನು ಎದುರಿಸಲಿಕ್ಕೆ ತಯಾರಾಗಿದ್ದೇವೆ. ಚುನಾವಣೆಗೆ ಹೆದರತಕ್ಕಂಥ ಪ್ರಶ್ನೆಯೇ ಇಲ್ಲ. ಲೋಕಾಯುಕ್ತದಲ್ಲಿ ಇದರ ಬಗ್ಗೆ ಆಕ್ಷೇಪಗಳು ಇವೆ, ಹೈಕೋರ್ಟಿನಲ್ಲಿ ಇದರ ಬಗ್ಗೆ ಆಕ್ಷೇಪಗಳಿವೆ, ಸಿಐಡಿ ರಿಪೋರ್ಟ್ ಆಗುತ್ತಿದೆ, ಸಿಐಡಿನಲ್ಲಿ inquiry ನಡೆಯುತ್ತಿದೆ. ಇದರಲ್ಲಿರತಕ್ಕಂಥ ಅವ್ಯವಹಾರಗಳಿಗಾಗಿ ಇಷ್ಟೆಲ್ಲಾ ನಡೆಯುತ್ತಿದೆ. ಜೊತೆಗೆ 800 ಚದರ ಕಿ.ಮೀ ವರೆಗೆ ಬೆಳೆದಿದೆ. ದೆಹಲಿಯಲ್ಲಿ ಮೂರು ವಿಭಜನೆಗಳಾಗಿವೆ. ಕೋಲ್ಕತ್ತಾದಲ್ಲಿ ಆಗಿದೆ. ಮುಂಬೈನಲ್ಲಿ ಆಗಿದೆ. ಲಂಡನ್‌ನಲ್ಲಿ 32 ಬರೋಗಳಿವೆ. ನಿಮ್ಮ ಪ್ರಣಾಳಿಕೆಯನ್ನು ಓದಿ ಹೇಳಲಾ? ಬಿಜೆಪಿಯವರ ಪ್ರಣಾಳಿಕೆಯನ್ನು ಓದಿ ಹೇಳಲಾ? ಅದನ್ನೆಲ್ಲಾ ಉತ್ತರ ಕೊಡುವಾಗ ಹೇಳುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಪರಿಸ್ಥಿತಿ ಹೇಗಾಗಿದೆ ಎಂದರೆ 198 ವಾರ್ಡ್‌ಗಳಿಗೆ ಹೇಗೂ ಚುನಾವಣೆ ಆಗುತ್ತದೆಂದು ಗೊತ್ತಾದ ಮೇಲೆ ಅವರು ಚುನಾವಣಾ ಪ್ರಣಾಳಿಕೆಯ ಪ್ರಚಾರವನ್ನು ಇಲ್ಲಿಂದಲೇ ಆರಂಭ ಮಾಡಿ ಬಿಟ್ಟರು. ಇಲ್ಲಿ ವಿಧಾನ ಪರಿಷತ್ತಿನಿಂದಲೇ ಚುನಾವಣಾ ಪ್ರಚಾರ ಪ್ರಾರಂಭ ಮಾಡಿಬಿಟ್ಟರು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹಾಗೇನಿಲ್ಲ. ಇಬ್ಬರು ಒಟ್ಟಿಗೆ ಚುನಾವಣೆಗೆ ಹೋಗೋಣ ನಡೆಯಿರಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರಿಗೆ ಈ ಬಿಲ್ಲಿನ ಕಥೆ ಮುಗಿಯಿತು ಎಂದು ಗೊತ್ತಾಯಿತು. ಅದಕ್ಕೆ ಈ ರೀತಿ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಓಟ್ ಕೇಳುವುದಕ್ಕೆ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತೇನೆ. ಇಬ್ಬರು ಜೊತೆಗೆ ಹೋಗೋಣ. ಅದರ ಚರ್ಚೆ ನಂತರ ಮಾಡೋಣ ಬಿಡಿ. ಈಗ ನಾನೇನು ಹೇಳುತ್ತೇನೆಂದರೆ 2013ರ ಪ್ರಣಾಳಿಕೆಯಲ್ಲಿ ನೀವೇ ರೀಸ್ಟ್ರಕ್ಚರ್ ಮಾಡುತ್ತೇವೆಂದು ಹೇಳಿ ಈಗ...

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅವರು ರಾಜ್ಯದ ಮುಖ್ಯಮಂತ್ರಿಗಳು, ಆರೂವರೆ ಕೋಟಿ ಜನರ ಪ್ರತಿನಿಧಿಗಳು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇಲ್ಲ ಎಂದು ಹೇಳಿದವರು ಯಾರು?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, 2013ರಲ್ಲಿ ನಾವು ಹೇಳಿದ್ದು ಹಾಗೂ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಕೂಡ ಎರಡು ಮಹಾನಗರ ಪಾಲಿಕೆಯನ್ನು ಆಡಳಿತಾತ್ಮಕವಾಗಿ ಸ್ವಲ್ಪ ಬಿಗಿ ಮಾಡುತ್ತೇವೆ ಎನ್ನುವುದನ್ನು ಹೇಳಿದ್ದೇವೆ ಹೊರತು ಮೂರು ಮೇಯರ್‌ರವರನ್ನು ಮಾಡುತ್ತೇವೆಂದು ಯಾರೂ ಹೇಳಿಲ್ಲ.

(ಗೊಂದಲ)

**Sri SIDDARAMAIAH:- What do you mean by 'restructing'?**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಆಡಳಿತ ವಿಕೇಂದ್ರೀಕರಣ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಅದು ಅರ್ಥವೇ? **Administration strengthen** ಮಾಡುತ್ತೇವೆಂದರೆ, ಆಡಳಿತ ಸುಧಾರಣೆ ಮಾಡುತ್ತೇವೆಂದರೆ **I can understand.** ಆದರೆ **'restructuring of the existing BBMP'** ಎಂದು ಹೇಳಿದ್ದಾರೆ.

(ಗೊಂದಲ)

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಒಂದು ಕೋಟಿ ಜನಸಂಖ್ಯೆಗಿಂತ ಜಾಸ್ತಿ ಯಾವುದು ನಗರ ಇಲ್ಲ ಎಂದು ಹೇಳಿದ್ದಾರೆ. ಆದರೆ ಚೆನ್ನೈ ಒಂದು ಕೋಟಿ ಮೇಲೆ ಇದೆ. ಕೋಲ್ಕತ್ತಾ ಒಂದು ಕೋಟಿ ಮೇಲೆ ಇದೆ. ಮುಂಬೈ ಒಂದು ಕೋಟಿಗಿಂತ ಜಾಸ್ತಿ ಇದೆ. ತಪ್ಪು ಸಂದೇಶ ಹೋಗುವುದು ಬೇಡ.

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ಅವರಿಗೆ ಮಾತನಾಡಲು ಬಿಡಿ. ಮುಖ್ಯಮಂತ್ರಿಗಳು ಮಾತನಾಡುವಾಗ ನೀವು ಮಾತನಾಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಅವರು ಮಾತನಾಡುವಾಗ ಅವರ ಮಾತನ್ನು ಪೂರ್ತಿ ಕೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸುರೇಶ್ ಕುಮಾರ್‌ರವರು ನಗರಾಭಿವೃದ್ಧಿ ಸಚಿವರಾಗಿದ್ದರು. ಅವರ ಹೇಳಿಕೆ ಈ ರೀತಿ ಇದೆ (THE HINDU, DT. 12.06.2012):

> "Minister for Urban Development S. Suresh Kumar has said that it was time smaller urban local bodies were created by dividing two big civic bodies – the Bruhat Bangalore Mahanagara Palike (BBMP) and the Hubli-Dharwad Municipal Corporation (HDMC). …. "

ಇದನ್ನು ನಾನು ಹೇಳಿದ್ದೇನೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಎಲ್ಲಿ ಭಾಷಣ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದು ಅವರ ಸ್ಟೇಟ್ಮೆಂಟ್.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಖಾಸಗಿಯಾಗಿ ಸ್ನೇಹಿತರ ಜೊತೆ ಮಾತನಾಡುವಂಥ ಸಂದರ್ಭದಲ್ಲಿ...

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದು ಅವರ ಸ್ಟೇಟ್ಮೆಂಟ್. It further reads thus :

> "Mr. Kumar told The Hindu that the need of the hour was to go for the trifurcation ……".

ಇದು ಅವರ ಅಭಿಪ್ರಾಯ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಖಾಸಗಿ ವ್ಯಕ್ತಿಗಳ ಜೊತೆ ಚರ್ಚೆ ಮಾಡುತ್ತಿರುವಂಥ ಸಂದರ್ಭದಲ್ಲಿ ಅವರು ಮಾತನಾಡಿದ್ದಾರೆ. ಅದು ಸರ್ಕಾರದ ತೀರ್ಮಾನ ಅಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಒಬ್ಬ ಮಂತ್ರಿ ಹೇಳಿದ ಮೇಲೆ ಅದು ಸರ್ಕಾರದ ತೀರ್ಮಾನ ಅಲ್ಲವೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಶಾಮನೂರು ಶಿವಶಂಕರಪ್ಪನವರು ಏನು ಹೇಳಿದರು. ಅವರು ರೈತರಿಗೆ ದುಡ್ಡು ಕೊಡುವ ವಿಚಾರ ಬಂದಾಗ ಆಕಾಶದಿಂದ ದುಡ್ಡು ಉದುರುವುದಿಲ್ಲವೆಂದು ಹೇಳಿದರು. ನನ್ನ ಜೇಬಿನಿಂದ ದುಡ್ಡು ಕೊಡುವುದಿಲ್ಲವೆಂದು ಮಂತ್ರಿಗಳು ಹೇಳಲಿಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಎಲ್ಲರು ಕೊಡುವುದು ಸರ್ಕಾರದ ದುಡ್ಡು. ಯಾರು ತಮ್ಮ ಜೇಬಿನಿಂದ ಕೊಡುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರಾದ ಶ್ರೀ ಜಗದೀಶ್ ಶೆಟ್ಟರ್ ಹೇಳಿದರು ಎಂದು ಹೇಳುತ್ತಿದ್ದಾರೆ. ಸುಳ್ಳು ಏಕೆ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಹೌದು ಎಂದು ಸುರೇಶ್ ಕುಮಾರ್‌ರವರು ಒಪ್ಪಿಕೊಂಡಿದ್ದಾರೆ. ನಾನು ಹೇಳಿದ್ದು ನಿಜ ಎಂದು ಒಪ್ಪಿಕೊಂಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಜಗದೀಶ್ ಶೆಟ್ಟರ್‌ರವರದ್ದು ಓದಿ. ಏಕೆ ಸುಳ್ಳು ಹೇಳುತ್ತೀರಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹೇಳುತ್ತೇನೆ. ಅವರದ್ದು ಓದಿ ಹೇಳುತ್ತೇನೆ. ಅವರದ್ದು ಕೂಡ ಹೇಳುತ್ತೇನೆ ಕೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಜಗದೀಶ್ ಶೆಟ್ಟರ್‌ರವರದ್ದು ಓದಿ. ಏಕೆ ಸುಳ್ಳು ಹೇಳುತ್ತೀರಿ. ಇಷ್ಟೊಂದು ಸುಳ್ಳು ಹೇಳಿರುವಂಥ ಮುಖ್ಯಮಂತ್ರಿ ಕರ್ನಾಟಕದಲ್ಲಿ ಯಾರೂ ಇರಲಿಲ್ಲ. ಬರೀ ಸುಳ್ಳು ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಬಿ.ಜೆ.ಪಿ. ಸುಳ್ಳು ಎಂದು ಹೇಳುವುದಕ್ಕೆ ಇನ್ನೊಂದು ಹೆಸರು. ಇದು ಅವರ ಅನ್ವರ್ಥನಾಮ. ಸುಳ್ಳು ಎನ್ನುವುದಕ್ಕೆ ಅನ್ವರ್ಥನಾಮ ಎಂದರೆ ಭಾರತೀಯ ಜನತಾ ಪಕ್ಷ. ಸುಳ್ಳನ್ನು ನೂರು ಬಾರಿ ಹೇಳಿ ಹೇಳಿ ಸತ್ಯ ಮಾಡಲಿಕ್ಕೆ ಹೊರಟಿರತಕ್ಕಂಥವರು ಭಾರತೀಯ ಜನತಾ ಪಕ್ಷ. ಕಾಂಗ್ರೆಸ್ ಪಕ್ಷ ಯಾವೊತ್ತು ಸುಳ್ಳು ಹೇಳುವುದಿಲ್ಲ. ನಾನು ಯಾವೊತ್ತು ಕೂಡ ಸುಳ್ಳು ಹೇಳಿ ರಾಜಕಾರಣ ಮಾಡಿಲ್ಲ. ಮಾಡಬೇಕಾದಂಥ ಅಗತ್ಯ ಕೂಡ ಇಲ್ಲ. ಮಾಡುವುದು ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಇಷ್ಟು ಜನ ನಿಂತು ಮಾತನಾಡಿದರೆ ಏನು ಆಗುತ್ತದೆ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಜಗದೀಶ್ ಶೆಟ್ಟರ್‌ರವರು ಹೇಳಿರುವ ವಿಚಾರ ಹುಡುಕುತ್ತಿದ್ದಾರೆ. ಆದರೆ ಎಲ್ಲಿ ಹುಡುಕಿದರು ಸಿಗುವುದಿಲ್ಲ. ಅವರು ಹೇಳಿಯೇ ಇಲ್ಲ. ಜಗದೀಶ್ ಶೆಟ್ಟರ್‌ರವರ ಹೇಳಿಕೆ ಎಲ್ಲಿ ಹುಡುಕಿದರೂ ಸಿಗುವುದಿಲ್ಲ. ನೀವು ಸುಳ್ಳು ಹೇಳುತ್ತಿದ್ದೀರಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಅದನ್ನು ಕೆಳಮನೆಯಲ್ಲಿ ತೋರಿಸಿದ್ದೇನೆ.

**(ಗೊಂದಲ)**

**(4–00 ಗಂಟೆ)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಶ್ರೀ ಜಗದೀಶ್ ಶೆಟ್ಟರ್‌ರವರು ಒಪ್ಪಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ ಇದು ಮತ್ತೊಂದು ಸುಳ್ಳು. ಇವರು ಸುಳ್ಳಿನ ಸರದಾರರು. ಇದರಲ್ಲಿ ಏನು ಅನುಮಾನ ಬೇಡ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರಿನ ಬಗ್ಗೆ ಅವರನ್ನು ಅಡ್ವೈಸರ್ ಮಾಡಿಕೊಂಡಿದ್ದರು. ಅವರು ಕೊಟ್ಟಿರುವಂತಹ ವರದಿಯನ್ನು ನೋಡಿ.

**(ಗೊಂದಲ)**

**ಸಭಾಪತಿಯವರು:–** ಎಲ್ಲರು ಮಾತನಾಡಿದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ಮಾತನಾಡುವುದಕ್ಕೆ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಸುಳ್ಳು ಹೇಳುವುದರಲ್ಲಿ ನೋಬಲ್ ಪ್ರಶಸ್ತಿಯನ್ನು ಈ ದೇಶದಲ್ಲಿ ಕೊಡಬೇಕೆಂದರೆ. . .

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಇದರ ಬಗ್ಗೆ ಉತ್ತರ ಹೇಳುವಾಗ ಹೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮತ್ತೊಂದು ಸುಳ್ಳು.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಸೀತಾರಾಂ ರವರು ಮಾತನಾಡುತ್ತಾರೆ ಬಿಡಿ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳಿಗೆ ಅವರ ಪಕ್ಷದವರೇ ದಾರಿ ತಪ್ಪಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಶ್ರೀ ವಿ. ಸೋಮಣ್ಣ, ನೀನು ಹೇಳಿದರು ಕೂಡ ದಾರಿ ತಪ್ಪುವುದಿಲ್ಲ. ಯಾರು ಹೇಳಿದರು ದಾರಿ ತಪ್ಪುವುದಿಲ್ಲ. ಬಿಜೆಪಿ ಯವರೆ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಬಿಬಿಎಂಪಿಯನ್ನು restructure ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. ಎರಡನೆಯದಾಗಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರ ಒಂದು ಸೆಮಿನಾರ್‌ನಲ್ಲಿ ಹೇಳಿದ್ದಾರೆ. ಬೇಕಾದರೆ ಶ್ರೀ ಜಗದೀಶ್ ಶೆಟ್ಟರ್‌ರವರನ್ನೇ ಕೇಳಿಕೊಂಡು ಬಂದು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ದಾರಿ ತಪ್ಪಿಸುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ದಾರಿ ತಪ್ಪಿದ್ದಾರೆ. ದಾರಿ ತಪ್ಪಿದರೆ ಶ್ರೀ ಕೆ.ಎಸ್. ಈಶ್ವರಪ್ಪನವರು ತಪ್ಪಬೇಕು. ನಾವು ದಾರಿ ತಪ್ಪುವುದಿಲ್ಲ. Our thinking is very very clear. ನಮಗೆ clarity ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರನ್ನು ದಾರಿ ತಪ್ಪಿಸುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾವುದೇ ದಾರಿ ತಪ್ಪಿಸುವಂಥದ್ದು ಇಲ್ಲ. ಭಾರತೀಯ ಜನತಾ ಪಕ್ಷದವರಿಗೆ ನಿನ್ನೆಯ ದಿವಸ ಏನು ಹೇಳಿದ್ದೇವೆ, ಇವತ್ತು ಏನು ಹೇಳಿದ್ದೇವೆ, ನಾಳೆ ಏನು ಹೇಳುತ್ತೇವೆ ಎನ್ನುವ ಪರಿಜ್ಞಾನವೇ ಇರುವುದಿಲ್ಲ. ಏನು ಬೇಕಾದರೂ ಹೇಳುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗೆ ದಾರಿ ತಪ್ಪಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಕ್ಷದಂತಹ ಸುಳ್ಳು ಹೇಳತಕ್ಕಂತಹ, ಗೋಸುಂಬೆ ತರಹ ಬಣ್ಣ ಬದಲಾಯಿಸಿಕೊಳ್ಳುವಂತಹ ಪಾರ್ಟಿ ಇನ್ನೊಂದು ಇಲ್ಲ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**Sri R.V. VENKATESH:-** What is this?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಬಿಜೆಪಿ ಯವರ ಚುನಾವಣಾ ಪ್ರಣಾಳಿಕೆಯನ್ನು ಓದಿ ಹೇಳಲೇ? ಅದರಲ್ಲಿ ಬಿಬಿಎಂಪಿ ಯ ಪುನರ್ ರಚನೆ, ಬಿಬಿಎಂಪಿ ಯ ಪುನರ್ ರಚನೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಈಗ ವಿಧೇಯಕದ ಮೇಲೆ ಚರ್ಚೆಯಾಗುತ್ತಿದೆ. ಸರ್ಕಾರ ತೆಗೆದುಕೊಂಡು ಬಂದಿರುವಂತಹ ವಿಧೇಯಕದ ಮೇಲೆ ಚರ್ಚೆಯಾಗುತ್ತಿದೆ. ಪ್ರತಿಯೊಬ್ಬರು ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ನಾನು ಹೆಚ್ಚಿನ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಅವರವರು ಅವರ ಅಭಿಪ್ರಾಯಗಳನ್ನು ಹೇಳಲಿ. ನಿಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದಾಗ ಬೇರೆಯವರು ಹೇಳಿದ್ದು ತಪ್ಪಿದ್ದರೆ ಹೇಳಬಹುದೇ ಹೊರತು, ಮಧ್ಯದಲ್ಲಿ ಮಾತನಾಡುತ್ತಾ ಹೋದರೆ ಚರ್ಚೆಗೆ ಅವಕಾಶ ಸಿಗುವುದಿಲ್ಲ. ಆದರೂ ಕೂಡ . . .

**(ಗೊಂದಲ)**

ಅದರೂ ಕೂಡ ಚರ್ಚೆಯಲ್ಲಿ ಮಾತನಾಡುವಾಗ ಸ್ವಲ್ಪ ವ್ಯಂಗ್ಯ, ಹಾಸ್ಯ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆದರೆ ಯಾರು ಮಾತನಾಡುತ್ತಿರುತ್ತಾರೆ ಅವರ ಒಂದೊಂದು ಪದಕ್ಕೂ ಬಾಯಿ ಹಾಕಿದರೆ ಕಷ್ಟವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇಡೀ ಸದನ ಸದಸ್ಯರುಗಳು ಕೇಳಬೇಕಾಗುತ್ತದೆ. ಅವರಿಬ್ಬರ ಮಾತನ್ನು ಕೇಳುವುದಿಲ್ಲ ಎಂದರೆ ಕಷ್ಟವಾಗುತ್ತದೆ. ಯಾರಾದರು ಸದಸ್ಯರುಗಳು ಮಾತನಾಡುತ್ತಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಮಧ್ಯದಲ್ಲಿ ಮಾತನಾಡುತ್ತೇನೆಂದರೆ ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಧ್ಯದಲ್ಲಿ ಮಾತನಾಡಬೇಕೆಂದರೆ ಅವರಿಗೂ ಕೂಡ ಅವಕಾಶ ಕೊಡುತ್ತೇನೆ. ಅವರು ಹೇಳುತ್ತಿದ್ದಾರೆ ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಾಗ ಅವರಿಗೂ ಅವಕಾಶವನ್ನು ಸ್ವಾಭಾವಿಕವಾಗಿ ಕೊಡುತ್ತೇನೆ. ಆದರೆ ಯಾರಿಗೂ ಮಾತನಾಡುವುದಕ್ಕೆ ಬಿಡುವುದಿಲ್ಲ. ಪದ ಪದಕ್ಕೂ ಮಧ್ಯ ಮಾತನಾಡುವುದು ಬೇಡ. ನಿಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದಾಗ ಹಿಂದೆ ಮಾತನಾಡಿದಂತಹ ಸದಸ್ಯರು ಈ ರೀತಿಯಾಗಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಅದು ಸರಿಯಲ್ಲವೆಂದು ಹೇಳಬೇಕೇ ಹೊರತು, ಅವರು ಮಾತನಾಡುವಾಗ ಮಧ್ಯದಲ್ಲಿಯೇ ಮಾತನಾಡಿದರೆ ನಾನು ಸಭೆ ನಡೆಸುವುದಕ್ಕಾಗುವುದಿಲ್ಲ. ಸಭೆ ಮುಂದಕ್ಕೆ ಹೋಗುವುದಿಲ್ಲ. ಚರ್ಚೆಯ ದಿಕ್ಕು ತಪ್ಪುತ್ತದೆ. ಹಾಗಾಗಿ ನಮ್ಮ ಸೀತಾರಾಂರವರು ಮಾತನಾಡುತ್ತಿದ್ದರು. ಶ್ರೀ ಸೀತಾರಾಂರವರ ಚರ್ಚೆ ಮುಗಿದ ಮೇಲೆ ಮುಂದೆ ಯಾವ ಸದಸ್ಯರಿಗೆ ಅವಕಾಶ ಕೊಡುತ್ತೇನೆ ಅವರು ಮಾತನಾಡಲಿ. ಮಧ್ಯ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೆ. ಮಧ್ಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಕೇಳಿದರು. ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟೆ. ಅವರಿಬ್ಬರಿಗೂ ಗೌರವವನ್ನು ಕೊಟ್ಟೇ ಕೊಡುತ್ತೇನೆ. ಬೇರೆಯವರಿಗೆ ಅವಕಾಶ ಕೊಡುವುದೇ ಇಲ್ಲವೆಂದಲ್ಲ. ಕೊಟ್ಟೇ ಕೊಡುತ್ತೇನೆ. ಒಂದು ಮಾತು ಅಥವಾ ಎರಡು ಮಾತುಗಳಾಗಬಹುದು. ಆದರೆ ಅವರ ಒಂದೊಂದು ಮಾತಿಗೂ ಮಧ್ಯ ಮಾತನಾಡುತ್ತಿದ್ದರೆ ಚರ್ಚೆ ಮುಂದಕ್ಕೆ ಹೋಗುವುದಿಲ್ಲ. ಶ್ರೀ ಸೀತಾರಾಂರವರು ತಮ್ಮ ಮಾತನ್ನು ಮುಂದುವರೆಸಿ ಬೇಗ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ನನಗೇನು ಇಲ್ಲ. ಆದರೆ ಬೆಂಗಳೂರು ನಗರವನ್ನು ಛಿದ್ರ ಛಿದ್ರ ಮಾಡುವುದಕ್ಕೆ ಈ ಕಡೆ ಬಡಿದಾಟ, ಕಿತ್ತಾಟ ಇಷ್ಟೊಂದು ಕೇಳಿ ನಮಗೆ ದಿಗ್ಭ್ರಮೆಯಾಗುತ್ತಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಸೀತಾರಾಂರವರು ಮಾತನ್ನು ಮುಂದುವರೆಸಲಿ. ನಾನು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಏನೇನು ಹೇಳಿದ್ದೇನೆ ಅದಕ್ಕೆ

ಎಲ್ಲಾ ಹೇಳುತ್ತೇನೆ. ವಿಧಾನಸಭೆಯಲ್ಲಿ ಉತ್ತರವನ್ನು ಕೊಡುವಂತಹ ಸಮಯದಲ್ಲಿ ಹೇಳಿದ್ದೇನೆ. ಶ್ರೀ ಜಗದೀಶ್ ಶೆಟ್ಟರ್. . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳೇ ಮತ್ತೆ ಸುಳ್ಳು ಹೇಳಬೇಡಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸುಳ್ಳು ಅಲ್ಲ.

**(ಗೊಂದಲ)**

ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ರವೀಂದ್ರರವರನ್ನು ಅಡ್ವೈಸರ್ ಆಗಿ ನೇಮಕ ಮಾಡಿಕೊಂಡಿದ್ದರು. ಶ್ರೀ ರವೀಂದ್ರರವರು ಒಂದು ಸೆಮಿನಾರ್ ಅನ್ನು ಏರ್ಪಡಿಸಿದ್ದರು. ಆ ಸೆಮಿನಾರ್‌ನಲ್ಲಿ ಇದೇ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿ ಭಾಗವಹಿಸಿ. . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಭಾಷಣದಲ್ಲಿ ಹೇಳಿರುವುದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಭಾಷಣ ಬೇರೆ, ಮಾತು ಬೇರೆ, ಹೇಳುವುದು ಬೇರೆ ಬೇರೆನಾ? ಏನು ಹೇಳುತ್ತಾರೆ. Being Chief Minister of the State…ಏನು double role ಗಳಿವೆಯೇ? ನೀವುಗಳು ಏನು ಗೋಸುಂಬೆಗಳಾ? ಕ್ಷಣ ಕ್ಷಣಕ್ಕೂ ಬಣ್ಣವನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಎಲ್ಲಾ ಮಠಮಾನ್ಯಗಳನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆಂದು ಹೇಳಿದರು. ಆದರೆ ಅದು Government Order ಆಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಮಾಜಿ ಮುಖ್ಯ ಕಾರ್ಯದರ್ಶಿಗಳಾಗಿದ್ದ ಶ್ರೀ ರವೀಂದ್ರರವರನ್ನು urban development ಬಗ್ಗೆ, ಬೆಂಗಳೂರು ನಗರದ ಬಗ್ಗೆ ಅಡ್ವೈಸ್ ಮಾಡುವುದಕ್ಕೆ ನೇಮಕ ಮಾಡಿಕೊಂಡಿದ್ದರು. ಅವರು ಇದರ ಬಗ್ಗೆ ಒಂದು ಸೆಮಿನಾರ್ ಅನ್ನು ಮಾಡಿದ್ದರು. ಅವರು ಅಲ್ಲಿ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿ ಭಾಷಣ ಮಾಡುತ್ತಾ ಬೆಂಗಳೂರು ನಗರವನ್ನು ಎರಡು ಅಥವಾ ಮೂರು ವಿಭಾಗಗಳನ್ನಾಗಿ ಮಾಡಲೇಬೇಕೆಂದು ಹೇಳಿದ್ದರು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದೂ restructure ಮಾಡಬೇಕೆಂದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ ಹೇಳಿಕೆಯನ್ನು ನಾನು ಇಲ್ಲಿ produce ಮಾಡುತ್ತೇನೆ. ಅವರು ಮಾಡಿರುವಂತಹ ಸ್ಟೇಟ್‌ಮೆಂಟ್ ಅನ್ನು ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅದನ್ನು produce ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೂ, Government Order ಗೂ ವ್ಯತ್ಯಾಸ ಇಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಎರಡು ಒಂದೇ. Whatever the Chief Minister says, that is the voice of the Government.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಇಡೀ ರಾಜ್ಯದಲ್ಲಿರುವ ಮಠಮಾನ್ಯಗಳನ್ನು ನಾನು ಸ್ವಾಧೀನಪಡಿಸಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಒಬ್ಬರು ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಒಳಗಡೆ ಒಂದು, ಹೊರಗಡೆ ಒಂದು ಹೇಳಬಹುದಾ, ಏನು ಬೇಕಾದರೂ ಹೇಳಬಹುದೇ? Whatever the Chief Minister says, that is the stand of the Government, that is the voice of the Government and that is the opinion of the Government.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸೀತಾರಾಂರವರೆ ನಿಮ್ಮ ಚರ್ಚೆಯನ್ನು ಮುಂದುವರೆಸಿ. ದಯಮಾಡಿ ಇನ್ನು ಯಾರು ಮಧ್ಯ ಮಾತನಾಡಬಾರದು. ಶ್ರೀ ಸೀತಾರಾಂರವರೆ ದಯಮಾಡಿ ನಿಮ್ಮ ಚರ್ಚೆಯನ್ನು ಮುಂದುವರೆಸಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸೀತಾರಾಂ:–** ಮಾನ್ಯ ಸಭಾಪತಿಯವರೆ, ನನ್ನ ಮಾತುಗಳನ್ನು ಮುಂದುವರೆಸುತ್ತಾ. . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಅಗ್ಗದ ಶರಾಬನ್ನು ಜಾರಿಗೆ ತೆಗೆದುಕೊಂಡು ಬರುತ್ತೇನೆ, ಮಠಮಾನ್ಯಗಳನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆಂದು ಹೇಳಿದರು...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಪತ್ರಿಕಾ ಹೇಳಿಕೆಯನ್ನು ತಮಗೆ ತೋರಿಸಲೇನು?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ನಾನು ಹೇಳಿಲ್ಲ, ನೀವು ಪೇಪರ್ ಕಟಿಂಗ್ಸ್ ಎಲ್ಲಾ ತೋರಿಸುವುದಕ್ಕೆ ಹೋಗಬೇಡಿ. I am making it... I have clarified. I have already clarified. ಅಗ್ಗದ ದರಗಳು ಎಂದು ಹೇಳಿಯೂ ಇಲ್ಲ, ಏನೂ ಮಾಡಿಲ್ಲ. ನೀವು ಸುಮ್ಮನೆ ಏನೋ ಹೇಳುತ್ತಿದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಆ ಪತ್ರಿಕಾ ಹೇಳಿಕೆಯನ್ನು ತಮಗೆ ತೋರಿಸುತ್ತೇನೆ.

**Sri SIDDARAMAIAH:-** No, it's not correct.

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಉತ್ತರ ನೀಡುವಾಗ ಮಾನ್ಯ ಜಗದೀಶ್ ಶೆಟ್ಟರ್ ಅವರ ಹೇಳಿಕೆಯನ್ನು ಉಲ್ಲೇಖಿಸುವುದಾದರೆ, ನಾನು ಕೂಡ ಮಠ–ಮಾನ್ಯಗಳ ಬಗ್ಗೆ, ಅಗ್ಗದ ಸಾರಾಯಿ ಬಗ್ಗೆ ಮುಖ್ಯಮಂತ್ರಿಗಳಾದ ತಾವು ಏನು ಹೇಳಿಕೆ ಕೊಟ್ಟಿದ್ದೀರಿ, ಅದನ್ನು ತೋರಿಸುತ್ತೇನೆ. ಯಾವುದೇ ಹೇಳಿಕೆಗಳು ಸರ್ಕಾರಿ ಆದೇಶಗಳಾಗುವುದಿಲ್ಲ. ಆದೇಶವನ್ನು ಮಾಡಲು ಸರ್ಕಾರ ಇದೆ, ಕ್ಯಾಬಿನೆಟ್ ಇದೆ, ಅದು ಅಲ್ಲಿ ತೀರ್ಮಾನವಾಗಬೇಕು. ಮುಖ್ಯಮಂತ್ರಿಗಳಾಗಲಿ, ಬೇರೆ ಯಾವುದೇ ಸಚಿವರಾಗಲಿ ನೀಡುವಂತಹ ಪತ್ರಿಕಾ ಹೇಳಿಕೆಗಳು Government Order ಆಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಒಂದು ರಾಜ್ಯದ ಮುಖ್ಯಮಂತ್ರಿ ಏನು ಹೇಳಿಕೆ ನೀಡುತ್ತಾರೆ, ಈಗ ಈಶ್ವರಪ್ಪನವರು 'ಮುಖ್ಯಮಂತ್ರಿಯವರು ಅಗ್ಗದ ಸಾರಾಯಿ ತರುವುದಾಗಿ ಹೇಳಿಕೆ ಕೊಟ್ಟಿದ್ದಾರೆ' ಎಂದು ಏನು ತಿಳಿಸಿದರು, ನಾನು ಆ ರೀತಿ ಎಲ್ಲಿಯೂ ಹೇಳಿಯೇ ಇಲ್ಲ. ಗೊತ್ತಾಯಿತೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ತಾವೀಗ ಸುಳ್ಳು ಹೇಳುತ್ತಿದ್ದೀರಿ, ಪತ್ರಿಕಾ ಹೇಳಿಕೆಯ ಪ್ರತಿ ನನ್ನಲ್ಲಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಆ ರೀತಿ ಎಲ್ಲಿಯೂ ಹೇಳಿಲ್ಲ ಎಂದು ನಾನು ಹೇಳುತ್ತಿದ್ದೇನೆ. I am making a statement; I have not made such a statement.

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಹೇಳಿಕೆ ಕೊಟ್ಟಿದ್ದೀರಿ, paper cutting ಕೊಡಲೇನು?

**Sri SIDDARAMAIAH:-** No, paper cutting is not an authenticated document.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮತ್ತೆ ಈಗಷ್ಟೇ ತಾವು 'ಮಾನ್ಯ ಜಗದೀಶ್ ಶೆಟ್ಟರ್‌ರವರ ಪತ್ರಿಕಾ ಹೇಳಿಕೆಯನ್ನು ತಮಗೆ ತೋರಿಸುತ್ತೇನೆ' ಎಂದು ಏಕೆ ಹೇಳಿದಿರಿ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ನಾನು ಅವರ ಎದುರಿಗೇ ಹೇಳುತ್ತೇನೆ, ಅವರು ಆ ರೀತಿ ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ ಎಂದು ಹೇಳಲಿ ನೋಡೋಣ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದು ಕೂಡ ಪತ್ರಿಕಾ ಹೇಳಿಕೆಯೇ ಆಗಿರುವಾಗ ಅದನ್ನೇಕೆ ತೋರಿಸುವುದಾಗಿ ಹೇಳುತ್ತಿದ್ದೀರಿ?

**(ಗೊಂದಲ)**

**Sri SIDDARAMAIAH:-** Let him say. Let him deny. Let him deny.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಗೌರ್ನಮೆಂಟ್ ಆರ್ಡರ್ ತೋರಿಸುತ್ತಿದ್ದೀರಿ, ಅದು ಕೂಡ ಗೌರ್ನಮೆಂಟ್ ಸ್ಟೇಟ್‌ಮೆಂಟ್.

**(ಗೊಂದಲ)**

**Sri SIDDARAMAIAH:-** Let him deny. Let him deny. Let him deny. Let him deny.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಹೇಳಿಕೆಗಳ ಸಾಕಷ್ಟು paper cuttings ತಮಗೆ ಕೊಡೋಣವೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** 'ಬಿ.ಬಿ.ಎಂ.ಪಿ.ಯ ಪುನರ್‌ರಚನೆ' ಇದು ನಿಮ್ಮ ಚುನಾವಣಾ ಪ್ರಣಾಳಿಕೆಯ ಒಂದು ಅಂಶವಾಗಿದೆ. ಇದು ಸುಳ್ಳೇನು?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** 'ಪುನರ್‌ರಚನೆ' ಎಂದರೇನು?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿರುವುದು ಸುಳ್ಳೇನು? ಪುನರ್ ರಚನೆ ಎಂದರೇನು?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಪುನರ್‌ರಚನೆ ಎಂದರೆ, ಇಂಗ್ಲೀಷ್‌ನಲ್ಲಿ 'Reorganization' ಎಂದು ಅರ್ಥ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** 'ಪುನರ್‌ರಚನೆ' ಎಂಬುದರ ಅರ್ಥವೇನೆಂದು ಹೇಳಿ ನೋಡೋಣ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** 'ಪುನರ್‌ರಚನೆ' ಎಂದರೇನು? Reorganization ಎಂದು, ಇಂಗ್ಲೀಷ್‌ನಲ್ಲಿ ಇದನ್ನು Reorganization ಎಂದು ಹೇಳುತ್ತೇವೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಚುನಾವಣೆ ಗ್ಯಾರಂಟಿಯಾದ ಮೇಲೆ ನೀವು ಪೂರಾ ದಾರಿ ತಪ್ಪುತ್ತಿದ್ದೀರಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಇದು ಇವರ ಚುನಾವಣಾ ಪ್ರಣಾಳಿಕೆ. ಇವರ ಈ ಚುನಾವಣಾ ಪ್ರಣಾಳಿಕೆಯಲ್ಲಿ ಬಿ.ಬಿ.ಎಂ.ಪಿ. ಪುನರ್‌ರಚನೆ, ಮೇಯರ್ ಹುದ್ದೆಗೆ ನೇರ ಚುನಾವಣೆ, ಮೇಯರ್ ಮತ್ತು Mayor-in-Council ಗೆ 5 ವರ್ಷಗಳ ಕಾಲಾವಧಿ, ಇದು ನಿಮ್ಮ ಚುನಾವಣಾ ಪ್ರಣಾಳಿಕೆ, That was the promise you have made in your election manifesto. ಪುನರ್‌ರಚನೆ ಎಂದರೇನು? ನಿಮಗೆ ಕನ್ನಡ ಗೊತ್ತಿಲ್ಲವೆ? **'**ಪುನರ್‌ರಚನೆ**'** ಎಂದರೆ 'Reorganization'.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಬಿ.ಬಿ.ಎಂ.ಪಿ. ಪುನರ್‌ರಚನೆ ಎಂದರೆ, ಅದನ್ನು 3 ಭಾಗ ಮಾಡುತ್ತೇವೆ ಎಂದು ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆಯೇ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಪುನರ್‌ರಚನೆ ಎಂದರೇನು? ನಿಮಗೆ ಕನ್ನಡ ಗೊತ್ತಿಲ್ಲವೆ? ಪುನರ್ ರಚನೆ ಎಂದರೆ reorganization.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಕನ್ನಡದಲ್ಲಿ **'**ಪುನರ್‌ರಚನೆ**'** ಎಂದರೇನು ಎಂದು ಇವರಿಗೆ ಹೇಳಿಕೊಡಬೇಕಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ತಾವು ಇಬ್ಬರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೀರಾ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದನ್ನೇ ಈಗ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ ಎಂದರೆ ಏನು ಹೇಳುವುದು?

**(ಗೊಂದಲ)**

**ಸಭಾಪತಿಯವರು:–** ಈಗ ವಿಧೇಯಕದ ಬಗ್ಗೆ ಚರ್ಚೆ ಬೇಡವೇ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಪುನರ್‌ರಚನೆ ಎಂದರೇನು ಎಂದು ಇವರಿಗೆ ಅರ್ಥ ವಿವರಣೆ ಹೇಳಿ. ಇವರಿಗೆ ಅದರ ಅರ್ಥವೇ ಗೊತ್ತಿಲ್ಲ, ಆದ್ದರಿಂದ ಇವರು ಇನ್ನೊಮ್ಮೆ ಹೋಗಿ ಕನ್ನಡ ಪಾಠ ಹೇಳಿಸಿಕೊಂಡು ಬರಬೇಕಾಗುತ್ತದೆ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಬಿ.ಬಿ.ಎಂ.ಪಿ.ಯನ್ನು 3 ಭಾಗ ಮಾಡಿ ನೀವು 3 ಜನ ಮುಖ್ಯಮಂತ್ರಿಗಳನ್ನು ಮಾಡುತ್ತೀರಾ? ನೀವು 3 ಜನ ಮುಖ್ಯಮಂತ್ರಿಗಳನ್ನು ಮಾಡುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, 'ಪುನರ್‌ರಚನೆ' ಮತ್ತು 'ಪುನರ್ ವಿಂಗಡಣೆ' ಈ ಎರಡಕ್ಕೂ ವ್ಯತ್ಯಾಸವಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಈಗ ನೀವು ಹೊಸ ವ್ಯಾಖ್ಯಾನ ಮಾಡುವುದಕ್ಕೆ ಹೋಗಬೇಡಿ.

**(ಗೊಂದಲ)**

**ಸಭಾಪತಿಯವರು:–** ಬೆಳಿಗ್ಗೆಯಿಂದ ಮಾನ್ಯ ಸೋಮಣ್ಣನವರು ಸುಮಾರು ಎರಡೂವರೆ, ಮೂರು ಗಂಟೆಗಳ ಕಾಲ ಮಾತನಾಡಿದ್ದಾರೆ. ಅವಕಾಶ ಕೊಟ್ಟಂತಹ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಬೇರೆಯವರು ಪ್ರಾಸಂಗಿಕವಾಗಿ ಮಾತನಾಡಿದರೆ ಪರವಾಗಿಲ್ಲ, ಆದರೆ ಪದ–ಪದಕ್ಕೂ ಬೇರೆಯವರು ಮಧ್ಯಪ್ರವೇಶ ಮಾಡಿ ಮಾತನಾಡಿದರೆ ಚರ್ಚೆ ಮುಂದುವರೆಯುವುದಿಲ್ಲ. ನಿಮಗೆ ಚರ್ಚೆ

ಮಾಡುವುದಕ್ಕೆ ಆಸಕ್ತಿ ಇಲ್ಲದಿದ್ದರೆ ಅದನ್ನಾದರೂ ಹೇಳಿ. ಈಗ ಮಾನ್ಯ ಎಂ.ಆರ್. ಸೀತಾರಾಂ ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ಅವರ ನಂತರ ಬಿ.ಜೆ.ಪಿ. ಪಕ್ಷದವರಿಗೆ ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಏನು ಬೇಕಾದರೂ ಹೇಳಬಹುದು. ಅವರು ಪ್ರಸ್ತಾಪಿಸಿದಂತಹ ವಿಷಯಗಳು ನಿಮಗೆ ಒಪ್ಪಿಗೆ ಇಲ್ಲ, ಅವರು ತಪ್ಪು ಹೇಳುತ್ತಿದ್ದಾರೆ ಎನ್ನುವುದಾದರೆ, ತಕ್ಷಣ rebut ಮಾಡಿದರೆ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ನಿಮಗೆ ಅವಕಾಶ ಸಿಕ್ಕಾಗ ಮಾನ್ಯ ಸೀತಾರಾಂ ಅವರು ಮಾತನಾಡುವಂತಹ ಸಂದರ್ಭದಲ್ಲಿ ಇಂತಿಂತಹ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ, ನಾನು ಅದನ್ನು ಒಪ್ಪುವುದಿಲ್ಲ ಎಂದು ಹೇಳುವಂತಹ ಅಧಿಕಾರ ನಿಮಗಿದೆ. ಆದರೆ ಅವರು ಮಾತನಾಡುವಾಗಲೇ ಮಧ್ಯ ಪ್ರವೇಶ ಮಾಡಿ ಮಾತನಾಡುವುದಕ್ಕೆ ಹೋದರೆ ಅವರು ಮುಗಿಸುವುದು ಯಾವಾಗ, ನೀವು ಮಾತನಾಡುವುದು ಯಾವಾಗ, ಈ ವಿಧೇಯಕದ ಮೇಲಿನ ಚರ್ಚೆಯನ್ನು ನಾನು ಮುಗಿಸುವುದು ಯಾವಾಗ?

**ಶ್ರೀ ಸೊಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಅವರ ವಿಚಾರಗಳು ಸತ್ಯಕ್ಕೆ ಸಮೀಪವಿದ್ದರೆ ಸ್ವಲ್ಪ ಒಪ್ಪಬಹುದು.

**ಸಭಾಪತಿಯವರು:–** ಅದನ್ನು ನಿಮಗೆ ಅವಕಾಶ ಸಿಕ್ಕಾಗ ಮಾತನಾಡಬಹುದಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಮಾತನ್ನು ನಾವು ಬಹಳ ತಾಳ್ಮೆಯಿಂದಲೇ ಕೇಳುತ್ತಿದ್ದೇವೆ. ಮುಖ್ಯಮಂತ್ರಿಗಳು ಕಾಲಕಾಲಕ್ಕೆ ಹೇಳಿಕೆಯನ್ನು ಬದಲಾವಣೆ ಮಾಡಬಾರದು ಎನ್ನುವುದು ನಮ್ಮ ಆಗ್ರಹವಾಗಿದೆ. ಉದಾಹರಣೆಗೆ ಅವರು ಮೊನ್ನೆ ಒಂದು ಸಮ್ಮೇಳನದಲ್ಲಿ ಮಾತನಾಡುತ್ತಾ, 'ಇಡೀ ದೇಶದಲ್ಲಿ ಸುಳ್ಳು ಹೇಳಿರುವಂತಹ ಒಂದೇ ಒಂದು ರಾಜಕೀಯ ಪಕ್ಷ ಎಂದರೆ ಅದು ಕಾಂಗ್ರೆಸ್' ಎಂದು ಹೇಳಿದರು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಸಭಾಪತಿಯವರು:–** ಸಾಕು ಕುಳಿತುಕೊಳ್ಳಿ, don't go to the logical end. ನೀವು ಹೇಳಿದ್ದೀರಿ, ಸಾಕು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:-** ಈಗಿನ ಕಾಂಗ್ರೆಸ್ ಅಲ್ಲ, ಹಿಂದಿನ ಕಾಂಗ್ರೆಸ್ ಸುಳ್ಳು ಹೇಳಿದೆ ಎಂದು ಅವರು ಹೇಳಿರಬಹುದು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಜೆ.ಡಿ.ಎಸ್. ಪಕ್ಷ ಏನಿದೆ, ಅದು ಸುಳ್ಳಿನ ಇನ್ನೊಂದು ಮುಖ.

**(ಗೊಂದಲ)**

**ಸಭಾಪತಿಯವರು:-** ಸದನದಲ್ಲಿ ಯಾರಿಗೂ ಇನ್ನೊಬ್ಬರು ಮಾತನಾಡುವುದನ್ನು ಕೇಳುವ ಸಹನೆ ಇರುವಂತೆ ಕಾಣುತ್ತಿಲ್ಲ. ಹಾಗೇನಾದರೂ ಬೇಕಿದ್ದರೆ ಸ್ವಲ್ಪ ಹೊತ್ತು coffee break ಕೊಡೋಣ. ಆದರೆ ಯಾರಿಗೂ ಸಹನೆಯೇ ಇಲ್ಲ, ಯಾರು ಮಾತನಾಡುವುದಕ್ಕೆ ಯಾರೂ ಬಿಡುತ್ತಿಲ್ಲ. ಮುಖ್ಯಮಂತ್ರಿಗಳಿಗೂ ಬಿಡುವುದಿಲ್ಲ, ವಿರೋಧ ಪಕ್ಷದ ನಾಯಕರಿಗೂ ಬಿಡುವುದಿಲ್ಲ, ಯಾರಿಗೂ ಬಿಡುತ್ತಿಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ತಾವು ಇದನ್ನು ನಿಯಂತ್ರಣ ಮಾಡಬೇಕು.

**ಸಭಾಪತಿಯವರು:-** ಅವರು ಮಾತನಾಡುವುದಕ್ಕೇ ಬಿಡುವುದಿಲ್ಲವೆಂದರೆ ಹೇಗೆ? ಮಾನ್ಯ ಸೀತಾರಾಂ ಅವರೇ, ತಾವು ಯಾರ ಹೆಸರುಗಳನ್ನೂ ತೆಗೆದುಕೊಳ್ಳದೆ ತಮ್ಮ ಮಾತುಗಳನ್ನು ಪೂರ್ಣಗೊಳಿಸಿ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಸೋಮಣ್ಣನವರು ಸುಮಾರು ಎರಡೂವರೆ ಗಂಟೆಗಳ ಕಾಲ ಮಾತನಾಡಿದಾಗ ನಾವೆಲ್ಲರೂ ಸಹ ಮಧ್ಯಪ್ರವೇಶ ಮಾಡದೆ ಕುಳಿತು ಕೇಳಿದ್ದೇವೆ. ಅವರು ಸಹ ನಮ್ಮ ಮಾತುಗಳನ್ನು ತಾಳ್ಮೆಯಿಂದ ಕೇಳಬೇಕೆಂದು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಂದುವರೆಸುತ್ತಿದ್ದೇನೆ. ಗೌರವಾನ್ವಿತ ಮಿತ್ರರೆಲ್ಲರೂ ಸಹ ಈ ವಿಧೇಯಕಕ್ಕೆ ಬಹಳಷ್ಟು ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಇದೇ ಜನ 2006ರಲ್ಲಿ ಒಂದು ಸಮ್ಮಿಶ್ರ ಸರ್ಕಾರದಲ್ಲಿ ಜನತಾದಳ ಮತ್ತು ಬಿ.ಜೆ.ಪಿ. ಎರಡೂ ಇದ್ದಾಗ 2006 ರಿಂದ 2010ರವರೆಗೂ ಸುಮಾರು ಮೂರೂವರೆ ವರ್ಷಗಳ ಕಾಲ ಇವರು ಬಿ.ಬಿ.ಎಂ.ಪಿ. ಚುನಾವಣೆಯನ್ನು ಮುಂದೂಡಿದ್ದಾರೆ. ಮಾನ್ಯ ಸಭಾಪತಿಯವರೇ, ನಾವಾದರು ವಿಧೇಯಕವನ್ನು ಮುಂದೆ ತಂದಿದ್ದೇವೆ. ಮೂರೂವರೆ ವರ್ಷ ಕಾಲ ಚುನಾವಣೆಯನ್ನು ಇವರು ಮುಂದಕ್ಕೆ ತಳ್ಳಿದ್ದಾರೆ. ಚುನಾವಣೆ 2006ರ ಮಧ್ಯ ಭಾಗದಲ್ಲಿ ಆಗಬೇಕಾಗಿತ್ತು. 2010ರವರೆಗೂ ಮುಂದುವರೆಸಿಕೊಂಡು ಬಂದು ನಂತರ ನೀವು ಚುನಾವಣೆ ನಡೆಸಿದ್ದೀರಿ. ಅದು ನಾವೆಲ್ಲರೂ ಸುಪ್ರೀಂ ಕೋರ್ಟಿನವರೆಗೂ ಮೆಟ್ಟಿಲು ಹತ್ತಿ, ಅಲ್ಲಿಂದ ಆರ್ಡರ್ ತಂದಮೇಲೆ 2010ರಲ್ಲಿ ಚುನಾವಣೆ ನಡೆಸಿರುವುದು. ಆ ರೀತಿಯ ದುರುದ್ದೇಶ ನಮ್ಮ ಸರ್ಕಾರಕ್ಕೆ ಇಲ್ಲ. ನಾವು ಈ ವಿಧೇಯಕವನ್ನು ನಿಮ್ಮೆಲ್ಲರ ಮೂಲಕ ತಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ನಿಮ್ಮೆಲ್ಲರ ಸಮ್ಮತಿಯನ್ನು ಪಡೆದು ಅನುಷ್ಠಾನಕ್ಕೆ ತರಬೇಕೆನ್ನುವುದು ನಮ್ಮ ಸರ್ಕಾರದ ಉದ್ದೇಶ. ನೀವು ಮೊದಲು ಸಮ್ಮಿಶ್ರ ಸರ್ಕಾರ ಇದ್ದಾಗ ನೀವು ಯಾವ ಯಾವ ರೀತಿ ಮಾಡಿದ್ದೀರೆಂದು ನಿಮಗೂ ತಿಳಿದಿದೆ, ಶಾಸಕನಾದ ನನಗೂ ತಿಳಿದಿದೆ. ನಾವು ಆ ರೀತಿ ಮಾಡಲಿಲ್ಲ. ನಾವು ಬಿಜೆಪಿ ಅವರಿಗೆ, ಬಿಬಿಎಂಪಿ ಅವರಿಗೆ ನಗರಸಭಾ ಸದಸ್ಯರಿಗೆ, ಆಯುಕ್ತರಿಗೆ ಮೂರು ತಿಂಗಳ ಹಿಂದೆಯೇ ನೋಟೀಸ್ ಕಳಿಸಿದ್ದೇವೆ. ಆದರೆ ನಾವು ಕಳಿಸಿದಂತಹ ನೋಟೀಸ್‌ಗೆ ಉತ್ತರವೇ ಬಂದಿಲ್ಲ. ಈ ವಿಷಯ ಕೋರ್ಟಿನಲ್ಲಿದೆ. ನೀವು ಎಲ್ಲಾ irregularities ಮಾಡಿದ್ದೀರಿ, indiscipline ಆಗಿದೆ, ಈ ರೀತಿ ಆಗಿರುವಾಗ ನಿಮ್ಮ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕಾನೂನಿನ ಪ್ರಕಾರವೇ ಎಲ್ಲಾ ಸ್ಟೆಪ್‌ನ್ನು ತೆಗೆದುಕೊಂಡು ನಂತರ ಒಂದು ದಿವಸದ ಮುಂಚೆ ಅಂದರೆ ಶನಿವಾರ ಸಾಯಂಕಾಲ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿ ಬಿಬಿಎಂಪಿ ಸೂಪರ್‌ಸೀಡ್ ಮಾಡಲಾಯಿತು. ಬಿಬಿಎಂಪಿಯ ಅಧಿಕಾರ ವ್ಯಾಪ್ತಿ 23ನೇ ತಾರೀಖಿಗೆ ಮುಕ್ತಾಯವಾಗಬೇಕಾಗಿತ್ತು. ಅಂದರೆ ಎರಡು ಮೂರು ದಿವಸದ ಮುಂಚೆ ಅಂದರೆ 19ನೇ ತಾರೀಖಿನಂದು ಸರ್ಕಾರ ಬಿಬಿಎಂಪಿ ಅನ್ನು ಸೂಪರ್‌ಸೀಡ್ ಮಾಡಿತು. ನಮ್ಮ ಸರ್ಕಾರಕ್ಕಾಗಲಿ, ನಮ್ಮ ಮುಖ್ಯಮಂತ್ರಿಗಳಿಗಾಗಲಿ ಯಾವುದೇ ದುರುದ್ದೇಶವಿಲ್ಲ. ಅಂದರೆ ನೀವೇನು ಚುನಾವಣೆಯನ್ನು ಮೂರೂವರೆ ವರ್ಷ ಮುಂದಕ್ಕೆ ಹಾಕಿದಿರಲ್ಲ ಆ ರೀತಿಯ ದುರುದ್ದೇಶವೇನೂ ನಮ್ಮ ಸರ್ಕಾರಕ್ಕಿಲ್ಲ. ತಮ್ಮೆಲ್ಲರ ಸಹಕಾರದಿಂದ ಬೆಂಗಳೂರು ನಗರದಲ್ಲಿ ಒಳ್ಳೆಯ ಒಂದು ಕೆಲಸ ಮಾಡಬೇಕೆಂದು ನಮ್ಮ

ಮುಖ್ಯಮಂತ್ರಿಗಳು ಹೊರಟಿದ್ದಾರೆ, ಆದಕಾರಣ ತಮ್ಮೆಲ್ಲರನ್ನು ಮತ್ತೊಮ್ಮೆ ಮನವಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಒಳ್ಳೆಯ ಉದ್ದೇಶವಿರುವುದರಿಂದ ತಾವೆಲ್ಲರೂ ನಮ್ಮ ಸರ್ಕಾರಕ್ಕೆ ಬೆಂಬಲ ನೀಡಬೇಕು. ಬೇಕಾದರೆ ನಿಮ್ಮ ಸಲಹೆಗಳನ್ನು ಕೊಡಿ, ಅಂದರೆ ಮೂರು ಭಾಗ ಮಾಡುವುದು ಬೇಡ, ಎರಡು ಭಾಗ ಸಾಕು, ಒಬ್ಬರೇ ಮೇಯರ್ ಇರಲಿ, ಈ ರೀತಿಯಾದಂತಹ ಸಲಹೆಗಳನ್ನು ಕೊಡಿ. ನೀವು ಕೊಡುವಂತಹ ಸಲಹೆಗಳಿಗೆ ನಮ್ಮ ಮುಖ್ಯಮಂತ್ರಿಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅದಕ್ಕೆ ಉತ್ತರ ಕೊಡುತ್ತಾರೆ. ನೀವು ಕೊಡುವಂತಹ ಸಲಹೆಗಳಲ್ಲಿ ಯಾವುದನ್ನು ಪರಿಗಣಿಸಬಹುದು ಅದನ್ನು ಪರಿಗಣಿಸುತ್ತಾರೆ. ಆದರೆ ನಾವೆಲ್ಲರೂ ಸೇರಿ ಇಂತಹ corruption ನ್ನು ನಿಲ್ಲಿಸುವುದು ಒಳ್ಳೆಯದು, ಇದಕ್ಕೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಸರ್ಕಾರದ ಪರವಾಗಿ ಕೇಳಿಕೊಳ್ಳುತ್ತೇನೆ.

ಟೆಕ್ನಿಕಲ್ ವಿಜಿಲೆನ್ಸ್ ಕಮಿಟಿ ಎಂದು ನಮ್ಮ ಕಾರ್ಪೋರೇಶನ್‌ನಲ್ಲಿದೆ. ಯಾವುದೇ ಒಂದು ಕಾಮಗಾರಿ ಆದಮೇಲೆ ಅದಕ್ಕೆ ಆ ಕಮಿಟಿಯವರು ಹೋಗಿ ಅದನ್ನು ಇನ್‌ವೆಸ್ಟಿಗೇಶನ್ ಮಾಡಿ, ಸರಿಯಾಗಿ ಕೆಲಸ ಆಗಿದೆಯೇ ಇಲ್ಲವೇ ಎಂದು ನೋಡಿ ಅದು ಸರಿಯಾಗಿದೆಯೇ ಇಲ್ಲವೆ ಎಂಬುದನ್ನು ನೋಡಿದ ನಂತರವೇ ಹಣವನ್ನು ಕಮೀಶನರ್ ಆಗಲಿ ಅಥವಾ ಚೀಫ್ ಅಕೌಂಟ್ಸ್ ಆಫೀಸರ್ ಆಗಲಿ ಬಿಡುಗಡೆ ಮಾಡಬೇಕಾಗಿತ್ತು. ಆದರೆ ಇದನ್ನು ಯಾವುದೇ ರೀತಿಯಲ್ಲಿಯೂ ಗಣನೆಗೆ ತೆಗೆದುಕೊಂಡಿಲ್ಲ. ಒಳ್ಳೆಯ ಅಧಿಕಾರಿಗಳು ಇದ್ದಾರೆ, ಆದರೆ ನಾವು ಕೇವಲ ಅಧಿಕಾರಿಗಳ ಮೇಲಾಗಲಿ, ರಾಜಕಾರಣಿಗಳ ಮೇಲಾಗಲಿ, ಅಥವಾ ಗುತ್ತಿಗೆದಾರರ ಒಬ್ಬರ ಮೇಲಾಗಲಿ ನಾವು ಆರೋಪ ಮಾಡುವುದರಲ್ಲಿ ಯಾವುದೇ ರೀತಿಯಾದ ಅರ್ಥವಿಲ್ಲ. ಆದರೆ ಎಲ್ಲಾ ಸೇರಿದಾಗ ಈ ಸಿಸ್ಟಂ ಎಲ್ಲಾ collapse ಆಗಿರುವುದರಿಂದ ಸರ್ಕಾರ ಈ ಚಿಂತನೆಯನ್ನು ಮಾಡುತ್ತಿದೆ. ನೀವು TVCC ವರದಿಯನ್ನು ನೋಡಿದರೆ ಎರಡೇ ವರ್ಷ 2008 ರಿಂದ 2010 ರವರೆಗೆ ಚುನಾವಣೆ ಮುಂದೂಡಿರುವುದು 2006 ರಿಂದ 2010.....,

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಆಗ ಬಿಬಿಎಂಪಿ ಇರಲಿಲ್ಲ.

**ಸಭಾಪತಿಯವರು:–** ನೀವು ಮಧ್ಯದಲ್ಲಿ ಮಾತನಾಡಬೇಡಿ.

**ಶ್ರೀ ಎಂ.ಆರ್. ಸೀತಾರಾಂ:–** ನಾನು ಹೇಳಿದಂತಹ ಮಾತನ್ನು ಅರ್ಥಮಾಡಿಕೊಂಡು ಮಾತನಾಡಿ.

**ಸಭಾಪತಿಯವರು:–** ಮುಂದಿನ ಹೆಸರು ಅಶ್ವತ್‌ನಾರಾಯಣರವರದ್ದೇ ಇದೆ. ನೀವು ಆಗ ಮಾತನಾಡುವುದಿಲ್ಲ, ಈಗಲೇ ಮಾತನಾಡುತ್ತೇವೆಂದರೆ, ನೀವು ಮಾತನಾಡಬಹುದು. ಅವರಿಗೆ ಮಾತನಾಡಬೇಡಿಯೆಂದು ಹೇಳುತ್ತೇನೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸೀತಾರಾಂರವರೇ ಮಾತನಾಡಲಿ ಬಿಡಿ.

**ಶ್ರೀ ಎಂ.ಆರ್. ಸೀತಾರಾಂ:–** ಸನ್ಮಾನ್ಯ ಸಭಾಪತಿಯವರೇ, ನಾನು ಆಗಲೆ ಹೇಳಿದ್ದು ಏನೆಂದರೆ, 2006ರಲ್ಲಿ ನಡೆಯಬೇಕಾಗಿದ್ದ ಚುನಾವಣೆಯನ್ನು ಈ ಸಮ್ಮಿಶ್ರ ಸರ್ಕಾರ ಇದ್ದಾಗ ಮುಂದೂಡಿದಿರಿ. ಯಾವುದ್ಯಾವುದೋ ಕಾರಣ ಮಾಡಿಕೊಂಡು ಯಾರನ್ನು ಒಲೈಸಿದಿರೋ, ಯಾರನ್ನು ಬಿಟ್ಟರೋ ಒಟ್ಟಿನಲ್ಲಿ ಮೂರುವರೆ ವರ್ಷ ಚುನಾವಣೆಯನ್ನು ಮುಂದೂಡಿರುವುದು ನೀವು. ಆದರೆ ಈಗ ನೀವು ಇಷ್ಟೊಂದು ಬೊಬ್ಬೆ ಹಾಕುತ್ತಿದ್ದೀರಿ. ನಾವು ಈ ವಿಧೇಯಕವನ್ನು ತಮ್ಮ ಮುಂದೆಯೇ ತಂದಿದ್ದೇವೆ ವಿನಃ ನಾವೇನು ಕಳ್ಳತನದಿಂದ ಒಬ್ಬೊಬ್ಬರನ್ನೇ ಕರೆಸಿಕೊಂಡು ನಮಗೆ ಸಹಕಾರ ನೀಡಿ, ನಾವು ಇನ್ನೊಂದಷ್ಟು ಕೊಳ್ಳೆ ಹೊಡೆಯುತ್ತೇವೆ ಎಂದು ಕೇಳಿಲ್ಲ, ಮಾಡಿಲ್ಲ. ಆದರೆ ನೀವು ಆ ದಿವಸ ಮಾಡಿದ್ದೇನು? ಈ ದಿವಸ ನಾವು ಮಾಡಲು ಹೊರಟಿರುವುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಇದು ನಮ್ಮ ರಾಜ್ಯದ ಜನತೆಗೂ ಗೊತ್ತಾಗಬೇಕು, ಬೆಂಗಳೂರಿನ ಜನತೆಗೂ ಗೊತ್ತಾಗಬೇಕು. ನೀವು ಒಂದು ರೀತಿಯಲ್ಲಿ ಚುನಾವಣೆಯನ್ನು ಮುಂದೂಡುತ್ತಾ ಹೋಗಬಹುದು, ನಿಮಗೆ ಯಾವುದೇ ರೀತಿಯಾದಂತಹ democratic norms ಇಲ್ಲ, ನೀವು ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಿಲ್ಲ, ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದು, ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವವರು ನೀವೇ, ಕಳ್ಳತನ ಮಾಡುವುದು ಮಾತ್ರ ನಾವೇ. ಅದಕ್ಕೆ ಮೊನ್ನೆ ದಿವಸ ಮಾನ್ಯ ಸೋಮಣ್ಣನವರು ಮಾತನಾಡುವಂತಹ ಸಮಯದಲ್ಲಿ ಬಿಡಿ ಸ್ವಾಮಿ ಕಳ್ಳರು ನಾವೇ, ಸತ್ಯಹರಿಶ್ಚಂದ್ರ ಮಕ್ಕಳು ನೀವೇ ಎಂದು ಹೇಳಿದೆ.

ಮಾನ್ಯ ಸಭಾಪತಿಯವರೇ, ಬಿಬಿಎಂಪಿಯಲ್ಲಿ ಇಷ್ಟೆಲ್ಲಾ ಅವ್ಯವಹಾರ ನಡೆದಿವೆ. ಮಾನ್ಯ ಸೋಮಣ್ಣನವರು, ಮಾನ್ಯ ರಾಮಲಿಂಗಾರೆಡ್ಡಿಯವರು, ಮಾನ್ಯ ರೋಷನ್‌ಬೇಗ್, ಮಾನ್ಯ ಸುರೇಶ್ ಕುಮಾರ್ ಹಾಗೂ ನಾವೆಲ್ಲರೂ ಬೆಂಗಳೂರು ನಗರದಲ್ಲಿ ಶಾಸಕರಾಗಿದ್ದೇವೆ. ನಾವೆಲ್ಲರೂ ಬಿಬಿಎಂಪಿಯಲ್ಲಿ ನಡೆದಿರುವಂತಹ ಭ್ರಷ್ಟಾಚಾರವನ್ನು ನೋಡಿ ಪಕ್ಷಾತೀತವಾಗಿ ಚರ್ಚೆ ಮಾಡಿದ್ದೇವೆ. ಈ ರೀತಿ ಮೂರು ಮೂರು ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಒಟ್ಟಾದಾಗ ಎಷ್ಟು ಆಘಾತವಾಗುತ್ತದೆ, ಜನರಿಗೆ ಎಷ್ಟು ತೊಂದರೆಯಾಗುತ್ತದೆ, ಎಷ್ಟು ನಷ್ಟವಾಗುತ್ತದೆಯೆಂದು ಯೋಚನೆ ಮಾಡಿ ಸರ್ಕಾರ ಈ ವಿಧೇಯಕವನ್ನು ತಂದಿದೆ. ಇದರಲ್ಲಿ ಸರ್ಕಾರ ಕ್ರಮಬದ್ಧವಾಗಿಯೇ ಎಲ್ಲವನ್ನೂ ಮಾಡಿದೆ. ಆರು ತಿಂಗಳುಗಳ ಹಿಂದೆ ಮಾನ್ಯ ಬಿ.ಎಸ್. ಪಾಟೀಲ್ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಲಾಗಿತ್ತು, ಆ ಕಮಿಟಿಯು ಮೂರು ತಿಂಗಳ ನಂತರ ಎರಡು ವರದಿಯನ್ನು ಕೊಟ್ಟಿದೆ, ಅಂತಿಮವಾಗಿ ಮೂರನೇ ವರದಿಯನ್ನು ಕೊಡಬೇಕಾಗಿದೆ. ಇದೆಲ್ಲಾ irregularities background

ಇಟ್ಟುಕೊಂಡು ಕಠಾರಿಯಾರವರ ನೇತೃತ್ವದಲ್ಲಿ ಒಂದು Enquiry Commission ಮಾಡಿದ ಮೇಲೆ ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟರು. ಈ ವರದಿಯಲ್ಲಿ ಎಷ್ಟು financial indiscipline ಕಾನೂನುಗಳನ್ನು, ಪ್ರೊಸೀಜರ್ಸ್‌ನ್ನು, ಆರ್.ಟಿ.ಐ. ಟ್ರಾನ್ಸ್‌ಪರೆನ್ಸಿ, ಟೆಂಡರ್ ಇವುಗಳೆಲ್ಲವನ್ನೂ ಗಾಳಿಗೆ ತೂರಿ, ನೀವು ಪೇಪರ್‌ನಲ್ಲಿ ಓದಿರಬಹುದು ಯಾವುದೋ ಒಂದು ಮನೆಯಲ್ಲಿ ಸುಮಾರು 600 ಕಡತಗಳಿದ್ದವು ಎಂದು ಓದಿರಬಹುದು. ನಾನು ಈ ಮಾತನ್ನು ಪಕ್ಷಾತೀತವಾಗಿ ಹೇಳುತ್ತಿದ್ದೇನೆ. ಅವರು ಯಾವುದೇ ಪಕ್ಷದಲ್ಲಿರಬಹುದು. ಕಾರ್ಪೋರೇಶನ್‌ನಲ್ಲಿ ಇರಬೇಕಾದಂತಹ ಕಡತಗಳು ಒಂದು ಮನೆಯಲ್ಲಿ ಇದ್ದವು. ಬಿಬಿಎಂಪಿಯ ಬಗ್ಗೆ TVCC ವರದಿ ಬಂದಾಗ ಇಡೀ ಸರ್ವರ್ ರೂಂ, ಕಂಪ್ಯೂಟರ್ಸ್ ಎಲ್ಲವನ್ನೂ ಸುಟ್ಟು ಹಾಕಿದರು. 2007 ರಿಂದ 2010ರವರೆಗೆ ಇದ್ದಂತಹ ಎಲ್ಲಾ ಫೈಲ್ಸ್‌ಗಳನ್ನು ಸುಟ್ಟು ಹಾಕಿದರು. ಯಾರು ಸುಟ್ಟರು, ಏಕೆ ಸುಟ್ಟರು ಎನ್ನುವುದರ ಬಗ್ಗೆ ಆನಂತರ ನೀವು ನಾವು ಕುಳಿತುಕೊಂಡು ಚರ್ಚೆ ಮಾಡೋಣ. ಮಾನ್ಯ ಬಿ.ಎಸ್. ಪಾಟೀಲ್‌ರವರ ಎರಡು ವರದಿಗಳು, ಮತ್ತು ಕಠಾರಿಯರವರು ಕೊಟ್ಟಿರುವಂತಹ ವರದಿಯ ಆಧಾರದ ಮೇಲೆ ಹಾಗೂ ಇದರ ಜೊತೆಗೆ ನಮಗೆಲ್ಲರಿಗೂ ಆಗಿರುವಂತಹ ಅನುಭವಗಳು ಇವು. ಇದಕ್ಕೆ ಸ್ಪಂದಿಸಿ ಈ ಒಂದು ವಿಧೇಯಕವನ್ನು ತರಲಾಗಿದೆ. ಇದರ ಜೊತೆಯಲ್ಲಿ 1970 ರಿಂದ 2014ನೇ ಇಸವಿಯವರೆಗೆ ಅಂದರೆ ಸುಮಾರು 44 ವರ್ಷಗಳಲ್ಲಿ ಸುಮಾರು 19 ರಿಂದ 20 ವರ್ಷ ಅವರು ಕಾರ್ಪೋರೇಶನ್ ಆಳಿದ್ದಾರೆ. ಅದು ಜನತಾ ಪಾರ್ಟಿ ಇರಬಹುದು, ಜನತಾದಳವಿರಬಹುದು, ಬಿಜೆಪಿ ಇರಬಹುದು. ಅದೇ ರೀತಿ ಸುಮಾರು 24 ವರ್ಷ ನಾವೂ ಸಹ ಆಳ್ವಿಕೆ ಮಾಡಿದ್ದೇವೆ. ಪಕ್ಷಾತೀತವಾಗಿ ಹೇಳಬೇಕೆಂದರೆ ಆವತ್ತಿನ ದಿವಸ ಇಂತಹ ಪರಿಸ್ಥಿತಿ ಇರಲಿಲ್ಲ. ಆದರೆ 2006ರ ನಂತರ very drastic deterioration of values, ಇಂತಹ ಅಘಾತಕಾರಿಯಾದಂತಹ ಬೆಳವಣಿಗೆ ಆಗಿರುವುದರಿಂದ ಈ ಒಂದು ವಿಧೇಯಕವನ್ನು ಸರ್ಕಾರ ಮಂಡಿಸಿದೆ. ಇದರ ಜೊತೆ ಜೊತೆಯಲ್ಲಿ ನಮ್ಮ ಮೂರೂವರೆ ವರ್ಷದ ಬಗ್ಗೆ ಹೇಳಿದೆ, ಕಸ ವಿಲೇವಾರಿಯ ಬಗ್ಗೆ ಕ್ಯಾಪ್ಟನ್ ಕಾರ್ಣೀಕ್ ಅವರು ಕೇಳಿದರು, ಈಗ ಅವರು ಇಲ್ಲ. ಕಸ ವಿಲೇವಾರಿಯಲ್ಲಿ ಯಾವ ರೀತಿ ತೊಂದರೆಯಾಯಿತು, ಅದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಬೆಂಗಳೂರು ನಗರಕ್ಕೆ ಯಾವ ರೀತಿಯಾದಂತಹ ಕೆಟ್ಟ ಹೆಸರು ಬಂತು Bangalore is a garbage city ಎಂದು New York Timesನಲ್ಲಿ ಪ್ರಕಟವಾಗಿತ್ತು. ಇಡೀ ವಿಶ್ವ ಭೂಪಟದಲ್ಲಿ ಒಂದು ಕೆಟ್ಟ ಹೆಸರು ಬಂತು. ಈ ಅಪಖ್ಯಾತಿಯಿಂದ ಇನ್ನೂ ಸುಧಾರಿಸಿಕೊಳ್ಳುವುದಕ್ಕೆ ಆಗಿಲ್ಲ. Commerce & Industries Departmentನ್ನು ಕೇಳಬಹುದು, Finance Departmentನ್ನು ಕೇಳಬಹುದು. ಭಾರತದಲ್ಲಿ ಬಂಡವಾಳ ಹೂಡಿಕೆಯು ಕಡಿಮೆಯಾಗುತ್ತಿದೆ. ಇವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು ಹಾಗು

ಇದನ್ನು ರಾಜಕೀಯವಾಗಿ ತೆಗೆದುಕೊಳ್ಳಬಾರದು. ಅಂದರೆ ಕಾಂಗ್ರೆಸ್ ಸರ್ಕಾರ ಈ ವಿಧೇಯಕವನ್ನು ತಂದಿದ್ದಾರೆಂದು ಜನತಾದಳ ಹಾಗೂ ಬಿಜೆಪಿ ಪಕ್ಷದವರು ವಿರೋಧ ಮಾಡುವುದು ಬೇಡ.

**(4–30 ಗಂಟೆ)**

ನಾವೆಲ್ಲರೂ ಸೇರಿ ಇದನ್ನು ಇಂತಹ ಒಳ್ಳೆಯ ಕೆಲಸಕ್ಕೆ ಸ್ವಾಗತವನ್ನು ಮಾಡೋಣ. ಈ ವಿಧೇಯಕವನ್ನು ತಾವೆಲ್ಲರೂ ಒಂದಾಗಿ ಸೇರಿ ಸಮರ್ಥಿಸಿ, ಉತ್ತಮ ಕೆಲಸಗಳು ಆಗಿ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು. ಬೆಂಗಳೂರಿಗೆ ಮತ್ತೆ ಹಿಂದಿನ ಹಿರಿಮೆಯನ್ನು ತಂದು ಕೆಲಸ ಮಾಡಲು ಅನುಕೂಲ ಮಾಡಿಕೊಡಬೇಕೆಂದು ತಮ್ಮೆಲ್ಲರಲ್ಲಿ ಪ್ರಾರ್ಥಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಗಳೇ, ಈ ಬೆಂಗಳೂರು ನಗರದ ವಿಭಜನೆ ಆಗಬೇಕೆಂದು ಪ್ರಮುಖವಾಗಿ ಚರ್ಚೆ ಆಗಿರುವ ಸಂದರ್ಭದಲ್ಲಿ ನಡೆದಿರುವ ಒಂದು ಘಟನೆಯನ್ನು ನೆನಪು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ವಿಭಜನೆ ಮಾಡುವುದಕ್ಕೆ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿರತಕ್ಕ ಪುಣ್ಯಾತ್ಮರನ್ನು ಭಗವಂತನೆ ಕಾಪಾಡಬೇಕೆಂದು ಹೇಳಬಯಸುತ್ತೇನೆ. ಪರಮಪೂಜ್ಯ ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು ನಗರಕ್ಕೆ ಸಾಕಷ್ಟು ಹಿನ್ನೆಲೆಗಳು ಹಾಗೂ ಇತಿಹಾಸವಿದೆ. ಇಂತಹ ಬೆಂಗಳೂರು ನಗರವನ್ನು ಚೂರು ಚೂರು ಮಾಡುವುದರಿಂದ ಎಂತಹ ಅಭಿವೃದ್ಧಿ ಆಗುತ್ತದೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಈ ಬಗ್ಗೆ ಸೋಮಣ್ಣನವರು ಮತ್ತು ಸೀತರಾಂರವರು ಸಾಕಷ್ಟು ಮಾತನಾಡಿದ್ದಾರೆ. ವಿಧಾನಸೌಧವನ್ನು ಕಟ್ಟಿಸಿದಂತಹ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಇರಬಹುದು, ವಿಕಾಸಸೌಧವನ್ನು ಕಟ್ಟಿಸಿದಂತಹ ಶ್ರೀಮಾನ್ ಎಸ್.ಎಂ. ಕೃಷ್ಣರವರು ಇರಬಹುದು ಅಥವಾ ಬೆಂಗಳೂರು ನಗರವನ್ನು ಕಟ್ಟಿರತಕ್ಕ ಕೆಂಪೇಗೌಡರು ಇರಬಹುದು, ಇವರು ಇಂದಿಗೂ ಕೂಡ ಎಲ್ಲರ ಮನಸ್ಸಿನಲ್ಲಿ ಇದ್ದಾರೆ. ಇಡೀ ಕರ್ನಾಟಕ ಮಾತ್ರವಲ್ಲದೇ ರಾಷ್ಟ್ರದಲ್ಲಿಯೂ ಇವರನ್ನು ಜನರು ನೆನೆಯುತ್ತಾರೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಬೆಂಗಳೂರು ನಗರವನ್ನು ಈ ರೀತಿ ಚೂರು ಚೂರು ಮಾಡುವುದರಿಂದ ಈ ಸರ್ಕಾರಕ್ಕೆ ಮತ್ತು ಅವರಿಗೆ ಒಂದು ಕಪ್ಪು ಚುಕ್ಕೆ ಬರುತ್ತದೆ ಎನ್ನುವ ಆತಂಕ ನಮಗೆ ಉಂಟಾಗುತ್ತಿದೆ. ಇದು ಜನರು ಮಾತನಾಡಿಕೊಳ್ಳುತ್ತಿರುವ ವಿಚಾರ. ಇಂತಹ ಸಲಹೆ ಸರ್ಕಾರಕ್ಕೆ ಯಾರು ಕೊಟ್ಟರು ಅಥವಾ ಈ ಚಿಂತನೆ ಸರ್ಕಾರಕ್ಕೆ ಏಕೆ ಬಂತೆಂಬುದು ನನಗೆ ಗೊತ್ತಾಗುತ್ತಿಲ್ಲ. ಅಭಿವೃದ್ಧಿಯಾಗಬೇಕು, ಭ್ರಷ್ಟಾಚಾರಕ್ಕೆ ಕಡಿವಾಣವನ್ನು ಹಾಕಬೇಕೆಂದು ಈಗಾಗಲೇ ಬಿಬಿಎಂಪಿ ವಿರುದ್ಧ ಒಂದು ವರದಿಯನ್ನು ನೀಡಲಾಗಿತ್ತು. ಈ ಭ್ರಷ್ಟಾಚಾರ ನಗರದಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಸಮಗ್ರ ಬೆಂಗಳೂರು ಎಂದು ಏಕೆ ಆಗಬಾರದು. ಇದನ್ನು ಏಕೆ ಚೂರು ಚೂರು ಮಾಡಬೇಕು? ಬೆಂಗಳೂರು ನಗರವನ್ನು ವಿಭಾಗ

ಮಾಡಿದರೆ ದಕ್ಷಿಣ ಭಾಗದಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೇಂದ್ರ ಭಾಗದಲ್ಲಿ ತಮಿಳರು, ಮುಸ್ಲಿಮರು ಮತ್ತು ಬೇರೆ ಬೇರೆ ಭಾಷಿಗರು ಇದ್ದಾರೆ.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ದಕ್ಷಿಣ ಎಂದರೆ ಅದು ಎಲೆಕ್ಟ್ರಾನಿಕ್ ಸಿಟಿಯವರೆಗೆ ಬರುತ್ತದೆ, ಕೇಂದ್ರ ಎಂದರೆ ಶಿವಾಜಿನಗರದ ವರೆಗೆ ಬರುತ್ತದೆ. ಉತ್ತರ ಎಂದರೆ ಕೆ.ಆರ್. ಪುರಂ ತನಕ ಬರುತ್ತದೆ. ಆಗ ಒಂದು ಕಡೆ ರೆವಿನ್ಯೂ ಜಾಸ್ತಿ ಬಂದರೆ ಮತ್ತೊಂದು ಕಡೆ ರೆವಿನ್ಯೂ ಬರುವುದೇ ಇಲ್ಲ. ಮತ್ತೊಂದು ಕಡೆ ಶೂನ್ಯ. ಈ ಕಾರ್ಪೊರೇಷನ್‌ಗಳು ಬಂದಾಗ ಒಂದು ಅಂಡರ್ ಕೇಬಲ್ ಹಾಕಬೇಕಾದರೆ ನಾವು ಒಂದು ಕಡೆ ಅನುಮತಿಯನ್ನು ಪಡೆಯಬೇಕು. ಅದು ನೀರಿನ ಕೆಲಸ, ಅಥವಾ ವಿದ್ಯುತ್ತಿನ ಕೆಲಸ ಅಥವಾ ರಸ್ತೆ ರಿಪೇರಿ ಯಾವುದೇ ಕೆಲಸ ಆಗಲಿ ಈಗ ಒಂದು ಕಡೆ ಅನುಮತಿ ಪಡೆದರೆ ಸಾಕು. ಬೆಂಗಳೂರನ್ನು ವಿಭಜನೆ ಮಾಡಿದಲ್ಲಿ ಒಂದು ಕೆಲಸ ಆಗಬೇಕಾದರೆ 3 ಕಡೆ ಅನುಮತಿಯನ್ನು ಪಡೆಯಬೇಕಾಗುತ್ತದೆ. ಒಂದು ಕಾರ್ಪೊರೇಷನ್‌ನಲ್ಲಿ ಅನುಮತಿ ಪಡೆಯಬೇಕಾದರೆ ಸಾಕಷ್ಟು ವಿಳಂಬ ಆಗುತ್ತಿತ್ತು. ಕೆಲಸಗಳಲ್ಲಿ ಸಾಕಷ್ಟು ಹಿನ್ನಡೆಯಾಗುತ್ತಿತ್ತು. ಈ ಮೂರು ಕಾರ್ಪೊರೇಷನ್‌ಗಳ ವಿಚಾರ ಬಂದಾಗ 3 ಮೇಯರ್‌ಗಳು, 3 ಉಪಮೇಯರ್‌ಗಳು, 14 ಜನ ಸ್ಥಾಯಿ ಸಮಿತಿ ಸದಸ್ಯರನ್ನು ನೇಮಿಸಬೇಕು. ಅದಕ್ಕೊಬ್ಬರು ಕಮೀಷನರ್ ಬೇಕು. ಇದರಿಂದ ಸರ್ಕಾರಕ್ಕೆ ಎಷ್ಟು ವೆಚ್ಚವಾಗುತ್ತದೆ? ಈಗಲೇ ಸರ್ಕಾರಕ್ಕೆ ಬಿಬಿಎಂಪಿಗೆ ಕೊಡಬೇಕಾಗಿರುವ ಅನುದಾನವನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಚುನಾವಣೆಯ ಸಂದರ್ಭದಲ್ಲಿ ಮತ್ತು ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಘೋಷಣೆಗಳನ್ನು ಮಾಡುತ್ತಾರೆ, ಅವು ಕೇವಲ ಘೋಷಣೆಗಳಾಗಿ ಮಾತ್ರ ಉಳಿಯುತ್ತಿವೆ.

**ಡಾ॥ ಎಂ.ಹೆಚ್. ಅಂಬರೀಷ್:–** ಕಾರ್ಪೊರೇಷನ್ ವಿಭಜನೆ ಮಾಡಿದಾಗ 3 ಮೇಯರ್‌ಗಳು, 3 ಉಪಮೇಯರ್‌ಗಳನ್ನು ನೇಮಿಸುವುದು ಬೇರೆಯ ವಿಚಾರ. ಆದರೆ ಅನುಮತಿ ಪಡೆಯುವ ವಿಚಾರ ಬಂದಾಗ ಆ ಏರಿಯಾದಲ್ಲಿ ಮಾತ್ರ ಅನುಮತಿ ಪಡೆದರೆ ಸಾಕು.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಸ್ಯಾನಿಟರಿ, ಪಿಡಬ್ಲ್ಯೂಡಿ ಪೈಪ್‌ಗಳು ಎಲ್ಲಾ ಕಾಮಗಾರಿಗಳನ್ನು ಎಸ್ಟಾಬ್ಲಿಷ್ ಮಾಡುವುದು ಬಹಳ ಕಷ್ಟವಾಗುತ್ತದೆ. ಅದನ್ನು ನಾನು ಹೇಳುತ್ತಿರುವುದು. ಇದೆಲ್ಲ ಒಂದೇ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬಂದಲ್ಲಿ ಒಂದೇ ಕಡೆ ಬರುತ್ತದೆ. 3 ಕಾರ್ಪೊರೇಷನ್‌ಗಳ ಅಡಿಯಲ್ಲಿ ಬಂದಾಗ ಅದು ಕಷ್ಟವಾಗುತ್ತದೆ. ಬೆಂಗಳೂರು ಸಿಟಿ ದೊಡ್ಡದಾಗಿ ಬೆಳೆದಿರುವ ಕಾರಣ ಈಗ ವಿಭಜನೆ

ಮಾಡಬೇಕೆಂದು ಸರ್ಕಾರ ಹೇಳುತ್ತಿದೆ. ವಿಭಜನೆ ಬಿಟ್ಟು ಇದನ್ನು ಬೇರೆರೀತಿ ಏಕೆ ಯೋಚನೆ ಮಾಡುವುದಿಲ್ಲ? 3 ಕಾರ್ಪೋರೇಷನ್ ಆಗಿ ವಿಭಜನೆ ಮಾಡುವುದರಿಂದ ಬೆಂಗಳೂರನ್ನು ಸಿಂಗಾಪೂರ ಮಾಡಲಿಕ್ಕೆ ಸಾಧ್ಯವಾಗುವುದೇ? ಸಾಧ್ಯವೇ ಇಲ್ಲ ಸನ್ಮಾನ್ಯ ಎಸ್.ಎಂ. ಕೃಷ್ಣರವರ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಅವರು ಮಾಡಿರುವ ಕೆಲಸವನ್ನು ನಾವು ಈಗಲೂ ಕೂಡ ನೆನಪು ಮಾಡಿಕೊಳ್ಳುತ್ತೇವೆ. ಅದರಲ್ಲಿ ಎರಡನೆಯ ಮಾತಿಲ್ಲ. ಸನ್ಮಾನ್ಯ ಜೆ.ಹೆಚ್. ಪಟೇಲ್ ಮತ್ತು ಕುಮಾರಣ್ಣನವರ ಕಾಲದಲ್ಲಿಯೂ ಕೂಡ ಸಾಕಷ್ಟು ಅಭಿವೃದ್ಧಿಯನ್ನು ಮಾಡಲಾಯಿತು. ಅವರು ಕಂಡಂತಹ ಕನಸುಗಳನ್ನು ನನಸು ಮಾಡಿದ್ದಾರೆ. ಆದ್ದರಿಂದ ಇವತ್ತು ವಿಭಜನೆ ಮಾಡಲು ಹೊರಟಿರುವುದು ಜನರಿಗೆ ಮುಟ್ಟುವ ಕೆಲಸ ಆಗುವುದಿಲ್ಲ. ಅದು ನಮಗೆ ಪೂರಕ ಆಗುವುದಿಲ್ಲ, ಅದರಿಂದ ಬೇರೆ ಬೇರೆ ತೊಂದರೆಗಳು ಆಗುವುದರಿಂದಯಾವುದೇ ಸಂದರ್ಭದಲ್ಲಿಯೂ ಸಹ ಒಳ್ಳೆಯ ಕೆಲಸಗಳು ಆಗುವುದಿಲ್ಲ.

ಎರಡನೆಯದಾಗಿ ಮಹಾರಾಷ್ಟ್ರದಲ್ಲಿನ ಮುಂಬೈ ಸಿಟಿ ಇರಬಹುದು, ಕಲ್ಕತ್ತಾ ಇರಬಹುದು, ಚೆನ್ನೈ ಇರಬಹುದು ಅಲ್ಲಿ ನಮ್ಮ ಕರ್ನಾಟಕದಲ್ಲಿನ 6 ಕೋಟಿಗಿಂತ ಹೆಚ್ಚಿನ ಜನಸಂಖ್ಯೆ ಇದೆ. ಇವತ್ತು ಬೆಂಗಳೂರು ನಗರದಲ್ಲಿ 1 ಕೋಟಿ ಜನಸಂಖ್ಯೆ ಇರಬಹುದು, ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಮುಂಬೈ ನಗರದಲ್ಲಿದೆ. ಅಲ್ಲಿ ಒಂದೇ ಒಂದು ಕಾರ್ಪೊರೇಷನ್ ಇದೆ, ನೇರವಾಗಿ ಜನರೇ ಮೇಯರ್ ಆಯ್ಕೆ ಮಾಡುವ ಚೆನ್ನೈನಲ್ಲಿಯೂ ಕೂಡ ಒಂದೇ ಕಾರ್ಪೊರೇಷನ್ ಇದೆ. ನಮ್ಮಲ್ಲಿ 198 ವಾರ್ಡ್ ಇದ್ದರೆ ಚೆನ್ನೈನಲ್ಲಿ 220 ವಾರ್ಡ್‌ಗಳಿವೆ.. ಆದರೂ ಸಹ ಅಲ್ಲಿ ಯಾವುದೇ ರೀತಿಯ ವಿಭಜನೆ ಮಾಡುವುದಕ್ಕೆ ಅವರು ಮುಂದಾಗಿಲ್ಲ. ಹಿಂದೆ ದೆಹಲಿಯಲ್ಲಿ ವಿಭಜನೆ ಮಾಡಿದ್ದರೂ ಸಹ ಈಗ ಅದನ್ನು ಒಂದೇ ಕಾರ್ಪೊರೇಷನ್ ಮಾಡಬೇಕೆಂದಿದ್ದಾರೆ. ದಿವಂಗತ ನರಸಿಂಹರಾಯರು ಮತ್ತು ರಾಜೀವ್ ಗಾಂಧಿಯವರು ಲೋಕಲ್ ಬಾಡಿಗಳಿಗೆ ಹೆಚ್ಚಿನ ಶಕ್ತಿ ನೀಡುವುದರ ಮೂಲಕ ಅವರ ಕೆಲಸಗಳನ್ನು ಅವರೇ ಮಾಡಿಕೊಳ್ಳಬಹುದೆಂದು ಈ ದೇಶದ ಬಗ್ಗೆ ಒಂದು ಕನಸ್ಸನ್ನು ಇಟ್ಟುಕೊಂಡಿದ್ದರು. ಆ ಕನಸಿಗೆ ಇದು ಪೂರಕವಾಗಿಲ್ಲ ಎಂದು ನನ್ನ ಒಂದು ಅಭಿಪ್ರಾಯವನ್ನು ಹೇಳಬಯಸುತ್ತೇನೆ.

ಎರಡನೆಯದಾಗಿ ಸಮಗ್ರ ಕರ್ನಾಟಕ ಮತ್ತು ಸಮಗ್ರ ಬೆಂಗಳೂರು ಆಗಬೇಕು. ಇವತ್ತು ನಮ್ಮಲ್ಲಿ ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆ ಮಾತನಾಡುವವರು ಇದ್ದಾರೆ. ಇದರಿಂದ ಕನ್ನಡಿಗರ ಸರ್ವಾಂಗೀಣ ಅಭಿವೃದ್ಧಿಗೆ ಕಂಟಕ ಆಗುತ್ತದೆ, ಕನ್ನಡಿಗರಿಗೆ ತೊಂದರೆ ಆಗುತ್ತದೆ. ಹಾಗಾಗಿ ಮುಖ್ಯಮಂತ್ರಿಗಳಾಗಲಿ, ಕಾಂಗ್ರೆಸ್ ಸರ್ಕಾರಕ್ಕಾಗಲಿ ಒಳ್ಳೆಯ ಹೆಸರು ಬರುವುದಿಲ್ಲ. ಆದಕಾರಣ ಈ ಬಗ್ಗೆ ಜನರು ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆದ್ದರಿಂದ ಈ ವಿಧೇಯಕಕ್ಕೆ ನಾನು

ಖಂಡನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ದಯಮಾಡಿ ವಿಭಜನೆ ಮಾಡುವುದಕ್ಕಿಂತಲೂ ಮುಖ್ಯಮಂತ್ರಿಗಳು ಬೇರೆ ರೀತಿಯಲ್ಲಿ ಯೋಚನೆಯನ್ನು ಮಾಡಬೇಕಾಗಿದೆ. ದಯಮಾಡಿ ಸರ್ಕಾರ ಈ ವಿಧೇಯಕವನ್ನು ಹಿಂದಕ್ಕೆ ಪಡೆದು ಸಮಗ್ರ ಬೆಂಗಳೂರಿನ ಬಗ್ಗೆ ಯೋಚನೆಯನ್ನು ಮಾಡಿ, ಇಲ್ಲಿ ಏನೇನು ಅಭಿವೃದ್ಧಿಯನ್ನು ಮಾಡಬೇಕು, ಅದನ್ನು ಮಾಡುವುದರ ಮೂಲಕ ಜನರ ಮನಸ್ಸನ್ನು ಮುಟ್ಟುವಂತಹ ಕೆಲಸವನ್ನು ಸಮಾಜದ ಹಿತದೃಷ್ಟಿಯಿಂದ ಸಮಾಜ ಕಾಯುವ ಹಿನ್ನೆಲೆಯಲ್ಲಿ ಒಂದು ಆದೇಶವನ್ನು ಸಿದ್ದರಾಮಯ್ಯನವರು ಹೊರಡಿಸಬೇಕೆಂದು ನಿಮ್ಮ ಪರವಾಗಿ ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ವಿಧೇಯಕದ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದಕ್ಕಾಗಿತಮಗೆ ಧನ್ಯವಾದಗಳು. ವಿಶೇಷವಾಗಿ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ಮಹಾನಗರದ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಸಂದರ್ಭದಲ್ಲಿ ಸಮಯವನ್ನು ನಾವು ಕೇಳಿದ್ದೆವು. ಅವಕಾಶಗಳು ಸಿಗಲಿಲ್ಲ. ಪ್ರಶ್ನೋತ್ತರಗಳ ಸಂದರ್ಭದಲ್ಲಿ ಬೇರೆ–ಬೇರೆ ವಿಚಾರಗಳ ಬಗ್ಗೆ ಅದು ಮಹಾನಗರಪಾಲಿಕೆಯ ಅಭಿವೃದ್ಧಿ ಬಗ್ಗೆ ಆಗಿರಬಹುದು, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ನಿಗದಿತ ಸಮಯದಲ್ಲಿ ಚರ್ಚೆ ಮಾಡಲು ಸಾಧ್ಯವಾಗಿರಲಿಲ್ಲ. ಸೋಮವಾರದಿಂದ ಇಲ್ಲಿ ಮತ್ತು ಕೆಳಮನೆಯಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಒಂದು ನೋವಿನ ವಿಚಾರ ಎಂದರೆ, ಸೀತಾರಾಂರವರು ಮಾತನಾಡುತ್ತಾ ಬಹಳ ಸ್ಪಷ್ಟವಾಗಿ ಹೇಳಿದರು. ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿ ಒಂದು ಪಾಸಿಟೀವ್ ತೀರ್ಮಾನಕ್ಕೆ ಬರಬೇಕು ಎನ್ನುವ ಸಲಹೆಯನ್ನು ಅವರುಕೊಟ್ಟರು. ಇದು ಯಾವುದೋ ಮಹಾನಗರಪಾಲಿಕೆಯಲ್ಲ. ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ಮಹಾನಗರಪಾಲಿಕೆ ಬಗ್ಗೆ ಇತ್ತೀಚಿನ ದಿನಗಳಲ್ಲಿ ಅದರ ಬಗ್ಗೆ ಬಹಳಷ್ಟು negative thoughts ಪ್ರಾರಂಭವಾಗಿವೆ. ಪತ್ರಿಕೆಗಳಲ್ಲಿ ಬೇರೆ–ಬೇರೆ ಸಂದರ್ಭದಲ್ಲಿ ಮಹಾನಗರಪಾಲಿಕೆಯಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ ಎನ್ನುವ ಚರ್ಚೆಯಾಗುತ್ತಿದೆ. ಕೋರ್ಟ್‌ಗಳಲ್ಲಿ ಚರ್ಚೆಯಾಗುತ್ತಿದೆ. ಲೋಕಾಯುಕ್ತ ವರದಿ ಮೇಲೆ ಚರ್ಚೆಯಾಗುತ್ತಿದೆ. ಮಾನ್ಯ ಸೀತಾರಾಂರವರು Technical Vigilance Committee Report ಬಗ್ಗೆ ಹೇಳಿದರು. BMTF ಬಗ್ಗೆ ಈಗ ಸಾಕಷ್ಟು ಚರ್ಚೆಗಳಾಗುತ್ತಿವೆ. ಇನ್ನೇನು ಕೆಲವೆ ಸಮಯದಲ್ಲಿ ಚುನಾವಣೆ ಘೋಷಣೆಯಾಗಬೇಕು ಎನ್ನುವ ಮುನ್ನ ರಾಜ್ಯ ಸರ್ಕಾರ ಫೆಬ್ರವರಿ 19ನೇ ತಾರೀಖು ಮಾನ್ಯ ಕಠಾರಿಯಾರವರ ನೇತೃತ್ವದಲ್ಲಿ ಬೆಂಗಳೂರು ಮಹಾಪಾಲಿಕೆಯಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಅವರ ಜೊತೆಯಲ್ಲಿಶ್ರೀ ಶಿವರುದ್ರಪ್ಪ, ಜಂಟಿ

ಖಜಾನೆ ನಿಯಂತ್ರಕರು, ಇವರನ್ನು ನೇಮಕ ಮಾಡಲಾಗಿತ್ತು. ಇವರಿಂದ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಆಗಿರುವ ಅವ್ಯವಹಾರ, ಲ್ಯಾಪ್ಸಸ್, ಭ್ರಷ್ಟಾಚಾರವನ್ನು ತನಿಖೆ ಮಾಡಿ ವರದಿ ಕೊಡಲು ತಿಳಿಸಲಾಗಿತ್ತು. ಇಂತಹವರಿಂದ ತನಿಖೆ ಮಾಡಿಸಿ ವರದಿಯನ್ನು ತೆಗೆದುಕೊಳ್ಳುವುದು, ಅದರ ಮೇಲೆ ಚರ್ಚೆ ಮಾಡುವುದು ನಿಜಕ್ಕೂ ಸಂತೋಷದ ವಿಚಾರ. ಇದೊಂದು ಒಳ್ಳೆಯ ಬೆಳವಣಿಗೆ.

(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಮಾನ್ಯ ಬಸವರಾಜ ಹೊರಟ್ಟಿಯವರು ಪೀಠವನ್ನು ಅಲಂಕರಿಸಿದರು)

ಯಾವುದೇ ಸ್ಥಳೀಯ ಸಂಸ್ಥೆಯಾಗಲಿ ಅವು ಜನರಿಗೆ ಹತ್ತಿರವಾಗಿರುವಂತಹ ಸಂಸ್ಥೆಗಳು. ಚುನಾಯಿತ ಶಾಸಕರಿಗೂ ಮತ್ತು ಒಬ್ಬ ಎಂಪಿ ಗೂ ಇರುವಂತಹ ವ್ಯತ್ಯಾಸಎಂದರೆ, Corporator ಗಳು ಜನರ ಜೊತೆ ನೇರವಾಗಿ ಹೊಂದಾಣಿಕೆ ಮಾಡಿಕೊಂಡು ಕೆಲಸವನ್ನು ಮಾಡುತ್ತಾರೆ. ಅಂತಹ ಒಂದು ಸಂಸ್ಥೆ ಬಗ್ಗೆ ರಾಜೇಂದ್ರ ಕಟಾರಿಯಾರವರ ನೇತೃತ್ವದಲ್ಲಿ 19–2–2015ರಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ 15–3–2015ರಲ್ಲಿ ಅಂದರೆ 15 ದಿನಗಳಲ್ಲಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಬೆಂಗಳೂರು ಮಹಾನಗರದಲ್ಲಿ 91,000 ರಸ್ತೆಗಳು ಇವೆ, ಬೆಂಗಳೂರಿನ ರಸ್ತೆಗಳ ಉದ್ದಳತೆ 71,000 ಕಿ.ಮೀ. ಸುಮಾರು ಒಂದು ಕೋಟಿಗೂ ಮೀರಿ ಜನಸಂಖ್ಯೆ ಇದೆ. 2008 ರಿಂದ ಆಗಿರುವ ಲ್ಯಾಪ್ಸಸ್ ಬಗ್ಗೆ ಅವರು ವರದಿ ಕೊಟ್ಟಿದ್ದಾರೆ. ಅವರು ಯಾವ ರೀತಿ ವರದಿ ಕೊಟ್ಟಿದ್ದಾರೆ ಎಂದರೆ, ಬಿಬಿಎಂಪಿ ಯಲ್ಲಿ ಲಕ್ಷಾಂತರ ಫೈಲ್‌ಗಳು ಇವೆ, ಲಕ್ಷಾಂತರ ಕೆಲಸ ಕಾಮಗಾರಿಗಳು ಆಗಿವೆ, ಕಳೆದ 2008 ರಿಂದ 2015ರವರೆಗೆ 7 ವರ್ಷಗಳ ಕಾಮಗಾರಿಗಳ ಬಗ್ಗೆ, ಮಹಾನಗರ ಪಾಲಿಕೆಯ 7 ವರ್ಷಗಳ ಆಗು–ಹೋಗುಗಳ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. 15 ದಿನಗಳಲ್ಲಿ ಅಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಇವರು ಎಷ್ಟು ಕಡತಗಳನ್ನು ನೋಡಲು ಸಾಧ್ಯ? ಯಾರನ್ನು ತನಿಖೆ ಮಾಡಿದ್ದಾರೆ? ಇವರು ಏನು ಮಾಡಿದ್ದಾರೆ ಎಂದರೆ, ಬಿಬಿಎಂಪಿ ಗೆ ಸಂಬಂಧಪಟ್ಟಂತೆ ಯಾರ್‍ಯಾರ ಮೇಲೆ ಲೋಕಾಯುಕ್ತ ವರದಿ ಕೊಟ್ಟಿದೆ, ಬಿಬಿಎಂಪಿಗೆ ಸಂಬಂಧಪಟ್ಟಂತೆ ಎಷ್ಟು ಜನರ ಮೇಲೆ ಟಿವಿಸಿಸಿ ರಿಪೋರ್ಟ್ ಇದೆ, ಎಷ್ಟು ಜನ ಮೇಲೆ ಬಿಎಂಟಿಎಫ್ ರಿಪೋರ್ಟ್ ಇದೆ, ನ್ಯಾಯಾಲಯದಲ್ಲಿ ಯಾರ ಮೇಲೆ ಕೇಸ್‌ಗಳು ಇವೆ ಇವೆಲ್ಲವುಗಳನ್ನು ಸಂಗ್ರಹ ಮಾಡಿಕೊಂಡಿದ್ದಾರೆ. ಸರ್ಕಾರಿ ಸಂಸ್ಥೆಗಳ ಬೇರೆ–ಬೇರೆ ಏಜೆನ್ಸಿಗಳು ಕೊಟ್ಟಿರುವಂತಹ ವರದಿಯನ್ನು ತೆಗೆದುಕೊಂಡು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ವರದಿ ಕೊಡುವ ಸಂದರ್ಭದಲ್ಲಿ ಈ ವರದಿ ಬಗ್ಗೆ ಚರ್ಚೆ ಮಾಡಿ, ತನಿಖೆ ಮಾಡಿ.. ಸರ್ಕಾರವೇ ಅಧಿಕೃತವಾಗಿ ನ್ಯಾಯಾಲಯಕ್ಕೆ ಹೋಗಿ ಮಹಾನಗರ ಪಾಲಿಕೆಯ ವಿರುದ್ಧವಾಗಿ ಸಾವಿರಾರು ಕೋಟಿ ರೂ.ಗಳ ಭ್ರಷ್ಟಾಚಾರವಾಗಿದೆ, ದಯಮಾಡಿ ನ್ಯಾಯಾಲಯ ಇದಕ್ಕೆ ತಡೆ ಆಜ್ಞೆ ಕೊಡಿ ಎನ್ನುವುದು ಸರಿಯೇ? ಮಹಾನಗರ ಪಾಲಿಕೆಯ ಪಾಲಕರಾಗಿ ಇರಬೇಕಾಗಿದ್ದು ಸರ್ಕಾರ, ಸರ್ಕಾರವು part of

ಮಹಾನಗರಪಾಲಿಕೆ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ಮಹಾನಗರದ ಉಸ್ತುವಾರಿಗಳು. ಬೆಂಗಳೂರು ಮಹಾನಗರಕ್ಕೆ ಮಾನ್ಯ ರಾಮಲಿಂಗಾರೆಡ್ಡಿಯವರು ಉಸ್ತುವಾರಿ ಸಚಿವರು. ಈ ರಾಜ್ಯದ ರಾಜಧಾನಿ ಬಗ್ಗೆ ಮಹಾನಗರಪಾಲಿಕೆಯ ವಿರುದ್ಧವಾಗಿ ಹೋಗಿ ಸರ್ಕಾರ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು ಹಾಕಿ ಭ್ರಷ್ಟಾಚಾರ ನಡೆದಿದೆಎಂದು ಹೇಳುವುದು ಯಾವರೀತಿ ಇದು? ಬೆಂಗಳೂರು ಮಹಾನಗರಪಾಲಿಕೆಯಲ್ಲಿ 112 ಜನ ಬಿಜೆಪಿ ಕಾರ್ಪೋರೇಟರ್ ಇದ್ದಾರೆ, 16 ಜನ ಜೆಡಿಎಸ್ ಕಾರ್ಪೋರೇಟರ್, 65 ಜನ ಕಾಂಗ್ರೆಸ್ ಕಾರ್ಪೋರೇಟರ್ ಇದ್ದಾರೆ. ನಮ್ಮ ಸರ್ಕಾರ ಇದ್ದ ಈ ಐದು ವರ್ಷಗಳ ಮಧ್ಯದಲ್ಲಿ ಒಂದು ವರ್ಷ ಕಾಂಗ್ರೆಸ್‌ನ ಉಪ ಮೇಯರ್ ಇದ್ದರು. ಟಿವಿಸಿಸಿ ವರದಿ ಆಗಿರಬಹುದು, ಲೋಕಾಯುಕ್ತ ವರದಿಯಾಗಿರಬಹುದು ಅಥವಾ ಕೋರ್ಟ್‌ಗಳು ಕೊಟ್ಟಿರುವ ವರದಿ, ಕೋರ್ಟ್‌ನಲ್ಲಿ ಆಗುವ ತನಿಖೆಗಳನ್ನು ನೋಡಿದಾಗ, ಈ ಅವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಯಾವುದಾದರು ಒಬ್ಬ ಚುನಾಯಿತ ಪ್ರತಿನಿಧಿಗಳ ಮೇಲೆ ಕೇಸ್‌ಗಳು ಇದ್ದರೆ ದಯಮಾಡಿ ಅಂತವರ ಮೇಲೆ ಕ್ರಮ ತೆಗೆದುಕೊಳ್ಳಿ. ಕೇವಲ ಚುನಾಯಿತ ಪ್ರತಿನಿಧಿಗಳಿಂದ ಭ್ರಷ್ಟಾಚಾರವಾಗಿದೆಯೇ, ಅಧಿಕಾರಿಗಳಿಂದ ಭ್ರಷ್ಟಾಚಾರವಾಗಿಲ್ಲವೇ ಎಂದು ನ್ಯಾಯಾಲವೇ ಪ್ರಶ್ನೆ ಮಾಡಿದೆ. ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕು. ರಾಜ್ಯದ ರಾಜಧಾನಿಯ ಜವಾಬ್ದಾರಿ ತೆಗೆದುಕೊಂಡಿರುವ ನಮ್ಮ ಸಂಸ್ಥೆಯ ಮೇಲೆಯೇ ಸರ್ಕಾರ ಇಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆಪಾದನೆ ಮಾಡಿದಾಗ, ಬೆಂಗಳೂರಿನ ಬಗ್ಗೆ ಬೇರೆಯವರಿಗೆ ಯಾವ ಕಲ್ಪನೆ ಬರುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಬಾಯಿ ಬಿಟ್ಟರೆ Garbage City ಎಂದು ಹೇಳುತ್ತಾರೆ. ನಾನು ಒಂದು ಗಂಭೀರವಾದ ವಿಚಾರವನ್ನು ಹೇಳುತ್ತೇನೆ. ಆ ವಿಚಾರ ಮಾನ್ಯ ರಾಮಲಿಂಗಾರೆಡ್ಡಿಯವರಿಗೂ ಗೊತ್ತಿದೆ. ಅವರು ಆ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆಯೇ ಇಲ್ಲವೆ ಎನ್ನುವುದು ನನಗೆ ಗೊತ್ತಿಲ್ಲ. 2007ರಲ್ಲಿ ಬಿಎಂಟಿಎಫ್ ಒಂದು ವರದಿಯನ್ನು ಕೊಟ್ಟಿದೆ. ಬೆಂಗಳೂರಿನಲ್ಲಿ ನಡೆಯುತ್ತಿರುವ Garbage Lobby ಏನು ಇದೆ, ಇದು ಸುಮಾರು ವರ್ಷದಿಂದ ಒಬ್ಬರೇ ನೋಡಿಕೊಂಡು ಹೋಗುತ್ತಿದ್ದಾರೆ. ಟೆಂಡರ್ ಕರೆಯಲು ಬಿಡುವುದಿಲ್ಲ. ಇದರಲ್ಲಿ ಯಾರ್‍ಯಾರು ಇದ್ದಾರೆ, ಯಾವ ರೀತಿಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಬಗ್ಗೆ ಬಿಎಂಟಿಎಫ್ ವರದಿಯಲ್ಲಿ ಇದೆ. 2010ರಲ್ಲಿ ಬಂದಿರುವ ಮಹಾನಗರಪಾಲಿಕೆ ಈ ವರದಿಯ ಆಧಾರದ ಮೇಲೆ... ಇದರಲ್ಲಿ ಹತ್ತು ಜನ ಗುತ್ತಿಗೆದಾರರು ಇದ್ದಾರೆ. ಇವರು ಯಾವ ಮಟ್ಟದಲ್ಲಿದ್ದಾರೆ ಎಂದರೆ, ಟೆಂಡರ್ ಕರೆಯಲು ಬಿಡುವುದಿಲ್ಲ. ಮೂರು-ಮೂರು ತಿಂಗಳು ಮುಂದುವರೆಸಿಕೊಂಡು ಹೋಗುತ್ತಾರೆ. ಇದು ಯಾವ ಪಾಪದ ಕೂಸು ಎಂದರೆ, 2006 ರಿಂದ 2008 ರವರೆಗೆ ಟೆಂಡರ್ ಕರೆಯುವುದಿಲ್ಲ. ಹಾಗೆ ಮೂರು-ಮೂರು ತಿಂಗಳು ಮುಂದುವರೆಸಿಕೊಂಡು ಹೋಗುತ್ತಾರೆ. ಈ ಎಲ್ಲಾ ಲ್ಯಾಪ್ಸಸ್ ಆಗಿರುವುದು Administrator period ನಲ್ಲಿ. ಚುನಾಯಿತ

ಪ್ರತಿನಿಧಿಗಳಾರೂ ಮಹಾನಗರಪಾಲಿಕೆಯಲ್ಲಿ ಇರಲಿಲ್ಲ. ಆದರೆ ಭ್ರಷ್ಟಾಚಾರ ಬಂದಿರುವುದು ಚುನಾಯಿತ ಪ್ರತಿನಿಧಿಗಳ ಮೇಲೆ. ದಯಮಾಡಿ ಚುನಾಯಿತ ಪ್ರತಿನಿಧಿಗಳ ಮೇಲೆ allegations ಮಾಡುವುದು ಬೇಡ. ನಗರದ ಪಿತೃಗಳು ಅವರು, ಅವರ ಬಗ್ಗೆ ನಾವು ಏಕೆ ಅಷ್ಟು ಕೆಟ್ಟದಾಗಿ ಮಾತನಾಡಬೇಕು?

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಗಳೆ, ಚುನಾಯಿತ ಪ್ರತಿನಿಧಿಗಳ ಮೇಲೆ ಏನು allegations ಇಲ್ಲ. ಸಂಸ್ಥೆಯಲ್ಲಿ ಕೆಲವು ಲೋಪದೋಷಗಳಿವೆಯೆಂದು supersede ಮಾಡಿರುವುದು. ಉಪ ಮೇಯರ್ ಅಥವಾ ಬೇರೆ ಯಾವ ವಿಚಾರದಲ್ಲಿಯೂ ಅಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಗಳೆ, ಮಾನ್ಯ ರಾಮಲಿಂಗಾರೆಡ್ಡಿಯವರೆ ತಾವು ಹಿರಿಯ ಸದಸ್ಯರು, ಮಹಾನಗರ ಪಾಲಿಕೆಯ ಸದಸ್ಯರು ಆಗಿ ಕೆಲಸ ಮಾಡಿದ್ದೀರಿ. ಇದು ಹೇಗೆ ಆಗಿದೆ ಎಂದರೆ, ಸಂಜೆವಾಣಿ ಪೇಪರ್ ಮಾರುವ ಹುಡುಗ "ಮುಖ್ಯಮಂತ್ರಿಗಳಿಗೆ ಗಲ್ಲು ಶಿಕ್ಷೆ" ಎಂದು ಕೂಗುತ್ತಿರುತ್ತಾನೆ. ಇದರಿಂದ ಜನರಿಗೆ confusion ಆಗಿ ಏನು ಇದು "ಮುಖ್ಯಮಂತ್ರಿಗಳಿಗೆ ಗಲ್ಲು ಶಿಕ್ಷೆಯೇ" ಎಂದು ಎಲ್ಲರೂ ಪೇಪರ್ ತೆಗೆದುಕೊಂಡು ಓದುತ್ತಾರೆ. ಆದರೆ "ಮುಖ್ಯಮಂತ್ರಿಗಳಿಗೆ ಗಲ್ಲು ಶಿಕ್ಷೆ" ಕೆಳಗೆ "ಕೊಡುವ ಅಧಿಕಾರ ಇದೆ" ಎನ್ನುವುದು ಇರುತ್ತದೆ. ಆ ಹುಡುಗ "ಕೊಡುವ ಅಧಿಕಾರವಿದೆ" ಎನ್ನುವುದನ್ನು ಹೇಳುವುದೇ ಇಲ್ಲ. ಅವನ ಪೇಪರ್ ಮಾರಾಟವಾಗಬೇಕು ಅಷ್ಟೆ ಅವನ ಉದ್ದೇಶ. ಓದುವ ಗಾಬರಿಯಲ್ಲಿ 5 ರೂ.ಗಳನ್ನು ಕೊಟ್ಟು ಚಿಲ್ಲರೆ ಇಟ್ಟಕೋ ಎಂದು ಹೇಳಿ ಓದಿದರೆ ಕೆಳಗೆ ಕೊಡುವ ಅಧಿಕಾರವಿದೆ ಎನ್ನುವುದು ಇರುತ್ತದೆ. ಹಾಗೆ ಮಾನ್ಯ ರಾಮಲಿಂಗಾರೆಡ್ಡಿಯವರು, ನಾವು ಯಾರು ಕಾರ್ಪೊರೇಟರ್‌ಗಳ ಮೇಲೆ ಹೇಳುತ್ತಿಲ್ಲ. ಮಹಾನಗರಪಾಲಿಕೆ ಮೇಲೆ ಹೇಳುತ್ತಿದ್ದೇವೆ. ಮಹಾನಗರಪಾಲಿಕೆ ಎಂದರೆ ಯಾರು? ದಯಮಾಡಿ ಅದನ್ನು ಹೇಳಿ ತಾವು. ವರದಿಯಲ್ಲಿ ಯಾರ ಹೆಸರು ಇದೆ ದಯಮಾಡಿ ಅದನ್ನು ಹೇಳಿ. ಅಧಿಕಾರಿಗಳು ಇದ್ದಾರೆಯೇ, ಶಾಸಕರು ಇದ್ದಾರೆಯೇ, ಸಚಿವರು ಇದ್ದಾರೆಯೇ? ಯಾರು ಕಾರಣರು ಇದಕ್ಕೆ? Bangalore City Garbage City ಎಂದು New York City Times ಪೇಪರ್‌ನಲ್ಲಿ ಬಂತು, ಅಮೇರಿಕಾ ಪೇಪರ್‌ನಲ್ಲಿ ಬಂತು ಎಂದು ಹೇಳುತ್ತಿರುತ್ತಾರೆ. ಇಲ್ಲಿ ಕೆಲವರು ಸೇರಿಕೊಂಡಿದ್ದಾರೆ, ಗೋಪಿನಾಥ್‌ರೆಡ್ಡಿ, ರಾಮಚಂದ್ರರೆಡ್ಡಿ, ಕವಿತಾ, ಬಾಲಸುಬ್ರಮಣ್ಯಂ, ಪಾಂಡುರಂಗ ಇವರು ಸೇರಿಕೊಂಡು ಟೆಂಡರ್ ಕರೆಯಲು ಬಿಡುತ್ತಿರಲಿಲ್ಲ. ಇದರ ಬಗ್ಗೆ ಬಿಎಂಟಿಎಫ್ ವರದಿಯಲ್ಲಿ ಮಹಾನಗರಪಾಲಿಕೆಯಲ್ಲಿ ಸರ್ಕಾರದ ಸಂಬಳ ತೆಗೆದುಕೊಳ್ಳುವವರು ಅಷ್ಟೇ ಅಲ್ಲ, ಬಿಬಿಎಂಪಿ ಯಲ್ಲಿ ಎಷ್ಟು ಜನ regular employees ಗಳು ಇದ್ದಾರೆ, ಗುತ್ತಿಗೆ ತೆಗೆದುಕೊಂಡಿರುವವರು zonal wise ಎಷ್ಟು ಜನ ಪೌರಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು, ಎಷ್ಟು ತಳ್ಳುವ ಗಾಡಿಗಳನ್ನು ಇಟ್ಟುಕೊಳ್ಳಬೇಕು, secondary collection ನಲ್ಲಿ ಎಷ್ಟು ಆಟೋಗಳನ್ನು ಇಟ್ಟುಕೊಳ್ಳಬೇಕು, final

dumping yard ಗೆ ತೆಗೆದುಕೊಂಡು ಹೋಗಲು ಅದಕ್ಕೆ ಎಷ್ಟು ಲಾರಿಗಳನ್ನು ಇಟ್ಟುಕೊಳ್ಳಬೇಕು ಎನ್ನುವುದನ್ನು ಮಹಾನಗರಪಾಲಿಕೆಯು ಟೆಂಡರ್ ಸಮಯದಲ್ಲಿ ಕ್ಲಿಯರ್ ಆಗಿ ಕೊಟ್ಟಿದ್ದಾರೆ. ಇವೆಲ್ಲವನ್ನು ಮರೆಮಾಚಿ ತಿಂಗಳಿಗೆ ನೂರಾರು ಕೋಟಿ ರೂ.ಗಳಷ್ಟು ಹಣವನ್ನು ಗಳಿಸಿಕೊಂಡಿದ್ದಾರೆ. ಈ ರೀತಿ ಹಣ ಹಾಳಾಗುತ್ತಿರುವುದನ್ನು ತಡೆಯಲು ಮತ್ತು ಕಸ ಸರಿಯಾಗಿ dumping yard ಗೆ ಹೋಗುತ್ತಿರಲಿಲ್ಲ, ಪೌರಕಾರ್ಮಿಕರಿಗೆ ಸಂಬಳವನ್ನು ಕೊಡುತ್ತಿರಲಿಲ್ಲ. ಹತ್ತಾರು ಸಾವಿರ ಸಿಬ್ಬಂದಿ ಎಂದು ತೋರಿಸುತ್ತಾರೆ. ಆದರೆ ಅದಕ್ಕೆ ರೋಸ್ಟರ್ ಇಟ್ಟುಕೊಂಡಿರುವುದಿಲ್ಲ. ಕಾರ್ಮಿಕ ಇಲಾಖೆ ಮತ್ತು ಬೇರೆ-ಬೇರೆ ಸಂಸ್ಥೆಗಳು ಇದರ ಮೇಲೆ issues raise ಮಾಡಿದ ಮೇಲೆ, ಬಿಜೆಪಿ ಚುನಾಯಿತ ಪ್ರತಿನಿಧಿಗಳು ಬಂದಮೇಲೆ ಟೆಂಡರ್ ಕರೆಯಬೇಕು ಎಂದು tender float ಮಾಡುತ್ತಾರೆ. ಆದರೆ ಟೆಂಡರ್ ಕರೆಯಲು ಬಿಡುವುದಿಲ್ಲ. ಮಂಡೂರಿನಲ್ಲಿ ಲಾಬಿ ನಡೆಯುತ್ತದೆ. ಕಸ ಹಾಕಲು ಬಿಡುವುದಿಲ್ಲ. ಬೆಂಗಳೂರಿನಲ್ಲಿ ಕಸ ಎತ್ತಲು ಬಿಡುವುದಿಲ್ಲ. ಆ ಮಟ್ಟಿಗೆ ಲಾಬಿ ಮಾಡುತ್ತಾರೆ. ಇದರಿಂದ 15 ರಿಂದ ಒಂದು ತಿಂಗಳವರೆಗೆ ಬೆಂಗಳೂರು ಮಹಾನಗರಪಾಲಿಕೆಗೆ ಕೆಟ್ಟ ಹೆಸರು ಬಂತು. ನಂತರ M/s. BVG Group of Companies ಗೆ ಟೆಂಡರ್‌ನ್ನು ಅವಾರ್ಡ್ ಮಾಡುತ್ತಾರೆ. ಆಗಲೂ ಸಹ ಒಂದು ತಿಂಗಳು ತುಂಬಾ ತೊಂದರೆಯನ್ನು ಕೊಡುತ್ತಾರೆ. Garbage Lobby ಮಹಾನಗರಪಾಲಿಕೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿತ್ತು. ಆದರೆ ಇವತ್ತು ಆ ಸಮಸ್ಯೆ ಇಲ್ಲ. 15 ಅಥವಾ ಒಂದು ತಿಂಗಳು ಬೆಂಗಳೂರಿನಲ್ಲಿ ಕಸದ ಸಮಸ್ಯೆಯಾದಾಗ ಬೆಂಗಳೂರು garbage city ಎನ್ನುವುದಲ್ಲ, ಬೆಂಗಳೂರು ಒಂದು ರಾಜಧಾನಿ. ಈ ಸಮಸ್ಯೆ ಮುಗಿದ ಮೇಲೂ ಪ್ರತಿನಿತ್ಯ garbage city ಎಂದು ಮಾತನಾಡುವುದು ಔಚಿತ್ಯವಲ್ಲ. ಯಾವುದೋ ಒಂದು ಸಂದರ್ಭದಲ್ಲಿ ಆಗಿರಬಹುದು. ಮೊನ್ನೆ ಒಂದೆರಡು ತಿಂಗಳ ಹಿಂದೆ ಮಾತೆತ್ತಿದರೆ ಅತ್ಯಾಚಾರದ ಪ್ರಕರಣಗಳು ಬರುತ್ತಿತ್ತು. ಆಗ ಬೆಂಗಳೂರು rape city ಆಗಿ ಹೋಯಿತು ಎಂದು ಬಂತು. ಆದರೆ ಇವತ್ತು ಮಾತನಾಡುವುದಕ್ಕೆ ಆಗುತ್ತದೆಯೇ? ಆ ಘಟನೆ ಅಥವಾ ಸಂದರ್ಭದಲ್ಲಿ ಬರುವ ವಿಚಾರವನ್ನು ನಿರಂತರವಾಗಿ ಹೇಳಿಕೊಂಡು ಬೆಂಗಳೂರಿಗೆ ಇರುವ ಇಮೇಜ್ ಅನ್ನು ಕಡಿಮೆ ಮಾಡುವುದು ಯಾರಿಗೂ ಒಳ್ಳೆಯದಲ್ಲ. ಚುನಾವಣೆ ಮಾಡಬಹುದು, ಬಿಡಬಹುದು, ಅದು ಅವರ ವಿವೇಚನೆಗೆ ಬಿಟ್ಟ ವಿಚಾರ. ಅದಕ್ಕೆ ಕಾನೂನು ಇದೆ. ಆದರೆ ಎಲ್ಲೋ ಒಂದು ಕಡೆ ಚುನಾವಣೆ ಫೇಸ್ ಮಾಡುವುದಕ್ಕೆ ಆಗದೇ ಬೆಂಗಳೂರನ್ನು garbage city, rape city, shoot at sight city ಎನ್ನುವುದು ಸರಿಯಲ್ಲ. ಬೆಂಗಳೂರು ಮಹಾನಗರ ಕರ್ನಾಟಕಕ್ಕೆ ರಾಜಧಾನಿಯಾಗಿದೆ. ನಾಳೆ ಎರಡು ಅಥವಾ ಮೂರು ಮಾಡಿದಾಗ ನಾವು ಯಾವುದನ್ನು ರಾಜಧಾನಿ ಎಂದು ಕರೆಯುವುದು? ಇವೆಲ್ಲವನ್ನು ಯೋಚನೆ ಮಾಡಬೇಕು. ರಾಜಧಾನಿ ಬಗ್ಗೆ ನಾವುಗಳು ಇಷ್ಟು ಹಗುರವಾಗಿ ತೆಗೆದುಕೊಳ್ಳುವುದು ಸರಿಯಲ್ಲ. ಬಿಜೆಪಿ

ಪಕ್ಷದ ಪ್ರಣಾಳಿಕೆಯಲ್ಲಿ ಇದೆ, ಮಾನ್ಯ ಜಗದೀಶ್ ಶೆಟ್ಟರ್ ಹೇಳಿದ್ದಾರೆ ಎನ್ನುವುದಲ್ಲ. ನಾನು ಚುನಾವಣೆ ಪ್ರಣಾಳಿಕೆ ಸಮಿತಿಯ ಸದಸ್ಯನಾಗಿದ್ದೇನೆ. ಬೆಂಗಳೂರಿನ Vision Document ಬಗ್ಗೆ ನಾನು ಸದಸ್ಯನಿದ್ದೇನೆ. ಬೆಂಗಳೂರಿನ ಪುನರ್‌ವಿಂಗಡನೆ ಮತ್ತು ಪುನರ್‌ರಚನೆಗೆ ವ್ಯತ್ಯಾಸ ಇದೆ ಎಂದು ನಾನು ಕನ್ನಡವನ್ನು ಅರ್ಥ ಮಾಡಿಕೊಂಡಿದ್ದೇನೆ. Restructure ಗೂ division ಗೂ ವ್ಯತ್ಯಾಸ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಂಗ್ಲೀಷ್ ನನಗೆ ಗೊತ್ತಿಲ್ಲ. ಪುನರ್ ವಿಂಗಡಣೆ ಎಂದರೆ ಭಾಗ ಮಾಡುವುದು ಮತ್ತು ಪುನರ್ ರಚನೆ ಎಂದರೆ ಆಡಳಿತದ ಬಗ್ಗೆ ಆಗುತ್ತದೆ. Minimum Governance, Maximum Government ಎನ್ನುವ ಒಂದು slogan ಇದ್ದು ನಾವು ಆ ಲೆಕ್ಕದಲ್ಲಿ ಯೋಚನೆ ಮಾಡಿದ್ದೇವೆ. ನಾವು Mayor-in-Council ಎಂಬ ಪದವನ್ನು ಉಪಯೋಗಿಸಿರುವ ಬಗ್ಗೆ ಒಪ್ಪಿಕೊಳ್ಳುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಒಪ್ಪಿಕೊಂಡಿದ್ದಾರೆ ಎಂದು ಆರೋಪ ಮಾಡಿದರು. ಬೆಂಗಳೂರಿನ ಬಗ್ಗೆ ಮಾಜಿ ಆಯುಕ್ತರಾದ ಮಾನ್ಯ ರವೀಂದ್ರರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದು, ಅವರು ವರದಿ ಕೊಡುವ ಸಂದರ್ಭದಲ್ಲಿ ಒಂದು ಸೆಮಿನಾರ್‌ನಲ್ಲಿ ಭಾಗವಹಿಸಿದ್ದಾಗ ಬೆಂಗಳೂರು re-division ಹಾಗೂ ಇನ್ನಿತರ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದರು. ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು 'ಇಲ್ಲ, ಇದರ ಬಗ್ಗೆ ನಾನು ಹೇಳುವುದಕ್ಕೆ ಆಗುವುದಿಲ್ಲ, ಇದು ಸಾರ್ವಜನಿಕವಾಗಿ ಚರ್ಚೆಯಾಗಬೇಕು' ಎಂದು ಹೇಳಿದ್ದಾರೆ. ಒಂದು ವಿಷಯ ಹೇಳಬೇಕೆಂದರೆ 'ಮುಖ್ಯಮಂತ್ರಿಗಳಿಗೆ ಗಲ್ಲು ಶಿಕ್ಷೆ' ಎಂದು ಹೇಳಿ ಪೂರ್ತಿಯಾಗಿ 'ಮುಖ್ಯಮಂತ್ರಿಗಳಿಗೆ ಗಲ್ಲುಶಿಕ್ಷೆ ಕೊಡುವ ಅಧಿಕಾರ ಇದೆ' ಎನ್ನುವಂತೆ ಆಯಿತು. ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು 'ಸಾರ್ವಜನಿಕ ಚರ್ಚೆಯಾಗಬೇಕಾಗಿದ್ದು, ಅಷ್ಟು ಸಲೀಸಾಗಿ ಮಾಡುವುದಕ್ಕೆ ಆಗುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಆ ವಿಷಯವನ್ನು ಅವರು ಹೇಳುತ್ತಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಸಹ ಹುಬ್ಬಳ್ಳಿಯಲ್ಲಿ 'ಹಿಂದೂ' ದಿನಪತ್ರಿಕೆಯ ಪತ್ರಕರ್ತರ ಜೊತೆ ಮಾತನಾಡುವಾಗ casual ಆಗಿ ಮಾತನಾಡಿದ್ದಾರೆ. ಅವರು ಪತ್ರಿಕಾ ಗೋಷ್ಠಿಯನ್ನು ಕರೆದು ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಈಗ ಮಾನ್ಯ ದಿನೇಶ್ ಗುಂಡೂರಾವ್‌ರವರು ಶ್ರೀ ಡಿ.ಕೆ. ರವಿಯವರ ಕೇಸ್ ಅನ್ನು ಸಿಬಿಐಗೆ ಕೊಡಬೇಕು ಎಂದು ಹೇಳಿದರು, ಅದಕ್ಕೆ ಅವರು ಸಿಬಿಐಗೆ ಕೊಟ್ಟುಬಿಟ್ಟರೇ? ಅವರು ನಂತರ ಏನು ಮಾಡಿದರು? 'ಅವರ ತಂದೆ-ತಾಯಿಗಳಿಗೆ ಗೌರವ ಕೊಟ್ಟು ಸಿಬಿಐಗೆ ಕೊಡುತ್ತಿದ್ದೇನೆ' ಎಂದು ಹೇಳಿದರು. ಶ್ರೀ ದಿನೇಶ್ ಗುಂಡೂರಾವ್ ಹೇಳಿಕೆಯನ್ನು ಒಪ್ಪಿಕೊಂಡುಬಿಟ್ಟರೇ? ಶ್ರೀ ಶಾಮನೂರು ಶಿವಶಂಕರಪ್ಪನವರ ಹೇಳಿಕೆ ಏನಾಯಿತು? ಅದೆಲ್ಲ ಇರುತ್ತದೆ. ಆಯಾ ಸಂದರ್ಭದಲ್ಲಿ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಅದನ್ನು ನಾವಾಗಲೀ ಅವರಾಗಲೀ ಬಹಳ

ಗಂಭೀರವಾಗಿ ತೆಗೆದುಕೊಂಡು ಮಾತನಾಡುವುದಕ್ಕೆ ಆಗುವುದಿಲ್ಲ. ನಾವು financial infrastructure ಬಗ್ಗೆ ಬಹಳ ಮಾತನಾಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನ ಸ್ನೇಹಿತರು ಕೆಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ನನಗೆ ಅರ್ಥವಾಗದೇ ಇರುವುದೇನೆಂದರೆ ಶ್ರೀ ಡಿ.ಕೆ. ರವಿಯವರ ವಿಚಾರವನ್ನು ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಪ್ರಸ್ತಾಪಿಸಿದ್ದು, ಮಾನ್ಯ ಗೃಹ ಸಚಿವರೇನಾದರೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರೆ ......

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಅಂದು ಕಾನೂನು ಮತ್ತು ಸಂಸದೀಯ ಹಾಗೂ ನಗರಾಭಿವೃದ್ಧಿ ಸಚಿವರಾಗಿ ಮಾನ್ಯ ಸುರೇಶ್ ಕುಮಾರ್‌ರವರು ಹೇಳಿಕೆ ಮಾಡಿದ್ದಾರೆ. ಹಾಗಾಗಿ ಮಂತ್ರಿಗಳು ಹೇಳಿರುವುದಕ್ಕೆ ಯಾವುದೇ ಬೆಲೆ ಇಲ್ಲವೇ ಅಥವಾ ಅವರ ಮುಖ್ಯಮಂತ್ರಿಗಳು ಮಾಡಿದ್ದ ಸಮಿತಿಯು ನೀಡಿದ ವರದಿಯ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ division ಮಾಡುವುದಕ್ಕೆ ಒಪ್ಪಿಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾಗಿತ್ತು. ಆದರೆ ಇವತ್ತು argument ಗೋಸ್ಕರ argument ಮಾಡುವುದಕ್ಕೆ ಹೊರಟಿದ್ದು, ಇದನ್ನು ಜನರು ಗಮನಿಸುತ್ತಾರೆ ಎಂಬುದನ್ನು ನನ್ನ ಸ್ನೇಹಿತರು ಅರ್ಥಮಾಡಿಕೊಳ್ಳಬೇಕು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ನಗರದ ಬಗ್ಗೆ ಕಾಳಜಿ ವಹಿಸಿ BATF (Bangalore Agenda Task Force) ಎಂಬ ಒಂದು ಸಮಿತಿಯನ್ನು ಮಾಡಿ, ಆ ಸಮಿತಿಗೆ ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷರು ಹಾಗೂ ಇನ್ಫೋಸಿಸ್ ಶ್ರೀ ನಾರಾಯಣಮೂರ್ತಿ, ಶ್ರೀಯುತ ಅಜೀಮ್ ಪ್ರೇಮ್‌ಜಿ, ಶ್ರೀ ಜಯರಾಜ್‌ರವರೆಲ್ಲರೂ ಇದ್ದರು. ಈ ರೀತಿ ಸಮಾಜದ ಕೆಲವು ಗಣ್ಯ ವ್ಯಕ್ತಿಗಳು ಹಾಗೂ ಐಟಿ ಕಂಪನಿಯವರನ್ನು ಸೇರಿಸಿಕೊಂಡು ಸಮಿತಿ ಮಾಡಿದ್ದರು. ಇದನ್ನು ಬೆಂಗಳೂರು ಅಭಿವೃದ್ಧಿ ಬಗ್ಗೆ, ಫುಟ್‌ಪಾತ್, ರಸ್ತೆಗಳು, ಕುಡಿಯುವ ನೀರು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಮಾಡಿದ್ದು, ವಿಶೇಷವಾಗಿ ಆಗ ಹೆಚ್‌ಎಎಲ್‌ನಲ್ಲಿ ಟ್ರಾಫಿಕ್ ಸಮಸ್ಯೆ ಇತ್ತು. ಈ ಸಮಿತಿಯ ಅವರದೇ ಸಲಹೆಗಳನ್ನು ಸಮಯಕ್ಕೆ ಹಾಗೂ ಸಂದರ್ಭಕ್ಕೆ ತಕ್ಕಂತೆ ಕೊಡುತ್ತಿತ್ತು. ಬಿಜೆಪಿ ಸರ್ಕಾರದ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ABIDE (Agenda for Bangalore Infrastructure Development) ಎನ್ನುವ ಸಮಿತಿಯನ್ನು ಮಾಡಿ, ಇದೂ ಸಹ ಸಮಯಕ್ಕೆ ತಕ್ಕಂತೆ ಸಲಹೆ ಕೊಡುವ ಸಮಿತಿಯಾಗಿತ್ತು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಶ್ರೀ ಬಿ.ಎಸ್.

ಪಾಟೀಲ್‌ರವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ, ಈ ಸಮಿತಿ ಬೆಂಗಳೂರಿನ ಬಗ್ಗೆ ಅಧ್ಯಯನ ಮಾಡಿ ಒಂದು ವರದಿ ಕೊಡಬೇಕೆಂದು ಇತ್ತು. ಈ ಸಮಿತಿ ಮೊದಲನೆಯ ವರದಿಯನ್ನು ಕೊಟ್ಟಿದೆ ಹಾಗೂ ಎರಡನೆಯ ವರದಿಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ಸಾರ್ವಜನಿಕವಾಗಿ ಬಂದಿಲ್ಲ. ಮೂರನೆಯ ವರದಿಯನ್ನು ಇನ್ನೂ ಕೊಟ್ಟಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, 2005ರಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ Indian Institute of Science ನಲ್ಲಿ ಮೂರು ದಿನಗಳ ಕಾಲ ABIDE ಬಗ್ಗೆ ಚರ್ಚೆಯಾಯಿತು. ಮೂರು ದಿವಸಗಳಿಗೆ ಸುಮಾರು ರೂ. 50 ಲಕ್ಷಗಳು ಖರ್ಚಾಯಿತು. ರೂ. 22,000 ಕೋಟಿ ಪ್ಲಾನ್ ಅನ್ನು ಮಾಡಿ, ಅದರ ಕೆಲಸದಲ್ಲಿ ರೂ. 2 ಕೂಡ ಖರ್ಚಾಗಿಲ್ಲ. ಅದು take off ಆಗಿಲ್ಲ. ಅದನ್ನು ಹೆಸರಿಸಿ ಮುಂದಕ್ಕೆ ಬಂದುಬಿಟ್ಟರು. ಇದನ್ನು ಯಾವುದೇ ಕಾಮಗಾರಿ ಕೆಲಸಗಳಿಗೆ ರಚನೆ ಮಾಡಿಲ್ಲ. ಅದನ್ನು ಸಮಿತಿಯ ಅಭಿಪ್ರಾಯಕ್ಕಾಗಿ ರಚನೆ ಮಾಡಿದ್ದು, ದ್ವಿಭಜನೆ ಮತ್ತು ತ್ರಿಭಜನೆ ಮಾಡುವ ಬಗ್ಗೆ ಕೇಳಿರುವುದು. ರೂ. 22,000 ಕೋಟಿ ಅಭಿವೃದ್ಧಿ ಮಾಡಬೇಕೆಂದು ನೀಲಿನಕ್ಷೆ ಕೊಟ್ಟಿದ್ದಕ್ಕೆ ನಾವು ಬಹಳ ಸಂತೋಷ ಪಟ್ಟೆವು. ಅವರು ಅಧಿಕಾರಕ್ಕೆ ಬಂದ ಕೂಡಲೇ ಇಷ್ಟೊಂದು ಒಳ್ಳೆಯ ಕೆಲಸ ಮಾಡುತ್ತಿದ್ದು, ಬೆಂಗಳೂರಿನ ಬಗ್ಗೆ ಇಷ್ಟೊಂದು ಚಿಂತನೆ ಮತ್ತು ದೂರದೃಷ್ಟಿ ಇದೆ ಎಂದುಕೊಂಡಿದ್ದೆವು. ಮಾನ್ಯ ಸದಸ್ಯರು ಅದರ ಬಗ್ಗೆ ಕೂಡ ಹೇಳಬೇಕು. ಕೇವಲ ಅದನ್ನು hit and run ಆಗುವಂತೆ ಹೇಳಬಾರದು. ABIDE ಬಗ್ಗೆ ಏನು ಮಾಡಿದರು ಎಂದು ಹೇಳಲಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ABIDE ಬಗ್ಗೆ ನಡೆದ ಚರ್ಚೆಯಲ್ಲಿ ಅಂದು ಅವರು ಭಾಗವಹಿಸಿದ್ದರೆ ರೂ. 22,000 ಕೋಟಿ ಘೋಷಣೆ ಮಾಡಿ ಕೆಲಸ ಮಾಡಿಲ್ಲ ಎಂದು ಪ್ರಶ್ನೆಗಳನ್ನು ಹಾಕಬಹುದಾಗಿತ್ತು. ಅವರಿಗೆ ಅವಕಾಶ ಇತ್ತು.

**ಶ್ರೀ ಆರ್.ವಿ. ವೆಂಕಟೇಶ್:–** ಖಂಡಿತ ಅದರ ಬಗ್ಗೆಯೂ ಕೇಳಿದೆ, ಅದರ ಬಗ್ಗೆ ಯಾವುದೇ ಸ್ಪಷ್ಟವಾದ ಉತ್ತರ ಇಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಆಯಿತು, ನಾನು ಹೇಳುತ್ತೇನೆ. ABIDE thinking ಏನಿತ್ತು ಕೆಲವೊಂದು ಸಂದರ್ಭದಲ್ಲಿ ABIDE ಮುಖಾಂತರವೇ ಆಗಿದೆ. ಕೆಲವು ಬಿಡಿಎ ಮೂಲಕ ಆಗಿದೆ. ಕೆಲವು ನೇರವಾಗಿ ಶಾಸಕರ ಕ್ಷೇತ್ರಗಳಿಗೆ ಹಣವನ್ನು ಕೊಟ್ಟಿರುವುದು ಇದೆ. ಆಗ ಮಹಾನಗರ ಪಾಲಿಕೆ ಇರಲಿಲ್ಲ ಮತ್ತು 2010ರಲ್ಲಿ ಮಹಾನಗರ ಪಾಲಿಕೆ ಬಂತು. ABIDE ನ ಕೆಲವು ಯೋಜನೆಗಳು ಬಿಡಿಎ ಮತ್ತು ಶಾಸಕರ ಅನುದಾನದ ಮುಖೇನ ಜಾರಿಗೆ ಬಂದಿದೆ. ಇತ್ತೀಚೆಗೆ ಒಂದು ಸಮಿತಿ ಮಾಡಿ

ಬೆಂಗಳೂರಿನ ಬಗ್ಗೆ ವರದಿ ಕೇಳಿದ್ದು, ಆ ಸಮಿತಿಯ ಪ್ರಿಲಿಮಿನರಿ ಹಾಗೂ 2ನೇ ವರದಿ ಬಂದಿದ್ದು, ಅಂತಿಮ ವರದಿ ಬರುವುದಕ್ಕಿಂತ ಮುಂಚೆ ಮಹಾನಗರ ಪಾಲಿಕೆಯ ಮೂರು ಜನ ಸದಸ್ಯರು ಹೈಕೋರ್ಟ್‌ನಲ್ಲಿ ರಿಟ್ ಅಪೀಲು ಹಾಕುತ್ತಾರೆ. ಎಲ್ಲೋ ಒಂದು ಕಡೆ ಬಿಬಿಎಂಪಿ ಚುನಾವಣೆಯನ್ನು ಮುಂದಕ್ಕೆ ಹಾಕುವ ಹುನ್ನಾರದ ಸೂಕ್ಷ್ಮತೆ ಅರಿತು ರಿಟ್ ಹಾಕುತ್ತಾರೆ. ಆಗ ಸರ್ಕಾರಕ್ಕೆ ಏಕ ಸದಸ್ಯ ಪೀಠವು ನೇರ ಹಾಗೂ ತೀಕ್ಷ್ಣವಾಗಿ ವಾರ್ನ್ ಮಾಡಿದ ನಂತರ ಬೇರೆ ಬೇರೆ ರೀತಿಯ ಬೆಳವಣಿಗೆಗಳು ರಾಜ್ಯ ಸರ್ಕಾರದಲ್ಲಿ ಪ್ರಾರಂಭವಾಯಿತು. ಮಹಾನಗರ ಪಾಲಿಕೆಯ ಕತ್ತನ್ನು ಹಿಸುಕುವ ಕೆಲಸ ರಾಜ್ಯ ಸರ್ಕಾರದಲ್ಲಿ ನಡೆಯುತ್ತಿದೆ ಎಂಬುದು ಉಚ್ಛ ನ್ಯಾಯಾಲಯದ ಬೇರೆ ಬೇರೆ argument ಸಂದರ್ಭದಲ್ಲಿ ಬಂದಿದೆ. ನೇರವಾಗಿ ಅವರು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಣಕಾಸಿನ ಕೊರತೆ ಇದೆ ಎಂದು ಹೇಳಿ, ಮಾನ್ಯ ಜಯಚಂದ್ರ ಹಾಗೂ ಮಾನ್ಯ ರಾಮಲಿಂಗಾರೆಡ್ಡಿಯವರು ಮಾತನಾಡುತ್ತಾ ರೂ. 9 ಸಾವಿರ ಕೋಟಿ ಪೆಂಡಿಂಗ್ ಇದೆ ಎಂದು ಹೇಳಿದರು. ಗುತ್ತಿಗೆದಾರರಿಗೆ ಕೊಡಬೇಕು, ಹಣಕಾಸಿನ ಕೊರತೆ ಇದೆ ಎಂದು ಹೇಳಿದರು. ಮಾನ್ಯ ಎಸ್.ಎಂ. ಕೃಷ್ಣರವರ ಅವಧಿಯಲ್ಲಿ ನಂಜುಂಡಪ್ಪ ಅಥವಾ ಇನ್ಯಾವುದೋ ವರದಿಯ ಅನುಷ್ಟಾನದ ಬಗ್ಗೆ ಬೆಂಗಳೂರಿಗೆ 2 ಪರ್ಸೆಂಟ್ ಸ್ಟ್ಯಾಂಪ್ ಡ್ಯೂಟಿ ಬರುತ್ತದೆ, ಮಾನ್ಯ ಡಿ.ಕೆ. ಶಿವಕುಮಾರ್‌ರವರು ಇಲ್ಲೆಲ್ಲೋ ಸದನದಲ್ಲಿ ಇದ್ದು, ಬೆಂಗಳೂರಿಗೆ ಅವರದೊಂದು ಕೊಡುಗೆ ಇದೆ.

(5–00 ಗಂಟೆ)

(ವೈಸ್ ಛೇರ್ಮನ್ ಶ್ರೀ ಬಸವರಾಜ ಹೊರಟ್ಟಿಯವರ ಉಪಸ್ಥಿತಿ)

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿಗೆ ಹಾಕುತ್ತಿದ್ದ ಬೆಟರ್‌ಮೆಂಟ್ ಚಾರ್ಜ್‌ಗಳನ್ನು 2003ನೇ ಇಸವಿಯಲ್ಲಿ ನಿಲ್ಲಿಸಲಾಯಿತು. ಇದು ಮಾನ್ಯ ಡಿ.ಕೆ. ಶಿವಕುಮಾರ್‌ರವರ ಕೊಡುಗೆಯಾಗಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಬೆಂಗಳೂರು ನಗರ ಅಡ್ಡದಿಡ್ಡಿಯಾಗಿ ಬೆಳೆಯುತ್ತಿದೆ, ಸಮನಾಗಿ ಬೆಳೆಯುತ್ತಿಲ್ಲ, ಅನಧಿಕೃತ ಕಟ್ಟಡ ನಿರ್ಮಾಣ ಪ್ರಾರಂಭವಾಗುತ್ತಿದೆ ಮತ್ತು ಪ್ಲಾನ್ ಮಂಜೂರಾತಿ ಪ್ರಾಧಿಕಾರದ ಹತೋಟಿಗೆ ಬರುತ್ತಿಲ್ಲ ಎನ್ನುವ ಹಿನ್ನೆಲೆಯಲ್ಲಿ ಎಲ್ಲ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುತ್ತಿದ್ದ ರೆವಿನ್ಯೂ ಪ್ಯಾಕೆಟ್ಸ್, ಸಿ.ಎಂ.ಸಿ. ಲಿಮಿಟ್ ಮತ್ತು ರೆವಿನ್ಯೂ ನಿವೇಶನಗಳಿಗೆ ವಿಧಿಸುತ್ತಿದ್ದ ಬೆಟರ್‌ಮೆಂಟ್ ಚಾರ್ಜ್‌ನ್ನು ನಿಲ್ಲಿಸಿ ಬಿಟ್ಟರು. ಇದರಿಂದಾಗಿ ಬಿ.ಬಿ.ಎಂ.ಪಿ.ಗೆ ಬರುತ್ತಿದ್ದ ಆದಾಯ ಕಡಿಮೆಯಾಯಿತು. ತದನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಕ್ರಮ ಸಕ್ರಮವನ್ನು ಜಾರಿಗೆ ತಂದು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಎಲ್ಲ ರೆವಿನ್ಯೂ ನಿವೇಶನಗಳಿಗೆ ಮತ್ತು ಬೇರೆ ಬೇರೆ ಭೂಮಿಗಳಿಗೆ ತೆರಿಗೆಯನ್ನು ಸಂಗ್ರಹ ಮಾಡಬೇಕು, ಅವರಿಗೆ ಬೆಟರ್‌ಮೆಂಟ್ ಚಾರ್ಜ್ ಹಾಕಬೇಕು ಎಂದು ತೀರ್ಮಾನ

ಮಾಡಲಾಯಿತು. ಮಹಾನಗರ ಪಾಲಿಕೆಗೆ ಯಾವುದೇ ರೀತಿಯ ತೆರಿಗೆಗಳನ್ನು ಕಟ್ಟದೇ, ಮಹಾನಗರ ಪಾಲಿಕೆಗೆ ಬೆಟರ್‌ಮೆಂಟ್ ಚಾರ್ಜ್ ಕಟ್ಟದೇ ಎಲ್ಲ ರೀತಿಯ ಅನುಕೂಲತೆಗಳನ್ನು ರೆವಿನ್ಯೂ ನಿವೇಶನದಾರರು ಪಡೆದುಕೊಳ್ಳುತ್ತಿದ್ದಾರೆ, ಇದು ಸರಿಯಲ್ಲ, ಇದರಿಂದ ಒಂದು ಕಡೆ ಸರ್ಕಾರಕ್ಕೆ, ಮತ್ತೊಂದು ಕಡೆ ಮಹಾನಗರ ಪಾಲಿಕೆಗೆ ನಷ್ಟವುಂಟಾಗುತ್ತದೆ ಎನ್ನುವ ದೃಷ್ಟಿಯಿಂದ ಅವರುಗಳನ್ನು ಸಹ ತೆರಿಗೆಯ ವ್ಯಾಪ್ತಿಗೆ ತರಬೇಕೆಂದು ಹೊರಟು ಎರಡೂ ಮನೆಗಳಲ್ಲಿ ವಿಧೇಯಕವನ್ನು ಮಂಡನೆ ಮಾಡಿ ಅಂಗೀಕಾರವನ್ನು ಪಡೆದುಕೊಂಡು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಾಗ, ಆ ಬಿಲ್ ಘನತೆವೆತ್ತ ರಾಜ್ಯಪಾಲರ ಬಳಿ ವರ್ಷಾನುಗಟ್ಟಲೆ ಪೆಂಡಿಂಗ್ ಉಳಿಯಿತು. ಒಂದು ಸಂತೋಷದ ಸಂಗತಿಯೆಂದರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಕ್ರಮ ಸಕ್ರಮವನ್ನು ಜಾರಿಗೆ ತರಲು ಮುಂದೆ ಬಂದಿದೆ. ಆದರೆ, ಅವತ್ತಿನ ದಿನ ನಗರಾಭಿವೃದ್ಧಿ ಸಚಿವರಾಗಿದ್ದ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಬೆಟರ್‌ಮೆಂಟ್ ಚಾರ್ಜ್‌ನ್ನು ನಿಲ್ಲಿಸದೇ ಹೋಗಿದ್ದರೆ, ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿತ್ತು. ಇದರ ಜೊತೆಗೆ ಸ್ಟ್ಯಾಂಪ್ ಡ್ಯೂಟಿ ಸಹ ನಿಂತು ಹೋಯಿತು. ಹಣಕಾಸಿನ ಜವಾಬ್ದಾರಿಯನ್ನು ಹೊತ್ತಿರುವ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ,. . . . .

**ಶ್ರೀ ರಾಮಲಿಂಗಾರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಯಾರೋ ಕೋರ್ಟಿಗೆ ಹೋದ ಕಾರಣ ಅದಕ್ಕೆ ಸ್ಟೇ ಬಂತು. ಅದರಿಂದ ನಿಲ್ಲಿಸಲಾಯಿತು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರು ಹೇಳಿದಂತೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, 38(ಸಿ)ಯನ್ನು ಜಾರಿಗೆ ತರಲಾಗಿತ್ತು. ಆದರೆ, ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ನಿಲ್ಲಿಸಲಾಯಿತು. ಮಾನ್ಯ ಸಿದ್ದರಾಮಯ್ಯನವರು ಆಗ ಉಪ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ 38(ಸಿ)ಯನ್ನು ಜಾರಿಗೆ ತಂದಿದ್ದರೆ, ಸಾವಿರಾರು ಕೋಟಿ ರೂಪಾಯಿಗಳು ಬಿ.ಬಿ.ಎಂ.ಪಿ.ಗೆ ಆದಾಯ ಬರುತ್ತಿತ್ತು. ಆದರೆ, ಅದನ್ನು ನಿಲ್ಲಿಸಿದ ಕಾರಣ ಬಿ.ಬಿ.ಎಂ.ಪಿ.ಗೆ ಹಣವೇ ಬರಲಿಲ್ಲ. ಮೂಡಲಪಾಳ್ಯ, ಕಾಮಾಕ್ಷಿಪಾಳ್ಯ ಮುಂತಾದ ಪ್ರದೇಶಗಳಿಗೆ ಎಲ್ಲ ರೀತಿಯ ಮೂಲಸೌಲಭ್ಯಗಳನ್ನು ಕೊಡಲಾಗುತ್ತಿದೆ. ಅಲ್ಲಿನ ಜನರು ತೆರಿಗೆ ಕಟ್ಟುವುದಕ್ಕೆ ಸಿದ್ಧರಿದ್ದಾರೆ. ಆದರೆ, ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿಲ್ಲ. ನ್ಯಾಯಾಲಯದ ಆದೇಶವಿದೆ ಎಂದು ಹೇಳುತ್ತಾರೆ. ಇದಕ್ಕೆ ಏನು ಮಾಡುವುದು? ಏನಾದರೊಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬಿ.ಬಿ.ಎಂ.ಪಿ.ಗೆ ಯಾವುದೇ ರೀತಿಯ ಅಧಿಕಾರವಿಲ್ಲ. **'ಕೋಳಿ ಕೇಳಿ ಮೆಣಸು ಅರೆಯುವಂತೆ'** ಎನ್ನುವ ಗಾದೆ ಮಾತಿನಂತೆ ಎಲ್ಲದಕ್ಕೂ ಸರ್ಕಾರವನ್ನೇ ಕೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ದೊಡ್ಡ ಜಾಹಿರಾತು ಫಲಕಗಳು ಮತ್ತು ಹೋರ್ಡಿಂಗ್ಸ್‌ಗಳ ಬಗ್ಗೆ ಮಾನ್ಯ ಸಾರಿಗೆ ಸಚಿವರು ಮಾತನಾಡಿದ್ದಾರೆ. ಜನವರಿ ಒಂದನೇ ತಾರೀಖಿನಂದು 'ಬೆಂಗಳೂರಿನಲ್ಲಿ ಇರುವ ಅನಧಿಕೃತವಾದ ಹೋರ್ಡಿಂಗ್ಸ್‌ಗಳನ್ನು ತೆಗೆಯಬೇಕಾಗಿದೆ' ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಕೆಲವು ಹೋರ್ಡಿಂಗ್ಸ್‌ಗೆ ಹೈಕೋರ್ಟಿನಿಂದ ಸ್ಟೇ ತರುತ್ತಾರೆ. ಒಂದು ಹೋರ್ಡಿಂಗ್ಸ್‌ಗೆ ಹತ್ತು ಓ.ಎಸ್. ನಂಬರ್ ಹಾಕಿಕೊಂಡು ಹತ್ತು ಹೋರ್ಡಿಂಗ್ಸ್‌ಗಳನ್ನು ಉಳಿಸಿಕೊಳ್ಳುತ್ತಾರೆ. ಈ ಕ್ರಮವನ್ನು ತೆಗೆಯಬೇಕೆಂದಾಗ, ಸರ್ಕಾರ ಈ ವಿಚಾರವನ್ನು ಪೆಂಡಿಂಗ್ ಇಟ್ಟುಕೊಂಡು ಕುಳಿತಿದೆ. ವಿಧಾನ ಪರಿಷತ್ತಿನಲ್ಲಿ ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಅನಧಿಕೃತ ಹೋರ್ಡಿಂಗ್ಸ್ ತೆಗೆಯುವುದಕ್ಕೆ ಸರ್ಕಾರದ ಅನುಮತಿ ಬೇಕಾಗಿಲ್ಲ. ಬಿ.ಬಿ.ಎಂ.ಪಿ.ಯವರೇ ತೀರ್ಮಾನ ತೆಗೆದುಕೊಳ್ಳಬಹುದು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಇಷ್ಟೇ ಅಳತೆಯ ಹೋರ್ಡಿಂಗ್ಸ್ ಹಾಕಬೇಕೆಂದು ಒಂದು ರೂಲ್ ಇದೆ. ಅದನ್ನು ಮೀರಿ ಹೋರ್ಡಿಂಗ್ಸ್ ಹಾಕಿದ್ದಾರೆ. ಅವೆಲ್ಲವೂ ಅಧಿಕೃತವೆಂದು ಹೇಳುತ್ತಿದ್ದಾರೆ. ಅವುಗಳನ್ನು ತೆರವುಗೊಳಿಸುವುದಕ್ಕೆ ಸರ್ಕಾರದ ಅನುಮತಿಯನ್ನು ಕೇಳಿದ್ದಾರೆ. ಸರ್ಕಾರ ಅನುಮತಿಯನ್ನು ಕೊಡಬೇಕಾಗಿದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಯಾವುದು ಅನಧಿಕೃತ ಹೋರ್ಡಿಂಗ್ಸ್ ಇವೆ. ಅವುಗಳನ್ನೆಲ್ಲ ಬಿ.ಬಿ.ಎಂ.ಪಿ.ಯವರೇ ತೆಗೆದು ಹಾಕಬಹುದು ಅದಕ್ಕೆ ಸರ್ಕಾರದ ಅನುಮತಿ ಬೇಕಾಗಿಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಇಂತಹ ಹೋರ್ಡಿಂಗ್ಸ್ ತೆರವುಗೊಳಿಸುವುದಕ್ಕೆ ಮತ್ತು ಕೆಲವೊಂದು ವಿಚಾರಗಳಲ್ಲಿ ಬಿ.ಬಿ.ಎಂ.ಪಿ.ಯವರಿಗೆ ಯಾವುದೇ ರೀತಿಯ ಅಧಿಕಾರವಿಲ್ಲ. ಸರ್ಕಾರದ ಮರ್ಜಿಯಲ್ಲಿಯೇ ಕೆಲಸ ಮಾಡಬೇಕಾಗಿದೆ.

**ವೈಸ್ ಛೇರ್ಮನ್:–** ಹೋರ್ಡಿಂಗ್ಸ್ ತೆರವುಗೊಳಿಸುವ ಅಧಿಕಾರ ಬಿ.ಬಿ.ಎಂ.ಪಿ.ಗೆ ಇರುವುದರಿಂದ ಅವರೇ ಅದನ್ನು ತೆಗೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ನಾನು 'ಈ ವರ್ಷ ಸ್ಟ್ಯಾಂಪ್ ಡ್ಯೂಟಿ ಎಷ್ಟು ಸಂಗ್ರಹವಾಗಿದೆ, ಜಿಲ್ಲಾವಾರು ಮಾಹಿತಿ ಕೊಡಿ' ಎಂದು ಒಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಮಾನ್ಯ ಕಂದಾಯ ಸಚಿವರು 'ಇಡೀ ರಾಜ್ಯದಲ್ಲಿ 6,600 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯೂಟಿ ಸಂಗ್ರಹವಾಗಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರು ಮಹಾನಗರದಲ್ಲಿ ಎಷ್ಟು ಸ್ಟ್ಯಾಂಪ್ ಡ್ಯೂಟಿ ಸಂಗ್ರಹವಾಗಿದೆ ಎನ್ನುವ ಪ್ರಶ್ನೆಗೆ '4000 ಕೋಟಿ ರೂಪಾಯಿಗಳು ಸಂಗ್ರಹವಾಗಿದೆ'

ಎನ್ನುವ ಉತ್ತರವನ್ನು ನೀಡಿದ್ದಾರೆ. ಕೇವಲ ಬೆಂಗಳೂರು ನಗರ ಒಂದರಲ್ಲಿಯೇ 4000 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯಾಟಿ ಸಂಗ್ರಹವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಇಷ್ಟು ಚೆನ್ನಾಗಿರುವುದರಿಂದ ಜನರು ಬಂದು ಇಲ್ಲಿ ಮನೆ ಮತ್ತು ಸೈಟ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಬಿಟ್ಟು ಬೆಂಗಳೂರು 'ಕಸದ ನಗರ' 'ನಗರದ ವಾತಾವರಣ ಕೆಟ್ಟು ಹೋಗಿದೆ' ಎಂದು ನಾವೇ ಹೇಳಿಬಿಟ್ಟರೇ ಹೇಗೆ? ಬೆಂಗಳೂರು ನಗರ ಚೆನ್ನಾಗಿಲ್ಲದಿದ್ದರೆ ಜನರು ಸುಮ್ಮನೆ ಬಂದು ಇಲ್ಲಿ ಮನೆ, ನಿವೇಶನಗಳನ್ನು ತೆಗೆದುಕೊಂಡು ವಾಸ ಮಾಡುತ್ತಾರೆಯೇ? ಬೆಂಗಳೂರು ನಗರ ಒಂದರಲ್ಲಿಯೇ 4000 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯೂಟಿ ಸಂಗ್ರಹವಾಗಿದೆಯೆಂದರೆ, ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಬೆಂಗಳೂರಿನಲ್ಲಿ ಬಂಡವಾಳದ ರೂಪದಲ್ಲಿ ಹೂಡಿಕೆ ಮಾಡಿರಬಹುದು ಎನ್ನುವುದನ್ನು ತಾವೇ ಊಹೆ ಮಾಡಬೇಕಾಗುತ್ತದೆ. ಇಷ್ಟು ಪ್ರಮಾಣದಲ್ಲಿ ಸ್ಟ್ಯಾಂಪ್ ಡ್ಯಾಟಿ ಸಂಗ್ರಹವಾಗಿದೆ ಎಂದರೆ ಬೆಂಗಳೂರು ನಗರ ಚೆನ್ನಾಗಿದೆಯೆಂದು ಜನರು ಇಲ್ಲಿಗೆ ಬರುತ್ತಿದ್ದಾರೆ. ಬೇರೆ ಕಡೆ ಅಂದರೆ, ದೆಹಲಿ ಮತ್ತು ಮುಂಬೈಗಳಲ್ಲಿ ಜನರ ಜೀವನಕ್ಕೆ ಮತ್ತು ಜೀವಕ್ಕೆ ರಕ್ಷಣೆ ಇಲ್ಲ. ಬೆಂಗಳೂರು ಸುರಕ್ಷಿತ ನಗರ ಎಂದು ಜನರು ಇಲ್ಲಿಗೆ ಬರುತ್ತಿದ್ದಾರೆ. ಸ್ಥಿತಿ ಹೀಗಿರುವಾಗ ನಾವೇ ಯಾಕೆ ಬೆಂಗಳೂರು ನಗರದ ಬಗ್ಗೆ ಕೆಟ್ಟದಾಗಿ ಮಾತನಾಡಬೇಕು? ನಮ್ಮ ನಗರದ ಬಗ್ಗೆ ನಾವೇ ಅಪಪ್ರಚಾರ ಮಾಡುವುದು ಎಷ್ಟರಮಟ್ಟಿಗೆ ಸರಿ? ಮಾನ್ಯ ಸೋಮಣ್ಣನವರು ಮಾತನಾಡುತ್ತಾ, ಕಟ್ಟಡಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು.

**ಶ್ರೀ ಕೆ. ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ನರೇಂದ್ರ ಮೋದಿಯವರು ಭಾರತವನ್ನು ಹಗರಣಗಳ ದೇಶ ಎಂದು ಹೇಳಿದರು. ಇದರಿಂದ ನಮಗೆ ಎಷ್ಟು ನಾಚಿಕೆಯಾಗಬಹುದು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಅವರು 'ಕಳೆದ ಹತ್ತು ವರ್ಷಗಳಲ್ಲಿ ಭಾರತ ದೇಶ ಹಗರಣಗಳ ದೇಶವಾಗಿದೆ' ಎಂದು ಹೇಳಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಕಳೆದ ಹತ್ತು ವರ್ಷಗಳಲ್ಲಿ ಭಾರತದ ಆರ್ಥಿಕತೆ ಬಲಯುತವಾಗಿದೆ. ಅದು ಅವರಿಗೆ ಗೊತ್ತಿದೆಯೇ? ಯುರೋಪಿಯನ್ ರಾಷ್ಟ್ರಗಳನ್ನು ಬಿಟ್ಟರೆ, ಅಭಿವೃದ್ಧಿ ಹೊಂದುತ್ತಿರುವ ಎರಡು ರಾಷ್ಟ್ರಗಳು ವಿಶ್ವದಲ್ಲಿಯೇ ಆರ್ಥಿಕವಾಗಿ ಸಬಲೀಕರಣಗೊಳ್ಳುತ್ತವೆ ಎಂದು ಹೇಳಿದ್ದರು. ಚೈನಾ ಮತ್ತು ಭಾರತ ದೇಶಗಳು ಆ ಎರಡು ರಾಷ್ಟ್ರಗಳಾಗಿವೆ. ಸುಮ್ಮನೆ ಮಾತನಾಡುವುದಕ್ಕೆ ಬರುತ್ತದೆಂದು ಅವರು ಏನೇನೋ ಮಾತನಾಡುತ್ತಾರೆ. ಮಾನ್ಯ ಅಶ್ವತ ನಾರಾಯಣರವರು ಮಾತನಾಡುತ್ತಾ, ಬೆಂಗಳೂರು ಸುರಕ್ಷಿತ ನಗರವಾಗಿದೆ ಅದಕ್ಕಾಗಿ ಜನರು ಇಲ್ಲಿಗೆ ಬರುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದರು. ಆದರೆ, ಮತ್ತೊಂದು ಕಡೆ ಬೆಂಗಳೂರು ಪೊಲೀಸ್ ಅಧಿಕಾರಿಗಳನ್ನು ಬೈಯುತ್ತಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಉತ್ತರ ಕರ್ನಾಟಕದವರು. ಅವರು ಬೆಂಗಳೂರು ನಗರದಲ್ಲಿ ಮನೆ ಮಾಡಿಕೊಂಡಿದ್ದಾರೆಂದರೆ ನಮಗೂ ಬಹಳಷ್ಟು ಖುಷಿಯಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಮನೆ ಇಲ್ಲಿ ಇಲ್ಲ. ನಾನು ಬೆಂಗಳೂರಿಗೆ ಬಂದಾಗ ನನ್ನ ಮಗನ ಮನೆಯಲ್ಲಿರುತ್ತೇನೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಅವರು ಬೆಂಗಳೂರು ನಗರದಲ್ಲಿಯೇ ವಾಸವಿದ್ದರೆ ನಮಗೆ ಇನ್ನೂ ಹೆಚ್ಚಿನ ಸಂತೋಷವಾಗುತ್ತದೆ. ಬೆಂಗಳೂರು ನಗರವನ್ನು ಪ್ರೀತಿಸಲಿ, ಅದನ್ನು ಬಿಟ್ಟು ಸುಮ್ಮನೆ ಟೀಕೆ ಮಾಡುವುದು ಬೇಡವೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನನಗೆ ಎಷ್ಟು ಪ್ರೀತಿ ಎನ್ನುವುದನ್ನು ನಾನು ಮಾತನಾಡುವ ಸಂದರ್ಭದಲ್ಲಿ ಹೇಳುತ್ತೇನೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ವರ್ಷ ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಿದ್ದು, ಲೋಕಾಯುಕ್ತದವರಿಂದ ಹಿಡಿದು ಹೈಕೋರ್ಟಿನವರೆಗೆ ಎಲ್ಲರೂ **"**ರಸ್ತೆಗಳು ಗುಂಡಿ ಬಿದ್ದು, ಹೊಳ್ಳ ಮತ್ತು ಹಳ್ಳಗಳಾಗಿವೆ**"** ಎಂದು ಬೆಂಗಳೂರು ಮಹಾನಗರ ಪಾಲಿಕೆಯ ಬಗ್ಗೆ ಟೀಕೆ ಮಾಡಿದರು. ಆಗ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್‌ರವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ನಂತರ, ಮಾನ್ಯ ಮುಖ್ಯಮಂತ್ರಿಗಳು ಮಳೆಗಾಲ ಪ್ರಾರಂಭವಾಗುವುದರೊಳಗೆ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚುವುದಕ್ಕೆ 1000 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಆ ಬಗ್ಗೆ ಮಾನ್ಯ ಸಾರಿಗೆ ಸಚಿವರು ಹೇಳಿದ್ದರು. ಆದರೆ, ಆ ದುಡ್ಡು ಬಿ.ಬಿ.ಎಂ.ಪಿ.ಗೆ ಹೋಗಲೇ ಇಲ್ಲ. CREDAI Bengaluru ಗೆ ಹೋಯಿತು. CREDAI ನಲ್ಲಿ ಬೇಕುಬೇಕಾದರೂ ಕೆಲಸ ಮಾಡಲು ಎನ್.ಓ.ಸಿ. ತೆಗೆದುಕೊಂಡು. ಯಾವ ಗುಂಡಿಗಳನ್ನು ಮುಚ್ಚುವುದಕ್ಕೆ ಹಣ ವೆಚ್ಚ ಮಾಡಬೇಕೆಂದು ಬಿ.ಬಿ.ಎಂ.ಪಿ.ಯವರು ತೀರ್ಮಾನ ಮಾಡಬೇಕಾಗಿತ್ತು.

**ಶ್ರೀ ರಾಮಲಿಂಗಾರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಮೇಯರ್‌ರವರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದು ನಿಜ, 1000 ಕೋಟಿ ರೂಪಾಯಿಗಳಲ್ಲ, 500 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು 300 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದರು. ಆ ಹಣ ನಗರೋತ್ಥಾನಕ್ಕೆ ಹೋಗಿದೆಯೇ ಹೊರತು CREDAI ಗೆ ಹೋಗಿಲ್ಲ. ಪ್ರಮುಖ ರಸ್ತೆಗಳು, ಮೇಲ್ಸೆತುವೆ, ಅಂಡರ್‌ಪಾಸ್, ಸಿಗ್ನಲ್ ಫ್ರೀ ಕಾರಿಡಾರ್ ಇವುಗಳ ನಿರ್ಮಾಣಕ್ಕೆ ಹೋಗಬೇಕಾಗಿದ್ದ ಹಣ ಅದು. ಅದಕ್ಕಾಗಿ 180 ಕೋಟಿ ರೂಪಾಯಿಗಳನ್ನು ನಗರೋತ್ಥಾನಕ್ಕೆ ಕೊಡಲಾಯಿತು. ಕಳೆದ 6 ತಿಂಗಳುಗಳಿಂದ ಕಸ ಗುಡಿಸುವವರಿಗೆ

ದುಡ್ಡು ಕೊಟ್ಟಿರಲಿಲ್ಲ. ಮಾನ್ಯ ಮೇಯರ್‌ರವರು ನನ್ನ ಅನುಮತಿಯನ್ನು ತೆಗೆದುಕೊಂಡು, ನಾನು ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉಳಿದ 120 ಕೋಟಿ ರೂಪಾಯಿಗಳನ್ನು ಅವರಿಗೆ ನೀಡಲಾಯಿತು. ಕಳೆದ 6 ತಿಂಗಳುಗಳಿಂದ ಕಸ ಗುಡಿಸುವವರಿಗೆ ಹಣಕೊಟ್ಟಿಲ್ಲ, ಕಳೆದ 5 ತಿಂಗಳ ಕಸ ಬಾಕಿ ಇದೆ. ಕಳೆದ ಒಂದೂವರೆ ವರ್ಷದಿಂದ ಬೀದಿ ದೀಪಗಳ ನಿರ್ವಹಣೆಗೆ ಹಣವನ್ನು ಕೊಟ್ಟಿಲ್ಲ, ಪಾರ್ಕ್‌ಗಳ ನಿರ್ವಹಣೆಗೆ ಹಣವನ್ನು ಕೊಟ್ಟಿಲ್ಲ ಮತ್ತು ಎರಡು ವರ್ಷಗಳಿಂದ ಗುತ್ತಿಗೆದಾರರ ಬಿಲ್ ಬಾಕಿ ಇದೆ. ಆದ್ದರಿಂದ ಒಂದು ವಿಚಾರವನ್ನು ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿರುವುದು 1000 ಕೋಟಿ ರೂಪಾಯಿಗಳಲ್ಲ, 300 ಕೋಟಿ ರೂಪಾಯಿಗಳು ಅದರಲ್ಲಿ 180 ಕೋಟಿ ರೂಪಾಯಿಗಳನ್ನು ನಗರೋತ್ಥಾನಕ್ಕೆ ನೀಡಲಾಗಿದೆ ಉಳಿದ 120 ಕೋಟಿ ರೂಪಾಯಿಗಳನ್ನು ಕಸ ವಿಲೇವಾರಿಗೆ ನೀಡಲಾಗಿದೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಾಮಲಿಂಗಾರೆಡ್ಡಿಯವರು ನಗರದ ಉಸ್ತುವಾರಿ ಸಚಿವರಾಗಿದ್ದಾರೆ. ಆದ್ದರಿಂದ ಇದನ್ನೆಲ್ಲ ಹೇಳುತ್ತಿದ್ದಾರೆ. ನಾಲ್ಕೈದು ಜನ ಕುಳಿತುಕೊಂಡು CREDAI ಗೆ ಬರಬೇಕಾದ ಎಲ್.ಓ.ಸಿ.ಯನ್ನು ತೀರ್ಮಾನ ಮಾಡಿದರು.

**ಶ್ರೀ ರಾಮಲಿಂಗಾರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, CREDAIಗೆ ಹಣ ಕೊಟ್ಟಿಲ್ಲ, 180 ಕೋಟಿ ರೂಪಾಯಿಗಳನ್ನು ಪ್ರಮುಖ ರಸ್ತೆಗಳು, ಮೇಲ್ಸೆತುವೆ, ಅಂಡರ್‌ಪಾಸ್, ಸಿಗ್ನಲ್ ಫ್ರೀ ಕಾರಿಡಾರ್ ಇವುಗಳಿಗೆ ನೀಡಲಾಗಿದೆ. ಇದಕ್ಕೂ CREDAI ಗೂ ಸಂಬಂಧವಿಲ್ಲ.

**ವೈಸ್ ಛೇರ್ಮನ್:–** ಸನ್ಮಾನ್ಯ ಮಂತ್ರಿಗಳೇ, ಉತ್ತರ ಹೇಳುವ ಸಂದರ್ಭದಲ್ಲಿ ತಾವು ಈ ಎಲ್ಲ ಮಾಹಿತಿಯನ್ನು ನೀಡಿ. ಈಗ ಕುಳಿತುಕೊಳ್ಳಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರು ಮಾತನಾಡುತ್ತಾ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಬಿ.ಬಿ.ಎಂ.ಪಿ.ಯವರು 2001ರಿಂದ ಮಾಡಿರುವ ಸಾಲಕ್ಕೆ ಬಡ್ಡಿ ಪಾವತಿ ಮಾಡುವುದಕ್ಕೆ ಸಾಧ್ಯವಾಗದೇ ಟೌನ್‌ಹಾಲ್ ಅಥವಾ ಕೆ.ಆರ್. ಮಾರ್ಕೆಟ್‌ನ್ನು ಬ್ಯಾಂಕ್‌ನಲ್ಲಿ ಅಡವಿಟ್ಟು ಸಾಲ ತೆಗೆದುಕೊಳ್ಳುವುದಕ್ಕೆ ಹೋದಂತಹ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಬುದ್ಧಿಜೀವಿಗಳು 'ಪುರಾತನ ಇತಿಹಾಸ ಇರುವ ಟೌನ್‌ಹಾಲ್‌ನ್ನು ಅಡವಿಡುತ್ತಿದ್ದಾರೆ' ಎಂದು ಸಾಕಷ್ಟು ಟೀಕೆ ಮಾಡಿದರು.

**ಶ್ರೀ ಹೆಚ್.ಎಂ. ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತು ಮಾನ್ಯ ಸದಸ್ಯರು, ಬೆಂಗಳೂರು ಸುರಕ್ಷಿತ ನಗರ ಹಾಗೆ ಹೀಗೆ ಎಂದು ಮಾತನಾಡಿದರು. ನಾವು ಯಾವುದನ್ನು ಅಡವಿಟ್ಟಿಲ್ಲ. ಅವರುಗಳು ಅಡವಿಟ್ಟಿರುವುದರ ಬಗ್ಗೆ ವಿವರವನ್ನು ಹೇಳಬೇಕಾಗುತ್ತದೆ. ಕೆಂಪೇಗೌಡರ ಹೆಸರನ್ನು ಹೇಳುವ ಇವರು ಕೆಂಪೇಗೌಡ ಮ್ಯೂಸಿಯಂನ್ನು ಅಡವಿಟ್ಟಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** 2001ರಲ್ಲಿ ಮಾಡಿದ ಸಾಲದ ಬಡ್ಡಿಯನ್ನು ಕಟ್ಟುವುದಕ್ಕಾಗದೇ, ಆ ಬಡ್ಡಿಯನ್ನು ಕಟ್ಟುವುದಕ್ಕೋಸ್ಕರ ಹಣವನ್ನು ತೆಗೆದುಕೊಂಡಿದ್ದು, ಬಡ್ಡಿಗೋಸ್ಕರ ತೆಗೆದುಕೊಂಡು ಹೋಗಿ ಇಟ್ಟಿದ್ದು, ಬೇರೆಯಾವುದಕ್ಕೂ ಅಲ್ಲ ಎಂಬುದನ್ನು ಇವರು ತಿಳಿದುಕೊಳ್ಳಬೇಕು. ಇವರ ಅವಧಿಯಲ್ಲಿ ಆಸ್ತಿಯನ್ನು ಮಾರಿದರು. ಇವರು ಮಾಡಿದಂಥ ಸಾಲಕ್ಕೆ ಬಡ್ಡಿಯನ್ನು ಕಟ್ಟುವುದಕ್ಕೆ ಹೋಗಿದ್ದಕ್ಕೆ ಬಿಬಿಎಂಪಿಟೀಕೆಗೆ ಒಳಪಟ್ಟಿತು. ಇನ್ನೊಂದು ಬಹಳ ಪ್ರಮುಖವಾದ ವಿಚಾರವೆಂದರೆ, ಇವರ ಅವಧಿಯಲ್ಲಿ ಮಾರುಕಟ್ಟೆ ಸಮಿತಿಯಲ್ಲಿ ತೀರ್ಮಾನ ಮಾಡಿ ಮಡಿವಾಳ ಮಾರ್ಕೆಟ್ ಅನ್ನು ಮಾರಿಬಿಡುತ್ತದೆ, ಕೌನ್ಸಿಲ್ ಮೀಟಿಂಗ್‍ಗೆ ಈ ವಿಚಾರವನ್ನುತರದೇ ಇವರು ಮಡಿವಾಳ ಮಾರ್ಕೆಟ್‍ನ್ನು ಮಾರಿಬಿಡುತ್ತಾರೆ. ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಅವರಕ್ಷೇತ್ರದ ಬಗ್ಗೆ ಚೆನ್ನಾಗಿ ಗೊತ್ತಿದೆ. ಇಂತಹವರು ನಮ್ಮ ಬಗ್ಗೆ ಮಾತನಾಡುತ್ತಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಅದನ್ನು ಮಾರಿದ್ದಲ್ಲ. ವರ್ಷಕ್ಕೆ ಇಷ್ಟು ಎಂದು ನಿಗಧಿಗೊಳಿಸಿ ಗುತ್ತಿಗೆಆಧಾರದ ಮೇಲೆ ಕೊಟ್ಟಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಇವರು ಮುಖ್ಯಮಂತ್ರಿಗಳಿಗೆ ಹಾದಿಯನ್ನು ತಪ್ಪಿಸುತ್ತಿದ್ದಾರೆ. ಅವರಿಗೆ ಪಾಪ ಇದರ ಒಳಹೊರಗು ಗೊತ್ತಿಲ್ಲ. ಇದರಲ್ಲಿ ಇಷ್ಟೆಲ್ಲಾ ಹುಳುಕಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಶ್ರೀ ಎಸ್.ಎಂ. ಕೃಷ್ಣರವರ ಕಾಲದಿಂದ ಸಾಲ ಇತ್ತ ಎಂಬುದು ಅವರಿಗೆ ಗೊತ್ತಿಲ್ಲ. ದಯವಿಟ್ಟು ಇವರು ಅವುಗಳನ್ನೆಲ್ಲಾ ಹೇಳಬೇಕಾಗುತ್ತದೆ. ಎಸ್.ಎಂ. ಕೃಷ್ಣರವರ ಕಾಲದಿಂದ ಎಷ್ಟೆಷ್ಟು ಸಾಲವನ್ನು ಮಾಡಿದರು...

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಎಸ್.ಎಂ. ಕೃಷ್ಣರವರು 1999 ರಿಂದ 2004 ರವರೆವಿಗೂ ಮುಖ್ಯಮಂತ್ರಿಗಳಾಗಿದ್ದರು. ಆಗ ಮಹಾನಗರ ಪಾಲಿಕೆಯಲ್ಲಿ ಅಕೌಂಟ್ ಬೇಸ್ಡ್ ಸಿಸ್ಟಂ ಇತ್ತು. ಆಗ ನಮ್ಮ ಬಳಿ ಎಷ್ಟು ಹಣವಿರುತ್ತದೆಯೋ ಅಷ್ಟೇ ಹಣವನ್ನು ಖರ್ಚು ಮಾಡಬೇಕೆಂದು ಇತ್ತು. 2005ನೇ ಇಸವಿಯ ನಂತರ ಅವ್ಯವಸ್ಥೆ ಆಯಿತು. ಎಸ್.ಎಂ. ಕೃಷ್ಣರವರ ಅವಧಿಯಲ್ಲಿ ಚೆನ್ನಾಗಿತ್ತು.

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಅವರು ಯಾವುದೋ ಒಂದು ವಿಚಾರವನ್ನು ಹೇಳುತ್ತಿದ್ದಾರೆ. ಇವರು ಮಡಿವಾಳ ಮಾರ್ಕೆಟ್‌ನ್ನು ಮಾರಿಬಿಟ್ಟರು ಎಂದರೆ ಎಲ್ಲಿ ಮಾರಿದರು, ಯಾರಿಗೆ ಮಾರಿದರು, ಎಷ್ಟು ಹಣಕ್ಕೆ ಮಾರಿದರು? ಈ ರೀತಿ ಆಪಾದನೆಯನ್ನು ಮಾಡುವುದು ಸಮಂಜಸವಲ್ಲ, ದಯಮಾಡಿ ಅವರು substantiate ಮಾಡಬೇಕು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ತಮ್ಮ ಮುಖೇನ ಈ ವಿವರಗಳನ್ನು ಮಾನ್ಯ ಉಗ್ರಪ್ಪನವರಿಗೆ ಕಳುಹಿಸಿಕೊಡುತ್ತೇನೆ. ನಮ್ಮ ಬಳಿ ಇರುವ ದಾಖಲೆಗಳನ್ನು ಕೊಡುತ್ತೇವೆ, ಅವರದನ್ನು ನೋಡಲಿ.

**ವೈಸ್ ಛೇರ್ಮನ್:–** ಆಯಿತು ಕಳುಹಿಸಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಸಚಿವರಾದ ಮಾನ್ಯ ರಾಮಲಿಂಗಾರೆಡ್ಡಿಯವರ ಮೇಲೆ ಚಾರ್ಜ್ ಮಾಡಿದರೆ ಹೇಗೆ?

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಸರ್ಕಾರ ಆಡಳಿತ ನಡೆಸುವಂತಹ ಸಂದರ್ಭದಲ್ಲಿ ಇವೆಲ್ಲವೂ ಸಹಜವಾಗಿರುತ್ತದೆ. ಕೆಲವೊಂದು ಆಸ್ತಿಗೆ ನಾವು Joint Venture ಕೊಟ್ಟಿದ್ದೇವೆ ಎಂದು ಮಾನ್ಯ ರಾಮಲಿಂಗಾರೆಡ್ಡಿಯವರು ಸ್ಪಷ್ಟೀಕರಣವನ್ನು ಕೊಟ್ಟರು. ಒಂದು ರೂಪಾಯಿ ಬಾಡಿಗೆ, ಹತ್ತು ರೂಪಾಯಿ ಬಾಡಿಗೆ ಈ ತರಹ ಇಟ್ಟುಕೊಳ್ಳುವ ಬದಲು ಅಂತಹ ಆಸ್ತಿಗಳನ್ನು ಮಾರಾಟ ಮಾಡುವುದೇ ಒಳ್ಳೆಯದು ಎನ್ನುವ ನಿರ್ಧಾರಕ್ಕೆ ಬಂದರು. ಟೌನ್‌ಹಾಲ್‌ನ್ನು ಒಂದು ಸಾರಿ ಬಾಡಿಗೆಗೆ ಕೊಟ್ಟರೆ 500 ರೂಪಾಯಿ, 1,000 ರೂಪಾಯಿ ಅಥವಾ 2,000 ರೂಪಾಯಿ ಬಾಡಿಗೆ ಬರುತ್ತದೆ. ಅಂತಹ ಆಸ್ತಿಯನ್ನು ನಾವು ಮಾರಾಟ ಮಾಡುವುದಕ್ಕಾಗುತ್ತದೆಯೇ? ಟೌನ್ ಹಾಲ್‌ಗೆ ಸುಮಾರು 10 ರಿಂದ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಿ ನೊವೇಟ್ ಮಾಡಿದ್ದೇವೆ. ಬೆಂಗಳೂರಿಗೆ ಗೌರವವನ್ನು ತರತಕ್ಕಂಥ ಕೆಲವು ಪ್ರಸಿದ್ಧವಾದ ಸ್ಥಳಗಳಿವೆ. ಆದರೆ ಅದರಲ್ಲೇನು ಆದಾಯವಿಲ್ಲವೆಂದು ನಾವು ಅಂತಹ ಆಸ್ತಿಯನ್ನು ಮಾರಾಟ ಮಾಡುವುದಕ್ಕಾಗುತ್ತದೆಯೇ? ನಾನು ಒಂದು ಮಾತನ್ನು ಹೇಳುತ್ತೇನೆ. ಬೆಂಗಳೂರು ನಿರ್ಮಾಣ ಮಾಡಿದಂಥ ಸಂದರ್ಭದಲ್ಲಿ ಇತ್ತೀಚೆಗೆ ಯಾರೋ ಒಬ್ಬರು ನನ್ನನ್ನು ಕರೆದು ಒಂದು ಮಾಹಿತಿಯನ್ನು ನೀಡಿದರು. ಬೆಂಗಳೂರಿನಲ್ಲಿ ಜಕ್ಕರಾಯನ ಕೆರೆ ಇದೆಯಲ್ಲಾ, ಇದು ಕೃಷ್ಣದೇವರಾಯನ ಆಡಳಿತದ ನಂತರ ಅಚ್ಯುತರಾಯರು ಆಡಳಿತಕ್ಕೆ ಬಂದರು. ಅವರ ಅಳಿಯ ಜಕ್ಕರಾಯರು. ಜಕ್ಕರಾಯರು ಮಾತನಾಡಿ ಈ ಒಂದು ಬೆಂದಕಾಳೂರನ್ನು ಅಭಿವೃದ್ಧಿ ಪಡಿಸಿ ಎಂದು ಅಚ್ಯುತರಾಯರ ಕಡೆಯಿಂದ ಕೆಂಪೇಗೌಡರಿಗೆ ದುಡ್ಡನ್ನು ಕೊಡಿಸಿದರಂತೆ. ಹಾಗಾಗಿ ಜಕ್ಕರಾಯರು ತೀರಿಕೊಂಡ ನಂತರ ಕೆಂಪೇಗೌಡರು ಅವರ ಹೆಸರಿನಲ್ಲಿ ಒಂದು ಕೆರೆಯನ್ನು ನಿರ್ಮಾಣ ಮಾಡಿಸಿದ್ದಾರೆ. ಈ ರೀತಿ ಇತಿಹಾಸ ಇರತಕ್ಕಂಥ ಬೆಂಗಳೂರಿನ ಬಗ್ಗೆ ಎಲ್ಲೋ ಒಂದು ಕಡೆ ನಾವು

ಒಂದು ರೀತಿ ಹಗುರವಾಗಿ ಮಾತನಾಡತಕ್ಕಂಥಾದ್ದು, ಇನ್ನೊಂದು ಕಡೆ ನಾವೇ ಚುನಾಯಿತ ಪ್ರತಿನಿದಿಗಳ ಬಗ್ಗೆ ಕೆಟ್ಟದಾಗಿ ಮಾತನಾಡತಕ್ಕದ್ದು ಸರಿಯಲ್ಲ ಎನ್ನತಕ್ಕಂಥಾದ್ದು ನನ್ನಒಂದು ಭಾವನೆಯಾಗಿದೆ. ನಾವುಗಳೆಲ್ಲರೂ ಬೆಂಗಳೂರಿನ ಬಗ್ಗೆ ಕಳಕಳಿಯನ್ನಿಟ್ಟುಕೊಂಡು ಮಾತನಾಡುತ್ತೇವೆ. ಸರ್ಕಾರಕ್ಕೆ ಬೆಂಗಳೂರಿನ ಬಗ್ಗೆ ಕಳಕಳಿ ಇದ್ದರೆ, ಈ ವಿಧೇಯಕದಲ್ಲಿ ಹೇಳಿದ್ದಾರೆ. ಇನ್ನು ಮುಂದೆ 'ಬೆಂಗಳೂರು' ಎನ್ನುವ ಪದವನ್ನು ಉಪಯೋಗಿಸತಕ್ಕದ್ದಲ್ಲ. 'ಬೆಂಗಳೂರು' ಎನ್ನುವ ಪದವನ್ನು ಕೈಬಿಡತಕ್ಕದ್ದು ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಬೆಂಗಳೂರು ಅಲ್ಲ ಬಿಬಿಎಂಪಿ.

**ಶ್ರೀ ಎಂ.ಆರ್. ಸೀತಾರಾಂ:–** 'ಬೃಹತ್' ಪದವನ್ನು ಕೈಬಿಡಬೇಕೆಂದು ಹೇಳಿರುವುದು.

**ಶ್ರೀ ಅಶ್ವತ್ ನಾರಾಯಣ:–** ನಾನು ಎಲ್ಲವನ್ನು ಓದಿದ್ದೇನೆ, ನಾನು ಹೇಳುತ್ತೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಇನ್ನು ಮುಂದೆ 'ಬೃಹತ್ ಬೆಂಗಳೂರು' ಕೇವಲ ಮಹಾನಗರ ಪಾಲಿಕೆ ಎಂದಿರುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, (ವಿಧೇಯಕ ನೋಡಬೇಕು) 4 (3)ನೇ ಉಪ ಪ್ರಕರಣದಲ್ಲಿ ಈ ರೀತಿ ಹೇಳಲಾಗಿದೆ. 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಎಂಬ ಪದಗಳಿಗೆ 'ನಗರ ಪಾಲಿಕೆ' ಎನ್ನುವ ಪದಗಳನ್ನು ಪ್ರತಿಯೋಗಿಸತಕ್ಕದ್ದು ಎಂದಿದೆ. ಅಂದರೆ ಇನ್ನು ಮುಂದೆ 'ಬೆಂಗಳೂರು' ಎನ್ನುವ ಪದವನ್ನು ಉಪಯೋಗ ಮಾಡುವುದಿಲ್ಲ. ವಿಧೇಯಕದಲ್ಲಿ 'ಬೆಂಗಳೂರು' ಎನ್ನುವ ಪದವನ್ನು ಕೈಬಿಡಲಾಗಿದೆ. ವಿಧೇಯಕದಲ್ಲಿದೆ ಅದನ್ನು ಅವರು ಓದಿಕೊಳ್ಳಲಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಸರ್ಕಾರದ ಕಡೆ ಮಿಸ್ಸಿಂಗ್ ಆಗಿದೆ ಎನ್ನುತ್ತಿದ್ದಾರೆ. ಮಿಸ್ಸಿಂಗ್ ಆಗಿದ್ದರೆ ಅವರು ಈ ವಿಧೇಯಕವನ್ನು ವಿತ್‌ಡ್ರಾ ಮಾಡಿಕೊಳ್ಳಲಿ. ನನಗೆ ಕನ್ನಡ ಅರ್ಥವಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:–** ಮಿಸ್ಟೇಕ್ ಆಗಿದ್ದರೆ ಅದನ್ನು ವಿತ್‌ಡ್ರಾ ಮಾಡುವುದಕ್ಕಾಗುತ್ತದೆಯೇ? ಅವರೇನು ಹೇಳುತ್ತಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಆ ತರಹ ನೀವು ಪ್ರಿಂಟ್ ಮಾಡಿಸಿ.

**ವೈಸ್ ಛೇರ್ಮನ್:–** ಮಾನ್ಯ ಸೀತಾರಾಂರವರೆ, ವಿಧೇಯಕದ ಬಗ್ಗೆ ಮಾತನಾಡುವಾಗ ಮಿಸ್ಟೇಕ್ ಆಗಿದೆ ಎಂದು ಹೇಳಬಾರದು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಪುಟ ಸಂಖ್ಯೆ : 8 ರ ಕ್ಲಾಜ್ 13 ರಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ ನೋಡಿ. ಇದರಲ್ಲಿ 'ಬೆಂಗಳೂರು' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು ಎಂದು ಹೇಳುತ್ತಾರೆ. ಇದನ್ನು ಅವರು ದಯಮಾಡಿ ಓದಲಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಅವರು ವಿಧೇಯಕದ ಪುಟ ಸಂಖ್ಯೆ 8 ನ್ನು ನೋಡಲಿ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೆ, ವಿಧೇಯಕದ ಪುಟ ಸಂಖ್ಯೆ: 2ರಲ್ಲಿ "ಇಲ್ಲಿ ಇನ್ನು ಮುಂದೆ ಬೆಂಗಳೂರು ಮಹಾನಗರ ಪಾಲಿಕೆ ಎಂದು ಉಲ್ಲೇಖಿಸಲಾಗಿದೆ" ಎಂದು ಹೇಳಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತಾರಂತೆ ಬಿಡಿ. ಸರ್ಕಾರ ಏನು ಈ ಒಂದು ವಿಧೇಯಕವನ್ನುತಂದಿದ್ದಾರೆ, ಇದು ಬೆಂಗಳೂರು ಜನತೆಯ ಮನಸ್ಸಿಗೆ ವಿರುದ್ಧವಾಗಿತಂದಿರತಕ್ಕಂಥ ಒಂದು ವಿಧೇಯಕವಾಗಿದೆ. ಬೆಂಗಳೂರು ಮಹಾನಗರದ ಬಗ್ಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡುವುದರ ಬಗ್ಗೆ ವಿಧೇಯಕವನ್ನು ತರಲಿ. ಮಾನ್ಯ ಸಚಿವರು ನಂತರ ಸ್ಪಷ್ಟೀಕರಣವನ್ನು ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡುವಾಗ ಇದರ ಬಗ್ಗೆ ದಯಮಾಡಿ ಹೇಳಲಿ. ಬೆಂಗಳೂರಿನ ಬಗ್ಗೆ ಕಳಕಳಿ ಇದ್ದರೆ ಬೆಂಗಳೂರನ್ನು ಮುಂದೆ ಹೇಗೆ ಅಭಿವೃದ್ಧಿ ಪಡಿಸಬೇಕು, ಬೇರೆ ಬೇರೆ ಯಾವ ರೀತಿಯ ಸಲಹೆಗಳು ಬೇಕು ಎನ್ನತಕ್ಕಂಥಾದ್ದನ್ನು ಮಾನ್ಯ ಸೀತಾರಾಂರವರು ಹೇಳಿದ ಹಾಗೆ ಪ್ರತಿಯೊಂದರ ಬಗ್ಗೆಯೂ ಸಹ ಚರ್ಚೆಯನ್ನು ಮಾಡೋಣ. ಆದರೆ ಯಾವುದೇ ಕಾರಣಕ್ಕೂ ಸಹ ಬೆಂಗಳೂರನ್ನು division ಮಾಡತಕ್ಕಂಥಾದ್ದು ಇದೆಯಲ್ಲಾ, ಇದನ್ನು ಯಾರೂ ಸಹ ಒಪ್ಪುವಂಥಾದ್ದಲ್ಲ. ಮಾನ್ಯ ಸೋಮಣ್ಣನವರು ಮಾತನಾಡುವಾಗ ಬೆಂಗಳೂರಿನ ಸುತ್ತಮುತ್ತ ಸುಮಾರು 500 ರಿಂದ 600 ಐಟಿ ಕಂಪನಿಗಳಿವೆ ಎಂದು ಹೇಳಿದರು. ಇವತ್ತು ಎಲೆಕ್ಟ್ರಾನಿಕ್ ಸಿಟಿ ಹಾಗೂ ನೂರಾರು ಐಟಿ ಕಂಪನಿಗಳು ಬಿಬಿಎಂಪಿ ವ್ಯಾಪ್ತಿಯಲ್ಲಿ ಇಲ್ಲ. ಇದರಿಂದ ನಮಗೆ ಯಾವುದೇ ರೀತಿಯ ತೆರಿಗೆಗಳು ಬರುತ್ತಿಲ್ಲ. ಈ ರೀತಿ ತೆರಿಗೆಗಳನ್ನು ಪಡೆದುಕೊಳ್ಳುವ ದೃಷ್ಟಿಯಿಂದ, financial infrastructure development ಮಾಡುವ ದೃಷ್ಟಿಯಿಂದ ಸಭೆಯನ್ನು ಕರೆದು ಚರ್ಚೆಯನ್ನು ಮಾಡಲಿ. ಅದರ ಬಗ್ಗೆ ಸಾಕಷ್ಟು ಸಲಹೆಗಳು ಬರುತ್ತವೆ. ಇವತ್ತು ಬೆಂಗಳೂರಿನಲ್ಲಿ ಬಿಬಿಎಂಪಿ ವ್ಯಾಪ್ತಿಯ ಗಡಿಯಲ್ಲಿ ಒಂದು ಚದುರ ಅಡಿಗೆ 10,000 ರೂಪಾಯಿ ಇದೆ. ಇವುಗಳು ಇನ್ನು ಪಂಚಾಯ್ತಿ ವ್ಯಾಪ್ತಿಯಲ್ಲಿವೆ. ಮಾಗಡಿಗೆ ಹೋಗಬೇಕಾದರೆ ಕಡಬ ಗೆರೆ ಎಂದು ಸಿಗುತ್ತದೆ. ಇಲ್ಲಿ ಒಂದು ಚದುರ ಅಡಿಗೆ 10,000 ರೂಪಾಯಿ ಇದೆ ಮತ್ತು ಇನ್ನು ಪಂಚಾಯ್ತಿ ವ್ಯಾಪ್ತಿಯ ಕೆಲಸ ನಡೆಯುತ್ತಿದೆ. ಇನ್ನು ಪಂಚಾಯ್ತಿ ಲೆಕ್ಕದಲ್ಲಿ revenue transaction ನಡೆಯುತ್ತಿದೆ. ನೂರಾರು

ಕೋಟಿ ರೂಪಾಯಿ turnover ಆಗುತ್ತಿದೆ. ಅಂತಹ ಜಾಗಗಳನ್ನು ಬಿಬಿಎಂಪಿ ವ್ಯಾಪ್ತಿಗೆ ತೆಗೆದುಕೊಳ್ಳಿ. ಆಗ ಬಿಬಿಎಂಪಿ ಯಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಯ ಆದಾಯ ಬರುತ್ತದೆ. ಇವತ್ತು ಎಲೆಕ್ಟ್ರಾನಿಕ್ ಸಿಟಿ ಇರಬಹುದು, ಬೆಂಗಳೂರಿನ ಗಡಿಯಲ್ಲಿ ಕೆಲವು ಐಟಿ ಕಂಪನಿಗಳಿವೆ. ಇದರಿಂದ ಬೆಂಗಳೂರಿಗೆ ಒಂದು ರೂಪಾಯಿಯ ತೆರಿಗೆ ಬರುತ್ತಿಲ್ಲ. Tax net ಗೆ ತೆಗೆದುಕೊಂಡು ಬನ್ನಿ.

**ಶ್ರೀ ವಿ. ಸೋಮಣ್ಣ (ವಿಧಾನ ಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ಒಂದು ವಿಚಾರವನ್ನು ಹೇಳುತ್ತೇನೆ. ಇವತ್ತು ಬೆಂಗಳೂರಿನಲ್ಲಿ ಐಟಿ–ಬಿಟಿ ಕಂಪನಿಗಳೇನಿವೆ, ಪ್ರಾಯಶಃ ಎಲೆಕ್ಟ್ರಾನಿಕ್ ಸಿಟಿಯಿಂದ, ಕೆ.ಆರ್.ಪುರಂ, ವೈಟ್ ಫೀಲ್ಡ್‌ವರೆವಿಗೂ ಸಾವಿರಾರು ಕಟ್ಟಡಗಳು ಇವತ್ತಿಗೂ ಸಹ ಪಂಚಾಯ್ತಿ ನಕ್ಷೆ ಇದ್ದು ಅದರ ವ್ಯಾಪ್ತಿಯಲ್ಲಿವೆ. ನಾವು ಸರಿಯಾಗಿ ಇದೊಂದನ್ನು ಪುನರ್ ಪರಿಶೀಲನೆ ಮಾಡಿದರೆ ನನಗನ್ನಿಸುತ್ತದೆ, ಕನಿಷ್ಠ ಒಂದೂವರೆಯಿಂದ ಎರಡು ಸಾವಿರ ಕೋಟಿ ರೂಪಾಯಿಯ ಆದಾಯ ಬರುತ್ತದೆ. ಅವರು ಇದನ್ನು ಬಿಬಿಎಂಪಿ ಮಿತಿಗೆ ಏಕೆ ಬಿಡುತ್ತಿಲ್ಲವೆಂದರೆ, ನಾವು ಕೂಡ 1999ರಲ್ಲಿ ಇದಕ್ಕೆ ಸಾಕಷ್ಟು ಒತ್ತಡವನ್ನು ತಂದೆವು. ನಂತರ ಅಧಿಕಾರಕ್ಕೆ ಬಂದಂಥ ಸರ್ಕಾರಗಳು ಅವರ ಹತ್ತಿರಕ್ಕೆ ಬರದ ಹಾಗೆ ನೋಡಿಕೊಳ್ಳುವ ಪ್ರಭಾವಿಗಳು ಅಲ್ಲಿ ಇವತ್ತಿನ ದಿವಸ ತಾವೇ ಸೃಷ್ಟಿಯಾಗಿವೆ. ಮಾನ್ಯ ಅಶ್ವತ್ ನಾರಾಯಣನವರು ಏನು ಹೇಳಿದ್ದಾರೆ, ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಿ ಪ್ರಾಯಶಃ ಒಳ್ಳೆಯ ದಕ್ಷ ಅಧಿಕಾರಿಗಳನ್ನು ಏನು ನೇಮಿಸಿದ್ದಾರೆ ಅದೊಂದನ್ನು ಮಾಡಿದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎನ್ನುವುದಕ್ಕಿಂತ ಹೆಚ್ಚಾಗಿ ಸರ್ಕಾರಕ್ಕೆ ಕ್ರೋಢೀಕರಣವಾಗಬೇಕಾದ ಸಂಪತ್ತು ಯಾರದೋ ಜೇಬಿಗೆ ಹೋಗುತ್ತಿದೆ. ಇದರ ಬಗ್ಗೆ ನಾವು ಎಷ್ಟರಮಟ್ಟಿಗೆ ಸಾಧನೆ ಮಾಡುತ್ತೇವೆಯೋ ಅಷ್ಟರಮಟ್ಟಿಗೆ ಒಂದು ದೊಡ್ಡ ಇತಿಹಾಸವನ್ನು ಸೃಷ್ಟಿ ಮಾಡಿದ ಹಾಗಾಗುತ್ತದೆ. ಮಾನ್ಯ ಅಶ್ವತ್ ನಾರಾಯಣನವರು ಹೇಳಿರತಕ್ಕಂಥದ್ದರ ಬಗ್ಗೆ ದಯಮಾಡಿ ಸರ್ಕಾರ ಗಮನಕ್ಕೆ ತೆಗೆದುಕೊಂಡು ನಾಳೆ ಅಥವಾ ನಾಡಿದ್ದರಲ್ಲಿ ಸಾಧ್ಯವಾದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಇದರ ಬಗ್ಗೆ ಒಂದು ಸೂಚನೆಯನ್ನು ಕೊಡುವುದು ಒಳ್ಳೆಯದು.

**ಶ್ರೀ ವಿನಯಕುಮಾರ್ ಸೊರಕೆ:–** ಮಾನ್ಯ ಸಭಾಪತಿಯವರೇ, ಮೂರು–ಮೂರು ಸಲ ಎಲ್ಲಾ ಅಧಿಕಾರಿಗಳನ್ನು ಕರೆದು ರಿವ್ಯೂ ಮೀಟಿಂಗ್ ಮಾಡಿ 600 ಕೋಟಿ ರೂಪಾಯಿ ಆಸ್ತಿ ತೆರಿಗೆ ವಸೂಲಾತಿ ಆಗಿದೆ. 600 ಕೋಟಿ ರೂಪಾಯಿ ಕಳೆದ ವರ್ಷಕ್ಕಿಂತ ಈ ಸಲ ಜಾಸ್ತಿ ವಸೂಲಿಯಾಗುವಂತಹ ಅವಕಾಶ ಆಗಿದೆ. ಮೂರು–ಮೂರು ಸಲ ರಿವ್ಯೂ ಮೀಟಿಂಗ್ ಮಾಡಿಕೊಂಡು ಅದಕ್ಕೆ ಚಾಲನೆ ಕೊಡುವಂತಹ ಕೆಲಸ–ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ಅವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಎಸ್.ಎಂ. ಕೃಷ್ಣರವರ ಅವಧಿಯಲ್ಲಿ ಅರ್ಕಾವತಿ ಬಡಾವಣೆ, ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣವಾಯಿತು. ಅಂಜನಾಪುರ ಎರಡನೆ ಹಂತ, ಮೂರನೆ ಹಂತ, ಬನಶಂಕರಿ 6ನೇ ಹಂತದವರೆಗೂ ಬೆಳೆಯಿತು. ಇವತ್ತು ಅವೆಲ್ಲವೂ ಕೂಡ ನೂರಾರು ಕೋಟಿ ಟರ್ನ್‌ಓವರ್ ನಡೆಯುತ್ತಿತ್ತು. ಇವತ್ತು revenue collection ಎಲ್ಲಾ ರೆವಿನ್ಯೂ ಲೆಕ್ಕದಲ್ಲಿ ಹೋಗುತ್ತಿತ್ತೇ ಹೊರತು ಯಾವುದೇ ರೀತಿ ಸರ್ಕಾರಕ್ಕೆ ಬರುತ್ತಿರಲಿಲ್ಲ. ಇವತ್ತು ಬಿಡಿಎ ಬಡಾವಣೆ ನಿರ್ಮಾಣ ಮಾಡಿದ ಮೇಲೆ ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿರುವುದು ಬಿಡಿಎ ಜವಾಬ್ದಾರಿ. ನೀರು, ಸ್ಯಾನಿಟರಿ, ಇವೆಲ್ಲಾ ಕೊಡಬೇಕು. ಇಷ್ಟೆಲ್ಲಾ ತೆಗೆದುಕೊಂಡು ಇವತ್ತು ಬನಶಂಕರಿ 6ನೇ ಹಂತ ತಲಘಟ್ಟಪುರ ಬಾರ್ಡರ್‌ವರೆಗೂ ಬಂದಿದೆ. ಇವತ್ತಿನ ಕಾಲಕ್ಕೆ ಒಂದು ಚದುರ ಅಡಿಗೆ 10,000 ರೂಪಾಯಿ ಇದೆ. ಅದನ್ನು ಅವರು ಬಿಬಿಎಂಪಿ ವ್ಯಾಪ್ತಿಗೆ ತೆಗೆದುಕೊಳ್ಳಬೇಕೋ ಬೇಡವೋ? ಮುಂಚೆ C.I.T.B. (City Improvement Trust Board) ಇತ್ತು. ತದನಂತರ ಬಿಡಿಎ ಆಯಿತು. ಎಲ್ಲಾ ಬಡಾವಣೆಗಳು ಅಭಿವೃದ್ಧಿ ಆಗುತ್ತಾ 67 ವಾರ್ಡ್ ಇದ್ದದ್ದು 100 ವಾರ್ಡ್ ಆಯಿತು. 100 ವಾರ್ಡ್ ಇರುವುದು 198 ವಾರ್ಡ್ ಆಯಿತು. ಅವರ ಅವಧಿಯಲ್ಲಿ ಬೇಕಾದರೆ 250 ವಾರ್ಡ್‌ಗಳನ್ನು ಮಾಡಿ ಒಂದು ದೊಡ್ಡ ಬೆಂಗಳೂರು ಮಾಡಿ ಆ ಹೆಸರನ್ನು ಬೇಕಾದರೆ ಅವರು ತೆಗೆದುಕೊಳ್ಳಲಿ. ಎಲ್ಲೋ ಒಂದು ಕಡೆ 110 ಹಳ್ಳಿ, 7 ಸಿಎಂಸಿ, ಒಂದು ಪುರಸಭೆ ತೆಗೆದುಕೊಂಡಿರುವುದರಿಂದ ಇವತ್ತು 9,000 ಕೋಟಿ ರೂ. ಇದ್ದಂಥ ತೆರಿಗೆ ಸಂಗ್ರಹ 1980 ಕೋಟಿ ರೂಪಾಯಿ ತೆರಿಗೆ ಸಂಗ್ರಹವಾಗಿದೆ. ಅದರ ಬಗ್ಗೆ ಮಾಹಿತಿ ತೆಗೆದುಕೊಳ್ಳಿ. ಇವತ್ತು ಬೆಂಗಳೂರು ಮಹಾನಗರ ಪಾಲಿಕೆ ತೆರಿಗೆ ಸಂಗ್ರಹಣೆಯ ನಿಟ್ಟಿನಲ್ಲಿ 2010 ರಲ್ಲಿ ಎಷ್ಟು ಪ್ರಾಪರ್ಟಿ ಇತ್ತು ಇವತ್ತು ತೆರಿಗೆ ಸಂಗ್ರಹಣೆಯ ನಿಟ್ಟಿನಲ್ಲಿ ಎಷ್ಟು ಪ್ರಾಪರ್ಟಿಯನ್ನು ತೆಗೆದುಕೊಂಡು ಬಂದಿದ್ದಾರೆ, 2010 ರಲ್ಲಿ ಎಷ್ಟು ತೆರಿಗೆ ಸಂಗ್ರಹಣೆ ಇತ್ತು, ಇವತ್ತು ಎಷ್ಟು ತೆರಿಗೆ ಸಂಗ್ರಹಣೆಯಾಗಿದೆ ಎಂದು ಮಾಹಿತಿಯನ್ನು ತೆಗೆದುಕೊಳ್ಳಿ. ನಮ್ಮ ಬಿಬಿಎಂಪಿ ಆಡಳಿತ ಬಂದ ಮೇಲೆ P.I.D. ಇರಲಿಲ್ಲ. 'Property Identification Document' ಎಂದು ಮಾಡಿದರು. Road history ಇರಲಿಲ್ಲ. ನಮ್ಮ ಬಿಬಿಎಂಪಿ ಬಂದ ಮೇಲೆ road history ಯನ್ನು ಮಾಡಿದರು. ಮೂರು ರಸ್ತೆಗೆ ಟಾರ್ ಹಾಕಿಬಿಟ್ಟು ಆರು ರಸ್ತೆಗೆ ಬಿಲ್ ಮಾಡಿಕೊಳ್ಳುತ್ತಿದ್ದರು. ಯಾವ್ಯಾವ ರಸ್ತೆಗೆ ಟಾರ್ ಹಾಕಿದ್ದಾರೆ ಎನ್ನುವಂಥದ್ದು road history ಯಲ್ಲಿ ಇದೆ. ಅದರಲ್ಲಿ ಮಾಹಿತಿ ಇದೆ, ತೆಗೆದುಕೊಳ್ಳಿ. ಬೆಳಿಗ್ಗೆ ಸೋಮಣ್ಣನವರು ಒಂದು ದೊಡ್ಡ ಪುಸ್ತಕ ತೋರಿಸಿದ್ದಾರಲ್ಲಾ ಅದರಲ್ಲಿ ಎಲ್ಲಾ ಮಾಹಿತಿ ಸಿಗುತ್ತದೆ. Programme, Works ನಲ್ಲಿ ಸಾಕಷ್ಟು ದುರುಪಯೋಗವಾಗಿದೆ. ದಯಮಾಡಿ ಇದನ್ನು 2001 ರಿಂದ ತನಿಖೆಗೆ ಒಳಪಡಿಸಿ. ಯಾವುದೇ ಸರ್ಕಾರ

ಇರಲಿ, ಯಾವುದೇ ಮಹಾನಗರ ಪಾಲಿಕೆ ಇರಲಿ ಅಥವಾ ಆಡಳಿತಾಧಿಕಾರಿಯವರ ಅವಧಿ ಇರಲಿ, ಯಾರೋ ಆಡಳಿತಾಧಿಕಾರಿಯವರ ಅವಧಿಯಲ್ಲಿ ಮಾಡಿರತಕ್ಕಂಥ ಸಾಕಷ್ಟು ಅವ್ಯವಹಾರಗಳನ್ನು ನೀವು ಎಲ್ಲಿಂದಲ್ಲಾದರೂ ತೆಗೆದುಕೊಂಡು ಬನ್ನಿ. ಆಡಳಿತಾಧಿಕಾರಿಯವರ ಅವಧಿಯಲ್ಲಿ ಆಗಿರುವ ಸಾಕಷ್ಟು ಅವ್ಯವಹಾರಗಳನ್ನು ನಾವು ಏಕೆ ವಹಿಸಿಕೊಳ್ಳಬೇಕು? 2006 ರಿಂದ 2010 ರವರೆಗೆ ಮಹಾನಗರ ಪಾಲಿಕೆಯೇ ಇರಲಿಲ್ಲ. ಸೀತಾರಾಂರವರು 2006 ರಿಂದ ನೀವು ಚುನಾವಣೆ ಮಾಡಿರಲಿಲ್ಲ ಎಂದು ಹೇಳಿದರು. 2006 ರಲ್ಲಿ ನಮ್ಮ ಸರ್ಕಾರ ಇರಲಿಲ್ಲ. ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಅವರು ಚುನಾವಣೆ ಮಾಡಬೇಕೆಂದು P.I.L. ಹಾಕಿರುವುದು. ಅಲ್ಲಿಂದ ಎಳೆದುಕೊಂಡು ಹೋಗಿ ಸುಪ್ರೀಮ್ ಕೋರ್ಟ್‌ಗೆ ಹೋದಾಗ ಸುಪ್ರೀಮ್ ಕೋರ್ಟ್ ನಿರ್ದೇಶನ ಕೊಟ್ಟಿತು.

**ಶ್ರೀ ಎಂ.ಆರ್. ಸೀತಾರಾಂ:–** ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಸಮ್ಮಿಶ್ರ ಸರ್ಕಾರ ಆದಮೇಲೆ ನೀವೇ ಚುನಾವಣೆ ನಡೆಸಬೇಕಾಗಿತ್ತು, ನೀವು ನಡೆಸಲಿಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** 2006 ರಿಂದ 2010 ರವರೆಗೆ ಕೇಸ್ ಹಾಕಿ ಕೊನೆಗೆ ಸುಪ್ರಿಮ್ ಕೋರ್ಟ್‌ಗೆ ಹೋದ ಮೇಲೆ ಸರ್ಕಾರದಿಂದ ಒಂದು ದಿನಾಂಕವನ್ನು ನಿಗದಿ ಮಾಡಿಸಿಕೊಂಡು ಚುನಾವಣೆ ನಡೆಸಿತು. ಚುನಾವಣೆ ಮಾಡಿದ ಮೇಲೆ ಆಗಿರತಕ್ಕಂಥ ಕೆಲಸಗಳು ಸಾಕಷ್ಟು ಇವೆ. ಅದು P.I.D. ಬಗ್ಗೆ ಆಗಬಹುದು, road history ಬಗ್ಗೆ ಆಗಬಹುದು, ಮತ್ತು ಬಿಬಿಎಂಪಿಗೆ ತಂದಿರತಕ್ಕಂಥ ಆದಾಯಗಳು ಇವತ್ತು ಎಷ್ಟೋ ಪ್ರಾಪರ್ಟಿಗಳು ಕೈಬಿಟ್ಟು ಹೋಗಬೇಕಾಗಿತ್ತು. ಅಂತಹ ಪ್ರಾಪರ್ಟಿಗಳ ಬಗ್ಗೆ ಮಹಾನಗರ ಪಾಲಿಕೆ ತೀರ್ಮಾನ ತೆಗೆದುಕೊಂಡು ಬಿಬಿಎಂಪಿ ವ್ಯಾಪ್ತಿಗೆ ಬರುವ ಹಾಗೆ ಮಾಡಿದ್ದಾರೆ. 9 ಲಕ್ಷ ಇದ್ದಂತಹ ಟ್ಯಾಕ್ಸ್ 16 ಲಕ್ಷಕ್ಕೆ tax net ಗೆ ಬರುತ್ತದೆ ಪ್ರಾಪರ್ಟಿ ಎಂದರೆ ಅದು ಬಿಬಿಎಂಪಿ ಸಾಧನೆಯಲ್ಲವೆ? ಎಲ್ಲೋ ಒಂದು ಕಡೆ ಬಿಬಿಎಂಪಿ ಯಿಂದ ಮೂಲಭೂತ ಸೌಕರ್ಯ ಅಭಿವೃದ್ಧಿ, ನೀರು, ಸ್ಯಾನಿಟರಿ ಪ್ರತಿಯೊಂದನ್ನು ತೆಗೆದುಕೊಳ್ಳುತ್ತಾರೆ. ಅದು ತೆರಿಗೆ ನಿಟ್ಟಿನಲ್ಲಿ ಬರುತ್ತಿರಲಿಲ್ಲ. ಅದನ್ನೆಲ್ಲಾ ತೆಗೆದುಕೊಂಡು ಬಂದಿರುವಂಥದ್ದು tax net ಗೆ ತಂದಿದ್ದು ನಮ್ಮ ಆಡಳಿತ ಬಂದ ಮೇಲೆ. ಅದಕ್ಕೆ 67 ಜನ ಕಾರ್ಪೋರೇಟರ್ ಇರತಕ್ಕಂಥ ಕಾಂಗ್ರೆಸ್ ಕಾರ್ಪೋರೇಟರ್ ಇರತಕ್ಕಂಥ ಭಾಗದಲ್ಲಿ ನೀವು ಕೇಳಿಕೊಂಡು ಬನ್ನಿ. ಯಡಿಯೂರಪ್ಪನವರು, ಸದಾನಂದಗೌಡರು, ಜಗದೀಶ್‌ಶೆಟ್ಟರು ಎಷ್ಟರಮಟ್ಟಿಗೆ ದುಡ್ಡನ್ನು ಕೊಟ್ಟಿದ್ದಾರೆ, ಈ ಸರ್ಕಾರ ಬಂದ ಮೇಲೆ ಎರಡು ವರ್ಷದಲ್ಲಿ ಎಷ್ಟರಮಟ್ಟಿಗೆ ದುಡ್ಡು ಕೊಟ್ಟಿದೆ ಎಂದು ನೀವು ನಮ್ಮನ್ನು ಕೇಳುವುದು ಬೇಡ. ಕಾಂಗ್ರಸ್ಸಿನ ಕಾರ್ಪೋರೇಟರ್‌ಗಳನ್ನು ಕೇಳಿಕೊಂಡು ಬನ್ನಿ. ಎಲ್ಲಿಂದ ದುಡ್ಡು ತರುತ್ತಾರೆ, ಏನು ಹೀಗೆ ಕೊಡುತ್ತಾರೆ, ಈಗ ನಮಗೆ ದುಡ್ಡೇ ಕೊಡುತ್ತಿಲ್ಲ, ಮುಂಚೆ ನಿಮ್ಮ

ಸರ್ಕಾರ ಇದ್ದಾಗ ದುಡ್ಡು ಬರುತ್ತಿತ್ತು ಕಣ್ರೋ ಮಾರಾಯ ಎಂದು ಹೇಳುತ್ತಾರೆ. ಇವತ್ತು ದುಡ್ಡೇ ಇಲ್ಲ, ಇವರು ಬೆಂಗಳೂರು ಬಗ್ಗೆ ಮಾತನಾಡುತ್ತಿದ್ದಾರೆ?

**ಶ್ರೀ ರಾಮಲಿಂಗಾರೆಡ್ಡಿ:–** ನೀವು ಬಹಳ partiality ಮಾಡುತ್ತಿದ್ದೀರಿ?

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ನಾವೇನು partiality ಮಾಡುತ್ತಿಲ್ಲ. ನಾವು ಇರುವುದನ್ನು ಹೇಳುತ್ತಿದ್ದೇವೆ. ರಾಮಲಿಂಗಾರೆಡ್ಡಿಯವರಿಗೂ confusion ಇತ್ತು. ಯಡಿಯೂರಪ್ಪ ಏನಪ್ಪ ಹೀಗೆ ದುಡ್ಡು ಕೊಡುತ್ತಾರೆ, ನಮ್ಮ ಸರ್ಕಾರದಲ್ಲಿ ಹೀಗೆ ದುಡ್ಡು ಬರುತ್ತಿಲ್ಲವಲ್ಲಾ ಎಂದು ಅವರ ಮನಸ್ಸಿನಲ್ಲಿದೆ. ಅವರಿಗೆ ಗೊತ್ತಿದೆ.

**Sri M.R. SEETHARAM:-** Financial irregularity ಆದದ್ದು ಹಣ ಕೊಟ್ಟು ದುರುಪಯೋಗವಾಗಿದೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬೆಂಗಳೂರಿನ ಮಹಾನಗರಪಾಲಿಕೆಯ ಬಗ್ಗೆ ಕಳೆದ ಹದಿನೈದು ದಿನಗಳಿಂದ ರಾಜ್ಯ ಸರ್ಕಾರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಇದರಲ್ಲಿ ನನಗನಿಸುತ್ತಿದೆ ಮುಖ್ಯಮಂತ್ರಿಗಳನ್ನು ಕತ್ತಲೆಯಲ್ಲಿಟ್ಟು ಎಲ್ಲೋ ಒಂದು ಕಡೆ ಕೆಲವೊಂದು ಗುಂಪುಗಳು ಮಾತ್ರ ಪಟ್ಟಭದ್ರ ಹಿತಾಸಕ್ತಿಗಳು ಮುಖ್ಯಮಂತ್ರಿಗಳ ಮುಖೇನಾ ಈ ವಿಧೇಯಕವನ್ನು ತರುವುದಕ್ಕೆ ಹೊರಟಿದ್ದಾರೆ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಕಾಣುತ್ತಿದೆ. ಮುಖ್ಯಮಂತ್ರಿಗಳಿಗೆ ಏನು ಗೊತ್ತಿಲ್ಲ. ಇಲ್ಲಿ ಒಂದು ಕಡೆ ಹೈಕೋರ್ಟ್ ಒಂದು ರೀತಿ ಜಡ್ಜ್‌ಮೆಂಟ್‌ನ್ನು reserve ಮಾಡಿ ಇಟ್ಟಿದೆ. ನಿನ್ನೆ ಪತ್ರಿಕೆಗಳನ್ನು ನೋಡಿದರೆ ಸರ್ಕಾರಕ್ಕೆ ಮಂಗಳಾರತಿ, ಛೀಮಾರಿ ಎಂದು ಇದೆ, ಇದು ಬೇಕಾಗಿತ್ತೆ? ಇದು ಹೈಕೋರ್ಟ್‌ಗೆ ಹೋಗಬೇಕಾಗಿತ್ತೆ? ಮಂಗಳಾರತಿ, ಛೀಮಾರಿ, ಈ ಪದಗಳನ್ನು ತೆಗೆದುಕೊಳ್ಳುವಂಥದ್ದು ಇದೆಯಲ್ಲಾ ಚುನಾಯಿತ ಸರ್ಕಾರಕ್ಕೆ ಇದು ಒಳ್ಳೆಯದಲ್ಲ. ಇದರ ಬಗ್ಗೆ ಚರ್ಚೆಯನ್ನು ಮಾಡಿ. ಬೆಂಗಳೂರನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕೆಂದು ನಾನು ಆಗಲೇ ಹೇಳಿದೆ. ಕಡಬಗೆರೆಯವರೆಗೆ ವಿಸ್ತರಣೆ ಮಾಡಿ. ಬೆಂಗಳೂರಿನಲ್ಲಿ ನಿಮಗೆ ಆದಾಯ ಜಾಸ್ತಿ ಬರುತ್ತದೆ. ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳಾಗಿದ್ದಾಗ ಅವರು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ಅನುಕೂಲತೆಯನ್ನು ಮಾಡಿಕೊಟ್ಟರು. ಅದು ಇವತ್ತು ಬಿಬಿಎಂಪಿಯ tax net ಗೆ ಬರುತ್ತಿಲ್ಲ. ಎಲೆಕ್ಟ್ರಾನಿಕ್ ಸಿಟಿಯನ್ನು ಬಿಬಿಎಂಪಿ tax net ಗೆ ತೆಗೆದುಕೊಂಡು ಬನ್ನಿ. ಸರ್ಕಾರಕ್ಕೆ ಸಾವಿರಾರು ಕೋಟಿ ಆದಾಯ ಬರುತ್ತದೆ. ಬಿಬಿಎಂಪಿ ನಿಮ್ಮ ಹತ್ತಿರ ಬಂದು ಭಿಕ್ಷೆ ಬೇಡುವುದು ತಪ್ಪುತ್ತದೆ. ಇವತ್ತು ಎಲ್ಲಾ ರೀತಿಯ ಅನುಕೂಲತೆಗಳನ್ನು ನಾವು ಮಾಡಿಕೊಡುತ್ತಿದ್ದೇವೆ. ಅವು ಯಾವುದು ಸಹ tax net ಗೆ ಬರುತ್ತಿಲ್ಲ. ಎಲ್ಲೋ

ಒಂದು ಕಡೆ ಬಿಬಿಎಂಪಿ ಯಲ್ಲಿ ಹಣಕಾಸು ಅವ್ಯವಹಾರವಾಗಿದೆ. ಮಾನ್ಯ ಸಭಾಪತಿಯವರೇ, ತಮ್ಮ ನೇತೃತ್ವದಲ್ಲಿ ನಾವು ಗುಲ್ಬರ್ಗಾಕ್ಕೆ ಭೇಟಿಯನ್ನು ಕೊಟ್ಟೆವು. ಇಲ್ಲಿ ಗುಲ್ಬರ್ಗಾ ಉಸ್ತುವಾರಿ ಸಚಿವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ 68,000 ಪ್ರಾಪರ್ಟಿ ಇರುವಂಥದ್ದು. 68,000ಕ್ಕೆ ಎಲ್ಲದಕ್ಕೂ water connections ಇದೆ. ಬಿಲ್ ಎಷ್ಟು ಸಂಗ್ರಹವಾಗುತ್ತದೆ ಎಂದರೆ 35,000 ಮನೆಗಳಲ್ಲಿ ಮಾತ್ರ bill collect ಆಗುತ್ತಿರುವುದಂತೆ. ಮಾನ್ಯ ಸಭಾಪತಿಯವರ ನೇತೃತ್ವದಲ್ಲಿ ನಾವು ನಿಯೋಗ ಹೋಗಿದ್ದೆವು. ಈ ರೀತಿಯಾದರೆ ಗುಲ್ಬರ್ಗಾ ಮಹಾನಗರ ಪಾಲಿಕೆಯನ್ನು ವಜಾ ಮಾಡುವುದಕ್ಕಾಗುತ್ತದೆಯೇ? ನಾವು ನಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೇವೆಂದರೆ restructure ಎಂದರೆ ಇವೆಲ್ಲವೂ ತಹಬದಿಗೆ ತೆಗೆದುಕೊಂಡು ಬರತಕ್ಕಂಥದ್ದು. Restructure ಎಂದರೆ ಮೂರು ಮಾಡುವುದಲ್ಲ, ಇವೆಲ್ಲವೂ ಒಟ್ಟಿಗೆ ಸೇರಿಸಿ ಆಡಳಿತವನ್ನು ಹೇಗೆ ಸುಧಾರಣೆ ಮಾಡುವುದು ಎನ್ನುವುದು, ಅದು restructure.

**ಶ್ರೀ ಸಿದ್ದರಾಮಯ್ಯ:–** ಹೊಸ interpretation.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ನೀವು ಮೈಸೂರಿನವರು, ಕನ್ನಡದ ಬಗ್ಗೆ ಇಷ್ಟೊಂದು confusion ಇರಬಾರದು. ಆ ತರಹ ನಾವು ಹೇಳಿದ್ದು.

**ಶ್ರೀ ಸಿದ್ದರಾಮಯ್ಯ:–** ಮಂಡ್ಯದವರಿಗೆ ಇದೆಯೇ?

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಂಡ್ಯದವರಿಗೆ ಇದೆ. ಮಾನ್ಯ ಮುಖ್ಯಮಂತ್ರಿಗಳೇ, ಇಡೀ ದೇಶದಲ್ಲೇ 80 ಪರ್ಸೆಂಟ್ ಕನ್ನಡ ಮಾತನಾಡತಕ್ಕಂಥ ಯಾವುದಾದರೂ ಜಿಲ್ಲೆ ಇದ್ದರೆ ಅದು ಮಂಡ್ಯ ಒಂದೇ.

ಸನ್ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳಿಗೆ ನಾನು ಈ ಸದನದ ಮುಖೇನಾ ಒತ್ತಾಯ ಮಾಡುವುದು ಇಷ್ಟೇ, ಯಾವುದೇ ಕಾರಣಕ್ಕೂ ಬೆಂಗಳೂರು ಎರಡು, ಮೂರು ಎನ್ನುವ ವಿಚಾರವನ್ನು ಕೈಬಿಡಿ. ಬೆಂಗಳೂರು ಬಗ್ಗೆ, ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ, ಬೆಂಗಳೂರಿನ ಅಭಿವೃದ್ಧಿಗೆ ಬಗ್ಗೆ ಸರ್ವ ಪಕ್ಷ ಸಭೆಯನ್ನು ಕರೆಯಿರಿ. ಆ ಸಭೆಯಲ್ಲಿ ನೀವು ಚರ್ಚೆಯನ್ನು ಮಾಡಿ. ಅವರಿಗೆ ನಾವು ಸಲಹೆಯನ್ನು ಕೊಡುತ್ತೇವೆ. ನಾವು ಸರ್ಕಾರದ ವಿರುದ್ಧವಾಗಿ ಹೇಳಿಕೆಯನ್ನು ಕೊಡುವುದಿಲ್ಲ. ನಾವು ಸಲಹೆಗಳನ್ನು ಕೊಡುತ್ತೇವೆ. ಆ ಸಲಹೆ positive ಆಗಿದ್ದರೆ ದಯಮಾಡಿ ಆ ಸಲಹೆಗಳನ್ನು ತೆಗೆದುಕೊಳ್ಳಲಿ. ಸರ್ಕಾರಕ್ಕೆ ಬರತಕ್ಕಂಥ ನೂರಾರು ಕೋಟಿ ರೂಪಾಯಿ ಆದಾಯ ಇವತ್ತು ತಪ್ಪಿ ಹೋಗುತ್ತಿದೆ. ಮಹಾನಗರ ಪಾಲಿಕೆಗೆ ಮೋಸವನ್ನು ಮಾಡಿ ಇವತ್ತು ದುಡ್ಡಿನ ಸಮಸ್ಯೆ ಇದ್ದಾಗ ದೊಡ್ಡ ದೊಡ್ಡ ಮಾಲ್‌ಗಳಲ್ಲಿ ತಮಟೆ

ಹೊಡೆದು ಕೋಟ್ಯಾಂತರ ರೂಪಾಯಿಗಳ ತೆರಿಗೆಯನ್ನು ವಸೂಲಿ ಮಾಡಿದ್ದಾರೆ. ಇಡೀ ದೇಶದಲ್ಲಿ ಯಾವುದೇ ಮಹಾನಗರ ಪಾಲಿಕೆ ತೆರಿಗೆ ಕಟ್ಟದಿರುವಂತಹ ಮನೆಗಳ ಮುಂದೆ ಹೋಗಿ ತಮಟೆ ಹೊಡೆದು ದುಡ್ಡು ವಸೂಲಿ ಮಾಡಿರುವ ನಿದರ್ಶನಗಳಿಲ್ಲ. ಅದು ಬಿಜೆಪಿಯ ಬೆಂಗಳೂರು ಮಹಾನಗರ ಪಾಲಿಕೆ ತಮಟೆ ಹೊಡೆದು ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಸಾಕಷ್ಟು ಐ.ಟಿ. ಕಂಪನಿಗಳು ತೆರಿಗೆ ಹಣವನ್ನು ಕಟ್ಟಿರಲಿಲ್ಲ. ಆ ದುಡ್ಡನ್ನು ವಸೂಲಿ ಮಾಡಿದ್ದಾರೆ. ಇಷ್ಟೆಲ್ಲಾ ಒಳ್ಳೆಯ ಕೆಲಸ ಮಾಡಿರಬೇಕಾದರೆ ಎಲ್ಲೋ ಒಂದು ಕಡೆ ಅದನ್ನು ಟೀಕೆ ಮಾಡತಕ್ಕಂಥದ್ದು ಹರಾಜು ಹಾಕತಕ್ಕಂಥದ್ದು ಒಳ್ಳೆಯ ಬೆಳವಣಿಗೆಯಲ್ಲ. ಈಗಾಗಲೇ ಬೆಂಗಳೂರು ಬಗ್ಗೆ ಸಾಕಷ್ಟು ಬುದ್ಧಿಜೀವಿಗಳು, intellectuals ತಮ್ಮದೇ ಆದಂಥ ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರನ್ನು ಯಾವುದೇ ಕಾರಣಕ್ಕೂ ಮೂರು ಭಾಗಗಳನ್ನು ಮಾಡುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ, ಬೆಂಗಳೂರನ್ನು ಮೂರು ಭಾಗಗಳಾಗಿ ಮಾಡಿ ಬೆಂಗಳೂರನ್ನು ಒಡೆದರು ಎನ್ನುವ ಕೆಟ್ಟ ವಿಚಾರಕ್ಕೆ ನೀವು ಬಲಿಯಾಗಬೇಡಿ. ನಿಮ್ಮ ಅವಧಿಯಲ್ಲಿ ಬೆಂಗಳೂರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೂರು ಮಾಡಿಬಿಟ್ಟರು ಎಂದು ಕೆಟ್ಟ ಆಪಾದನೆಯನ್ನು ನಿಮ್ಮ ಮೇಲೆ ಹೊರಿಸುವುದಕ್ಕೆ ಕಾಂಗ್ರೆಸ್‌ನವರು ತಯಾರಾಗಿದ್ದಾರೆ. ನಾಳೆ ಚುನಾವಣೆಯಲ್ಲಿ ಸೋತರೆ ಅದನ್ನು ನಿಮ್ಮ ತಲೆಗೆ ಕಟ್ಟುತ್ತಾರೆ. ದಯಮಾಡಿ ಇದರ ಬಗ್ಗೆ ಎಚ್ಚರಿಕೆಯಿಂದಿರಿ. ಯಾವುದೇ ಕಾರಣಕ್ಕೂ ಕೂಡ ಬೆಂಗಳೂರನ್ನು ಮೂರು ಮಾಡುವುದಕ್ಕೆ ಬಿಡಬೇಡಿ. ಬೆಂಗಳೂರಿನ ಜನರಿಗೆ ಬೆಂಗಳೂರು ಬಗ್ಗೆ concern ಇದೆ, ಭಾವನಾತ್ಮಕ ಸಂಬಂಧ ಇದೆ. ಇಂತಹ ಬೆಂಗಳೂರು ಮಹಾನಗರವನ್ನು ಒಡೆದು ಕೆಂಪೇಗೌಡರ ಕನಸನ್ನು ಎಲ್ಲೋ ಒಂದು ಕಡೆ ಚೂರು ಮಾಡುವುದಕ್ಕೆ ಪ್ರಯತ್ನ ಪಡಬಾರದು ಎನ್ನುವ ಮಾತನ್ನು ಹೇಳಿ ಈ ವಿಧೇಯಕವನ್ನು ನಾನು ಸಾರಸಗಟಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ, ಧನ್ಯವಾದಗಳು.

**(5–30 ಗಂಟೆ)**

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು ಅರ್ಪಿಸುತ್ತೇನೆ. ಬೆಂಗಳೂರು ನಗರ ಪಾಲಿಕೆ ಅಧಿನಿಯಮ 1976ರ ತಿದ್ದುಪಡಿ ವಿಧೇಯಕದ ಮೇಲೆ ನಡೆದ ಚರ್ಚೆಯ ಬಗ್ಗೆ ಎರಡು ವಿಚಾರಗಳ ಬಗ್ಗೆ ನಾವು ಕೂಲಂಕಷವಾಗಿ ಚರ್ಚಿಸಬೇಕಾಗಿದೆ. ಒಂದು ಇಂದಿನ ಬೆಂಗಳೂರು ಮಹಾನಗರ ಅತ್ಯಂತ ಅಗಾಧವಾಗಿ, ಅತ್ಯಂತ ವಿಸ್ತಾರವಾಗಿ ಬೆಳೆದಿದ್ದರಿಂದ ಇಲ್ಲಿರತಕ್ಕಂಥ ಜನರಿಗೆ ಮೂಲಭೂತ ಅನುಕೂಲತೆಗಳನ್ನು ಜನಪರ ಚಿಂತನೆಯೊಂದಿಗೆ ಕೊಡತಕ್ಕಂಥಾದ್ದು ಮತ್ತು ಆಡಳಿತವನ್ನು

ಚುರುಕುಗೊಳಿಸತಕ್ಕಂಥ ಅವಶ್ಯಕತೆ ಇದೆ. ಆ ದೃಷ್ಟಿಯಿಂದ ಈ ಬೃಹತ್ ನಗರ ಪಾಲಿಕೆಯನ್ನು ಮಹಾನಗರ ಪಾಲಿಕೆಯಾಗಿ ಜನರ ಒಳಿತಿಗಾಗಿ ಹಾಗೂ ಉತ್ತಮವಾದ ಆಡಳಿತವನ್ನು ಕೊಡಲಿಕ್ಕಾಗಿ, ಮೂಲಭೂತ ಅನುಕೂಲತೆಗಾಗಿ ವಿಭಜಿಸತಕ್ಕಂಥ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಮಾನ್ಯ ಸೋಮಣ್ಣನವರು, ಮಾನ್ಯ ಅಶ್ವತ್ ನಾರಾಯಣ ಹಾಗೂ ಇನ್ನು ಹಲವಾರು ಜನರು ಮಾತನಾಡುವಾಗ, ಅವರ ಅಭಿಪ್ರಾಯವನ್ನು ಹೇಳುವಾಗ ಬೆಂಗಳೂರಿಗೆ ಅನ್ಯಾಯವಾಗುತ್ತಿದೆ, ನಾಡಪ್ರಭು ಕೆಂಪೇಗೌಡರು ಕಟ್ಟಿದಂಥ ಮಹಾನಗರಕ್ಕೆ ಬಹಳ ಕೆಟ್ಟದಾಗುತ್ತಿದೆ ಎಂದರು. ಇಲ್ಲಿ ಆ ಪ್ರಶ್ನೆ ಇಲ್ಲ. ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ, ಬೆಂಗಳೂರು ನಗರವನ್ನು ನಾಡಪ್ರಭುಕೆಂಪೇಗೌಡರು 1537ರಲ್ಲಿ ಕಟ್ಟಿದರು. ಅಲ್ಲಿ ಅವರು ಅಂದು ರಚಿಸಿದಂತಹ ಬೆಂಗಳೂರು ಮಹಾನಗರ ಎಷ್ಟಿರಬೇಕು, ಯಾವ ರೀತಿ ಇರಬೇಕು ಎಂಬುದಕ್ಕೆ ಕೆಂಪಾಬುದಿ ಕೆರೆಯ ಬಳಿ, ಲಾಲ್‌ಬಾಗ್ ಬಳಿ, ಮೇಖ್ರಿ ವೃತ್ತದ ಬಳಿ ಹಾಗೂ ಹಲಸೂರಿನ ಬಳಿ ನಾಲ್ಕು ಕಡೆಗಳಲ್ಲಿ ಗೋಪುರಗಳನ್ನು ನಿರ್ಮಾಣ ಮಾಡಿ ಬೆಂಗಳೂರು ಇಷ್ಟಕ್ಕೆ ಸೀಮಿತವಾಗಿರಬೇಕು ಎಂದಾಗ ನಾವು ಜನರಿಗೆ ಅನುಕೂಲತೆ ಮಾಡುವುದಕ್ಕಾಗುತ್ತದೆ ಮತ್ತು ಬೆಂಗಳೂರಿನ ನಾಗರೀಕರಿಗೆ ಮೂಲಭೂತ ಅನುಕೂಲತೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಇದನ್ನು ಇವರು ಒಪ್ಪಿಕೊಳ್ಳುತ್ತಾರೆ. ಇವರು ನಾಡಪ್ರಭು ಕೆಂಪೇಗೌಡರ ಬಗ್ಗೆ ಮಾತನಾಡುತ್ತಾರೆ. ಈಗ ಬೆಂಗಳೂರನ್ನು ಮೂರು ಭಾಗ ಮಾಡುವುದರಿಂದ ಬೆಂಗಳೂರಿಗೆ ಯಾವುದೇರೀತಿಯಲ್ಲಿ ಹಾನಿಯಾಗುತ್ತಿಲ್ಲ ಮತ್ತು ಬೆಂಗಳೂರಿನ ಹೆಸರಿಗೂ ಸಹ ಹಾನಿಯಾಗುತ್ತಿಲ್ಲ. ಬೆಂಗಳೂರಿನ brand name ಏನಿದೆ ಅದಕ್ಕೆ ಎಂದೂಧಕ್ಕೆ ಬರುತ್ತಿಲ್ಲ ಎಂಬುದನ್ನು ನಾನು ತಮ್ಮ ಮೂಲಕ ಹೇಳಲು ಇಚ್ಛೆಪಡುತ್ತೇನೆ. ಕೆಂಪೇಗೌಡರ ದೂರದೃಷ್ಟಿಯೂ ಸಹ ಅದನ್ನು ತೋರಿಸುತ್ತದೆ. ಬೆಂಗಳೂರು ನಗರದಲ್ಲಿ ನದಿಗಳಿಲ್ಲ. ಬೆಂಗಳೂರಿಗೆ ನಾವು ನೀರನ್ನು ಬೇರೆ ಕಡೆಯಿಂದ ತಂದು ಒದಗಿಸಬೇಕು. 1809ರಲ್ಲಿ ದಂಡು ಪ್ರದೇಶ ಅಂದರೆ ಈಗಿನ ಕಂಟೋನ್ಮೆಂಟ್ ಎಂದು ನಾವೇನು ಕರೆಯುತ್ತೇವೆ ಅದು ಹಾಗೂ ಬೆಂಗಳೂರಿನ ಕೆಂಪೇಗೌಡರು ಕಟ್ಟಿದ ಪೇಟೆ ಇದನ್ನು ಒಂದಾಗಿ ಮಾಡಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ನಿರ್ಮಾಣ ಮಾಡಿದರು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ವಿಧೇಯಕದ ಪುಟ ಸಂಖ್ಯೆ: 8ರಲ್ಲಿ 'ಬೆಂಗಳೂರು'ಎಂಬುದನ್ನು ಬಿಡತಕ್ಕದ್ದು ಎಂದು ಇದೆ.

**ಶ್ರೀಹೆಚ್.ಎಂ. ರೇವಣ್ಣ:–** ಪುಟ ಸಂಖ್ಯೆ: 2ರಲ್ಲಿ ಏನಿದೆ ಎಂಬುದನ್ನು ನೋಡಿ.

**(ಈ ಹಂತದಲ್ಲಿ ಸಭಾಪತಿಯವರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)**

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಇಲ್ಲೇನಾಗಿದೆ emotional ಆಗಿ ಮಾತನಾಡುವುದು, ಮೂಲಭೂತವಾಗಿ ವಿಚಾರ ಮಾಡಿ, ಬದ್ಧತೆಯಿಂದ ಅದನ್ನು ತಿಳಿದುಕೊಂಡು ನಾವು ಪಕ್ಷಾತೀತವಾಗಿ ಬೆಂಗಳೂರಿನ ಹಿತದೃಷ್ಟಿಯಿಂದ ಈ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಾಸಿಸತಕ್ಕಂಥ ಜನರು ಮುಖ್ಯವಾಗಿರುವುದರಿಂದ, ಆ ಜನರಿಗೆ ಮೂಲಭೂತವಾದ ಅನುಕೂಲತೆಗಳನ್ನು ಕಲ್ಪಿಸುವುದರ ಜೊತೆಗೆ ಅಭಿವೃದ್ಧಿಯನ್ನು ವ್ಯವಸ್ಥಿತವಾಗಿ ಮಾಡಿ, ಆಡಳಿತವನ್ನು ಚುರುಕುಗೊಳಿಸಿ ಜನರ ಆಸೆ–ಆಕಾಂಕ್ಷೆಗಳಿಗೆ ಸ್ಪಂದಿಸಬೇಕಾದುದು ಬಹಳ ಮಹತ್ವಪೂರ್ಣವಾದ ಕೆಲಸವಾಗಿದೆ. ಇವತ್ತು ದುರ್ದೈವದಿಂದ ಏನಾಗಿದೆ ಎಂದರೆ ಬೆಂಗಳೂರು ನಗರ ಬಹಳಷ್ಟು ಬೆಳೆದಿದೆ. ಅಂದು ಬೆಂಗಳೂರು ನಗರದ ಜನಸಂಖ್ಯೆ ಸುಮಾರು 40,00,000ಕ್ಕಿಂತ ಕಡಿಮೆ ಇತ್ತು. ಇವತ್ತು ಬೆಂಗಳೂರಿನಲ್ಲಿ 1,10,00,000ಗಿಂತಲೂ ಹೆಚ್ಚಿನ ಜನಸಂಖ್ಯೆ ಇದೆ. ಇಡೀ ರಾಷ್ಟ್ರದಲ್ಲಿ ತೀವ್ರವಾಗಿ ಅಭಿವೃದ್ಧಿ ಹೊಂದುತ್ತಿರುವಎರಡು ನಗರಗಳಿವೆ. ಒಂದು ದೆಹಲಿ ಮತ್ತೊಂದು ಬೆಂಗಳೂರು ನಗರ. ಏಷ್ಯಾ ಖಂಡದಲ್ಲಿ ಅತ್ಯಂತ ತೀವ್ರಗತಿಯಿಂದ ಅಭಿವೃದ್ಧಿ ಹೊಂದುತ್ತಿರುವಂಥ, ವಿಸ್ತಾರಗೊಳ್ಳತಕ್ಕಂಥ 10 ನಗರಗಳಲ್ಲಿ ಬೆಂಗಳೂರು ಸಹ ಒಂದಾಗಿದೆ. ಇಡೀ ವಿಶ್ವದಲ್ಲಿ ಹೆಚ್ಚು ಜನಸಂಖ್ಯೆಯುಳ್ಳ ಮಹಾನಗರಗಳಲ್ಲಿ ನಮ್ಮ ದೇಶದಲ್ಲಿ ಮೊದಲು ಕಲ್ಕತ್ತಾ ನಗರ ನಂತರ ಮುಂಬೈ ನಗರ ಬರುತ್ತಿತ್ತು. ಇವತ್ತು ಪರಿಸ್ಥಿತಿ ಬದಲಾವಣೆಯಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಜನರ ಹಿತದೃಷ್ಟಿಯಿಂದ ನಾವು ಸರ್ಕಾರವನ್ನು ನಡೆಸುವವರು ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ. ಮಾನ್ಯ ಸೋಮಣ್ಣನವರು ಮಾತನಾಡುವಾಗ ಮೂರು–ಮೂರು, ಎರಡೆರಡು ಆಗಿದೆ ಎಂದು ಹೇಳಿದರು. ವಿಶ್ವದಲ್ಲಿಯೇ ಹೆಚ್ಚು ಜನಸಂಖ್ಯೆ ಇರತಕ್ಕಂಥ ಮಹಾನಗರಗಳನ್ನು ವಿಭಜಿಸಿ ಇವತ್ತು ಇಂಗ್ಲೆಂಡ್‌ನ ಲಂಡನ್‌ನಲ್ಲಿ 32ಕ್ಕಿಂತಲೂ ಹೆಚ್ಚು ನಗರ ಪಾಲಿಕೆಗಳಿವೆ. ಇವುಗಳನ್ನು ಅಲ್ಲಿ Boroughs ಎಂದು ಕರೆಯುತ್ತಾರೆ. ಅವರು ಜನರ ಸೇವೆಯನ್ನು ಅತ್ಯಂತ ವ್ಯವಸ್ಥಿತವಾಗಿ, ಅಭಿವೃದ್ಧಿಪರವಾಗಿ ಮಾಡುತ್ತಿದ್ದಾರೆ. ಇವತ್ತು ದೆಹಲಿ ಮಹಾನಗರವನ್ನು ವಿಭಜನೆ ಮಾಡಿ ಜನರಿಗೆ ಮೂಲಭೂತ ಅನುಕೂಲತೆಯನ್ನು ಕಲ್ಪಿಸಿದ್ದಾರೆ. ಮುಂಬೈಯನ್ನು ನಾವು ವಾಣಿಜ್ಯ ನಗರವೆಂದು ಕರೆಯುತ್ತೇವೆ. ಅಲ್ಲಿಯೂ ಸಹ ಇವತ್ತು ಭಾಗಗಳನ್ನು ಮಾಡಲಾಗಿದೆ. ಅದೇ ರೀತಿಯಲ್ಲಿ ಕಲ್ಕತ್ತಾ ನಗರದಲ್ಲಿಯೂ ಸಹ 16 Boroughs ಗಳಿವೆ. ಆರ್ಥಿಕ ವ್ಯವಹಾರ, ಆಡಳಿತದ ದೃಷ್ಟಿಯಿಂದ ಯಾವುದೇ ನಿರ್ಧಾರವನ್ನು ಕೈಗೊಳ್ಳುವಾಗ ಸರ್ಕಾರ ಆ ಪ್ರದೇಶದ ಜನರ ಹಿತವನ್ನು ಆಧಾರವಾಗಿಟ್ಟುಕೊಂಡು ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ. ಕೇವಲ ನಾಡಪ್ರಭು ಇಷ್ಟು ದೊಡ್ಡ ಬೆಂಗಳೂರನ್ನು ಮಾಡಿ... ನಾಡಪ್ರಭುವಿನ ಹೆಸರನ್ನುಎಲ್ಲದಕ್ಕೂತೆಗೆಯುತ್ತಾರೆ. ಮಾನ್ಯ ಅಶ್ವತ್ ನಾರಾಯಣರವರು ಮತ್ತು ಮಾನ್ಯ ಸೋಮಣ್ಣನವರು ಈಗ ಇಲ್ಲ. ಅವರು ಎಲ್ಲದಕ್ಕೂ ನಾಡಪ್ರಭು ಕೆಂಪೇಗೌಡರ ಹೆಸರನ್ನು ಹೇಳುತ್ತಾರೆ. ನಾಡಪ್ರಭು ಹೇಳಿದ್ದಕ್ಕೆ ಇವರು ದ್ರೋಹವನ್ನು ಮಾಡಿದರು.

ಏಕೆಂದರೆ ಬೆಂಗಳೂರು ದೊಡ್ಡದಾಗಬಾರದು, ಇಷ್ಟೇ ಇರಬೇಕು ಎಂದಾಗ ಬೆಂಗಳೂರು ನಗರಕ್ಕೆ 110ಕ್ಕಿಂತಲೂ ಹೆಚ್ಚು ಹಳ್ಳಿಗಳನ್ನು ಸೇರಿಸಿದರು. ಇದು ನಾಡಪ್ರಭು ಕೆಂಪೇಗೌಡರ ಆಸೆ ಅಲ್ಲ. ಇದನ್ನು ಮಾನ್ಯ ಪುಟ್ಟಸ್ವಾಮಿಯವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಸುಮ್ಮನೆ emotional ಆಗಿ ಹೇಳುವುದು, ಜಾತಿಯ ಹೆಸರಿನ ಮೇಲೆ, ವ್ಯಕ್ತಿಗತ ಹೆಸರಿನ ಮೇಲೆ, ಧರ್ಮದ ಹೆಸರಿನ ಮೇಲೆ....

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ವೀರಣ್ಣ ಮತ್ತಿಕಟ್ಟಿಯವರೆ, ತಾವು ಹಿರಿಯರು, ಹೀಗೆಲ್ಲಾ ಮಾತನಾಡಬಾರದು.

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಭಾಪತಿಯವರೆ, ಕೆಂಪೇಗೌಡರನ್ನು ಜಾತಿಯ ಹೆಸರಿನ ಮೇಲೆ ಅಥವಾ ಜಾತಿಯಿಂದ ಗುರುತಿಸುವುದಿಲ್ಲ. ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದವರು. ಮಾನ್ಯ ಹಿರಿಯ ಸದಸ್ಯರು ಜಾತಿಯ ಬಗ್ಗೆ ಹೇಳುವುದು ಬೇಡ. ಯಾವುದೇ ಜಾತಿಯಿಂದ ಅವರನ್ನು ಗುರುತಿಸುವುದಿಲ್ಲ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರೇನು ಹೇಳುತ್ತಿದ್ದಾರೆ. ಅವರು ಓಬಿರಾಯನ ಕಥೆಯನ್ನು ಹೇಳುತ್ತಿದ್ದಾರೆ.

**ಶ್ರೀಮತಿ ವಿಮಲಾಗೌಡ:–** ಕೆಂಪೇಗೌಡರು ಬೆಂಗಳೂರಿನ ಸಮಸ್ತ ಜನರಿಗೆ ಸೇರಿದವರು. ಬಸವಣ್ಣನವರನ್ನು ಯಾವ ರೀತಿಯಾಗಿ ಆರಾಧಿಸುತ್ತೇವೆಯೋ ಅದೇ ರೀತಿ ಕೆಂಪೇಗೌಡರನ್ನು ಸಹ ಗೌರವಿಸುತ್ತೇವೆ. ಅವರು ಯಾವುದೇ ಒಂದು ಜಾತಿಗೆ ಸೀಮಿತವಲ್ಲ. ಅವರು ಯಾವುದೇ ಜಾತಿಯ ಬಗ್ಗೆ ಹೇಳುವುದು ಬೇಡ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಕೆಂಪೇಗೌಡರು ಯಾವುದೇ ಒಂದು ಜಾತಿಗೆ ಸೀಮಿತವಲ್ಲ. ಅವರು ಜಾತಿಯ ಬಗ್ಗೆ ಹೇಳುವುದು ಬೇಡ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಕೆಂಪೆಗೌಡರ ವಿಚಾರಧಾರೆ ಆ ರೀತಿಯಾಗಿ ಇರಲಿಲ್ಲವೆಂದು ನಾನು ಬಹಳ ಗೌರವಯುತವಾಗಿ ಹೇಳಿದೆ.

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಭಾಪತಿಯವರೆ, emotional ಆಗಿ ಜಾತಿಯನ್ನು ತರುತ್ತಾರೆ ಎಂದು ಅವರು ಹೇಳಿದರು. ಕೆಂಪೇಗೌಡರು ಯಾವುದೇ ಜಾತಿಗೆ ಸೀಮಿತವಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇಲ್ಲ ಇಲ್ಲ. ಅವರು ದೊಡ್ಡವರು ಅವರ ಹೆಸರನ್ನು ಆ ರೀತಿ ಉಪಯೋಗ ಮಾಡಬೇಡಿ ಎಂದು ಹೇಳಿ.

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಭಾಪತಿಯವರೆ, ಬಸವಣ್ಣನವರನ್ನು ಯಾವ ರೀತಿಯಾಗಿ ಆರಾಧಿಸುತ್ತೇವೆಯೋ ಅದೇ ರೀತಿ ಕೆಂಪೇಗೌಡರನ್ನು ಸಹ ಗೌರವಿಸುತ್ತೇವೆ.

**ಸಭಾಪತಿಯವರು:–** ಆಯಿತು ಬಿಡಿ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ನಾನು ಆ ರೀತಿ ಹೇಳಿದೆನೇ?

**ಶ್ರೀಮತಿ ವಿಮಲಾಗೌಡ:–** ಹಿರಿಯರು ಆ ರೀತಿ ಮಾತನಾಡಬಾರದು.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇಲ್ಲದೇ ಇರುವುದನ್ನು ಹೇಳುತ್ತಿದ್ದಾರೆ.

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಭಾಪತಿಯವರೆ, ಕೆಂಪೇಗೌಡರು ಇಡೀ ಸಮಾಜದ ಎಲ್ಲಾ ವರ್ಗದ ಅಭಿವೃದ್ಧಿಗಾಗಿ, ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಪಣತೊಟ್ಟು ದುಡಿದವರು. ಅದು ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ಹೆಚ್.ಎಂ. ರೇವಣ್ಣ:–** ಕೆಂಪೇಗೌಡರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಅವರು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಅವರು ಅವರ ಅಭಿಪ್ರಾಯವನ್ನು ಹೇಳಲಿ.

**ಶ್ರೀಮತಿ ವಿಮಲಾಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಯಾವುದೇ ಜಾತಿಯಿಂದ ಗುರುತಿಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಾರೆಯೋ ಈ ಸಮಾಜದ ಎಲ್ಲಾ ಭಾಗದವರು ಅವರನ್ನು ಗೌರವಿಸುತ್ತೇವೆ, ಪ್ರೀತಿಸುತ್ತೇವೆ. ಅವರನ್ನು ಯಾವುದೇ ಒಂದು ಜಾತಿಯಿಂದ ಗುರುತಿಸುವುದಿಲ್ಲ.

**ಸಭಾಪತಿಯವರು:–** ಜಾತಿ ಹೆಸರನ್ನು ತರಬಾರದು ಅಷ್ಟೇ. ಅದನ್ನು ಬಿಟ್ಟುಬಿಡಿ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ನಾನು ಜಾತಿಯ ಹೆಸರನ್ನು ಹೇಳಿಯೇ ಇಲ್ಲ. ನಾನೇನು ಹೇಳಿದೆನೆಂದರೆ, ನೀವು ಕೆಂಪೇಗೌಡರ ಹೆಸರನ್ನು ಹೇಳಿದಿರಿ, ಅವರೇ ಮೂಲಭೂತವಾಗಿ ಬೆಂಗಳೂರು ಇಷ್ಟಿರಬೇಕೆಂದು ಗುರುತು ಮಾಡಿ ಬೆಂಗಳೂರನ್ನು ನಿರ್ಮಾಣ ಮಾಡಿದ್ದಾರೆ. ಅದನ್ನಾದರೂ ಅವರು ಒಪ್ಪುತ್ತಾರೆಯೇ? ನಮಗೆ ಅವರ ಬಗ್ಗೆ ಅಗಾಧವಾದ ಗೌರವವಿದೆ. Don't create problem. ಅದರ ಬಗ್ಗೆ ತಪ್ಪು ಕಲ್ಪನೆಯನ್ನು ಮಾಡುವಂಥ ಪ್ರಶ್ನೆಯೇ ಇಲ್ಲ.

**ಸಭಾಪತಿಯವರ ಉಪಸ್ಥಿತಿ**

ನಾವು ಎಲ್ಲಾ ಹಂತದಲ್ಲಿ ಕೆಂಪೇಗೌಡರನ್ನು ಆರಾಧಿಸುತ್ತೇವೆ. ನಾವು ಅತ್ಯಂತ ಗೌರವಯುತವಾಗಿ ವಿಶ್ವಮಟ್ಟದ ಏರ್‌ಪೋರ್ಟ್‌ಗೆ ಅವರ ಹೆಸರನ್ನು ಇಟ್ಟಿದ್ದೇವೆ. ಆ ರೀತಿಯ ಅಭಿಮಾನ, ಗೌರವ, ಭಕ್ತಿ, ನಮ್ಮಲ್ಲಿದೆ. ಅವರ ಬಗ್ಗೆ ನಾನು ಏನೂ ಹೇಳಿಲ್ಲ. ಬೆಂಗಳೂರನ್ನು ಅತ್ಯಂತ ವಿಸ್ತಾರವಾಗಿ ಬೆಳೆಸುವಾಗ ಅವರು ನಾಲ್ಕು ಗಡಿ ಗೋಪುರಗಳನ್ನು ನಿರ್ಮಾಣ ಮಾಡಿದರು. ನಾವು ಈಗ ಅದನ್ನು ದಾಟಿ ಹೋಗಿದ್ದೇವೆ. 110 ಹಳ್ಳಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿದ್ದೀರಿ. 7 ಸಿಎಂಸಿಗಳನ್ನು ಒಂದು ಟಿಎಂಸಿಯನ್ನು ಇದಕ್ಕೆ ಸೇರಿಸಿದ್ದೀರಿ. ಇದರಿಂದ ಬೆಂಗಳೂರಿಗೆ ಏನೊಂದು ಹೆಸರು ಇತ್ತು ಅದಕ್ಕೆ ಕಳಂಕ ಬರುವ ಹಾಗೆ ಆಯಿತು. ಮಾತೆತ್ತಿದರೆ ಕೃಷ್ಣರವರ ಹೆಸರನ್ನು ಹೇಳಿದರು. ಆದರೆ ಅವರು ಬೆಂಗಳೂರನ್ನು ಅತ್ಯಂತ ಆದರ್ಶವಾದ ವಿಶ್ವಮಟ್ಟದ ಸಿಂಗಾಪುರ ಹೇಗಿದೆ ಅಷ್ಟು ಉತ್ತಮವಾದಂಥ ಒಂದು ಪಟ್ಟಣವನ್ನಾಗಿ ನಾವು ಮಾಡುತ್ತೇವೆಂದು ಹೇಳಿದರು. ಆ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದರು. ಅದು ನಿಮಗೆಲ್ಲಾ ಗೊತ್ತಿದೆ. ಮೊಟ್ಟ ಮೊದಲ ಬಾರಿಗೆ ದೇವರಾಜ ಅರಸ್‌ರವರು ಬೆಂಗಳೂರಿಗೆ ಕುಡಿಯುವ ನೀರನ್ನು ಕಾವೇರಿಯಿಂದ ತಂದು ಇಲ್ಲಿ ಒದಗಿಸತಕ್ಕಂಥ ಕೆಲಸವನ್ನು ಮಾಡಿದರು. ನೀವು ಬೆಂಗಳೂರಿನವರು ನಾವು ಬಂದವರು, ಹೋದವರು. ಮಾತನಾಡುವಾಗ ಬೆಂಗಳೂರು ಕರ್ನಾಟಕದ ಅತ್ಯಂತ ಅಭಿಮಾನ, ಗೌರವದ ಸಂಕೇತ ಹಾಗೂ ನಮ್ಮೆಲ್ಲರ ಅಭಿಮಾನದ ನಗರ ಎಂದು ಹೇಳಿದ್ದಾರೆ. ಅದು ಹೌದು. ಇದು ಇಷ್ಟೇ ಅಲ್ಲ, ಈ ರಾಷ್ಟ್ರದ ಹೆಸರಿನಲ್ಲಿ ನಾವು ಏನಾದರು ಒಳ್ಳೆಯ ಹೆಸರು ತರಬೇಕಾದರೆ ಇನ್‌ಫಾರ್ಮೇಶನ್ ಟೆಕ್ನಾಲಾಜಿಯಲ್ಲಿ ಬೆಂಗಳೂರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ ಇರಬೇಕಾದರೆ ಅದಕ್ಕೆ ಕಾರಣವೇನು? ಆ ದಿಸೆಯಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

**ಸಭಾಪತಿಯವರು:–** ಬೆಂಗಳೂರಿನ ಬಗ್ಗೆ ಮಾತನಾಡುವಾಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಎನ್ನುವ ಪದವನ್ನು ಪ್ರಯೋಗ ಮಾಡಿದ್ದೀರಿ. ಅದರ ಬಗ್ಗೆ ಒಂದು ಸಣ್ಣ ಘಟನೆ ಅದು ನನಗೆ ನೆನಪಿದೆ ಅದನ್ನು ಸದನಕ್ಕೆ ಹೇಳಬಯಸುತ್ತಿದ್ದೇನೆ. ಇದನ್ನು ಎಲ್ಲರು ನೆನಪು ಇಟ್ಟುಕೊಳ್ಳುವಂಥದ್ದು. ಇದು ನನ್ನ ಜೀವನದಲ್ಲಿ ನಡೆದಂಥ ಒಂದು ಘಟನೆ. ಹಿಂದಿನ, ಅದರ ಹಿಂದಿನ ರಾಜ್ಯಪಾಲರು ನಾವು ದೆಹಲಿ ಏರ್‌ಪೋರ್ಟ್‌ನಲ್ಲಿ ಬೆಂಗಳೂರಿಗೆ ಬರುವ ವಿಮಾನಕ್ಕಾಗಿ ಕಾಯುತಿದ್ದೆವು. ಆಗ ಅಂದಿನ ವರ್ಲ್ಡ್ ಬ್ಯಾಂಕಿನ ಚೇರ್ಮನ್ ಆದಂಥ Henry Kissinger ಅವರು ಬಂದರು. ಆಗ ನಮ್ಮ ರಾಜ್ಯಪಾಲರು ನಿಮಗೆ ಅವರು ಗೊತ್ತಾ ಎಂದು ಕೇಳಿದರು. ಆಗ ಅವರು ನನಗೆ ಗೊತ್ತಿಲ್ಲ ಎಂದು ಹೇಳಿದೆ. ಆಗ ಅವರು ಹೋಗಿ ಅವರೊಂದಿಗೆ ಮಾತನಾಡೋಣ ಎಂದು ಹೇಳಿ Henry Kissinger ಅವರ ಹತ್ತಿರ

ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಆಗ Henry Kissinger ಅವರು ನೀವು ಯಾರು ಎಂದು ಕೇಳಿದರು. ಸ್ವಾಭಾವಿಕವಾಗಿ ಅವರು You did not intimate me, who are you? ಎಂದು ಕೇಳಿದರು. ಇವರು I am the Governor of Karnataka ಎಂದು ಹೇಳಿದರು. ಕರ್ನಾಟಕ ಎಂದರೆ ಅವರಿಗೆ ಗೊತ್ತಾಗಲಿಲ್ಲ. ಇವರು ನಮ್ಮ ದೇಶದಲ್ಲಿ ಇಷ್ಟೊಂದು ರಾಜ್ಯಗಳಿವೆ ಅದರಲ್ಲಿ ಕರ್ನಾಟಕ ಕೂಡ ಒಂದು ರಾಜ್ಯ ಎಂದು ಹೇಳಿದರು. Southern part of India ಎಂದು ಹೇಳಿ ನಾನು ಅದರ ರಾಜ್ಯಪಾಲ ಎಂದು ಹೇಳಿದರು. ಆಗಲೂ ಅವರಿಗೆ ಅರ್ಥ ಆಗಲಿಲ್ಲ. ಕಡೆಗೆ ನಾನು ಒಂದು ನಿಮಿಷ ತಡೆಯಿರಿಎಂದು ಹೇಳಿ Henry Kissinger ಅವರಿಗೆ Bangalore is the capital of our State ಎಂದು ಹೇಳಿದೆ. ಹಾಂ ಬೆಂಗಳೂರ್ ನನಗೆ ಗೊತ್ತಿದೆ ಎಂದು Henry Kissinger ಅವರು ಹೇಳಿದಂಥ ಘಟನೆ ಇದೆ. ಬೆಂಗಳೂರಿನ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಏನು ಗೌರವ ಇದೆ ಎನ್ನುವುದನ್ನು ತಮಗೆ ಹೇಳಬೇಕೆಂದು ಅನಿಸಿತ್ತು. ಯಾವಾಗಲಾದರು ಮಾತನಾಡುವಾಗ ಹೇಳಬೇಕೆಂದೆನಿಸಿತ್ತು ಈಗ ಹೇಳಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮತ್ತಿಕಟ್ಟಿಯವರಿಗೆ ಒಂದು ವಿಷಯ ಹೇಳಬೇಕಾಗಿದೆ. ಬೆಂಗಳೂರಿಗೆ ನೀರು ತರಲು ಬಸವಲಿಂಗಪ್ಪನವರು ಕೂಡ ಮುಖ್ಯ ಕಾರಣ. ಅವರನ್ನು ತಾವು ಮರೆತಿದ್ದೀರಿ. ಅದನ್ನು ನೆನಪಿಸಬೇಕೆಂದಿದ್ದೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಅವರು ದೇವರಾಜ ಅರಸುರವರ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದರು. ನಾನು ಅವರನ್ನು ಅಭಿನಂದಿಸುತ್ತಿದ್ದೇನೆ. ನಾನು ಎಲ್ಲಾ ಮಂತ್ರಿಗಳ ಹೆಸರು ಹೇಳಿಲ್ಲ. ದಯಮಾಡಿ ಕೆಟ್ಟ ಕಲ್ಪನೆ ಆಗಬಾರದು. ನಾನು ಮುಖ್ಯಮಂತ್ರಿಯವರು ಯಾರು ಇದ್ದರು ಅವರ ಹೆಸರನ್ನು ಮಾತ್ರ ಹೇಳಿದ್ದೇನೆ. ಅವರ ಬಗ್ಗೆ ಕೂಡ ನಮಗೆ ಅತ್ಯಂತ ಗೌರವ ಇದೆ. ಹೆಚ್ಚಿನ ಜ್ಞಾನಕ್ಕಾಗಿ, ನನಗೆ ತಿಳಿಸಿದ್ದಕ್ಕಾಗಿ ಅಭಿನಂದನೆಗಳು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಫಾರಿನ್ ನ್ಯಾಶನಲ್ಸ್ ಇಂಡಿಯಾದ ಬಗ್ಗೆ ಯಾರಾದರು ವಿಚಾರ ಮಾಡಿದರೆ ನವದೆಹಲಿ ಬಗ್ಗೆ ಯಾರುಯೋಚನೆ ಮಾಡುವುದಿಲ್ಲ. ಇಂಡಿಯಾ ಅಂದರೆ ಬೆಂಗಳೂರು ಎನ್ನುವಷ್ಟು ಮಟ್ಟಿಗೆ ಪ್ರಖ್ಯಾತಿ ಪಡೆದಂಥ ನಗರ ಅಂದರೆ ಬೆಂಗಳೂರು. ಅದು ಐಟಿ ಕಾರಣಕ್ಕೋಸ್ಕರ.

**ಸಭಾಪತಿಯವರು:–** ಹೌದು ಐಟಿ ಕಾರಣಕ್ಕೋಸ್ಕರ ಗುರುತಿಸುತ್ತಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಈ ಸರ್ಕಾರ ಬಂದು ಯಾವುದೋ ವಿಚಾರಕ್ಕಾಗಿ ಬೆಂಗಳೂರನ್ನು ವಿಭಾಗ ಮಾಡುತ್ತಿದೆ ಎಂದು ಜನರಿಗೆ ಇವರು ಕಲ್ಪನೆ ಕೊಡುತ್ತಿದ್ದಾರೆ. ನಮ್ಮ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇರಲಿ ನಮ್ಮ ನಗರದಲ್ಲಿ ವಾಸಿಸುತ್ತಿರುವಂಥ ಜನರಿಗೆ ಆಡಳಿತ ಹೆಚ್ಚು ಹತ್ತಿರವಾಗಿರಬೇಕು, ಹೆಚ್ಚು ಜನಪರವಾದ ಆಡಳಿತ ಇರಬೇಕು, ಹೆಚ್ಚು ಜನರಿಗೆ ಅನುಕೂಲವಾಗತಕ್ಕಂಥ ನಿರ್ಧಾರಗಳನ್ನು ನಾವು ಮಾಡಬೇಕಾಗುತ್ತದೆ. ನಮ್ಮಲ್ಲಿ ಸ್ಟೇಟ್ಸ್‌ಮನ್‌ಶಿಪ್ ಇರಬೇಕು. ಹೊರಟ್ಟಿಯವರೆ, ನೀವು ಇಲ್ಲಿ ಕುಳಿತಾಗ ಒಂದು ಮಾತು ಹೇಳುತ್ತೀರಿ, ಅಲ್ಲಿ ಕುಳಿತಾಗ ಒಂದು ಮಾತು ಹೇಳುತ್ತೀರಿ. ಹಾಗೆ ಹೇಳಬಾರದು. ನಾವು ಪ್ರಜಾಪ್ರತಿನಿಧಿಗಳಾಗಿದ್ದಂಥವರು, ಆಡಳಿತ ನಡೆಸತಕ್ಕಂಥವರು, ಅಧಿಕಾರಕ್ಕೆ ಬಂದ ಮೇಲೆ ಅಥವಾ ವಿರೋಧ ಪಕ್ಷದಲ್ಲಿಯೇ ಇರಲಿ ನಾವು ಪಕ್ಷಾತೀತವಾಗಿ ವಿಚಾರ ಮಾಡಬೇಕು. ನಾನು ಹಲವಾರು ನೋವಿನ ಸಂಗತಿಗಳನ್ನು ಹೇಳಬಹುದು. ಆದರೆಅದನ್ನು ಹೇಳಿದರೆ ರಾಜಕೀಕರಣಗೊಳಿಸಿದ ಹಾಗೆ ಆಗುತ್ತದೆ. ನೀವು ಮೂರು ಜಿಲ್ಲೆಗಳನ್ನು ಮಾಡುವುದಕ್ಕೆ ಹೋಗಲಿಲ್ಲವೇ? ನಮ್ಮದೊಂದು ಜಿಲ್ಲೆ ಇರಬೇಕು, ನಿಮ್ಮದೊಂದು ಜಿಲ್ಲೆ ಇರಬೇಕೆಂದು ಮಾಡಲಿಲ್ಲವೇನು?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅದು ಈಗ ತಪ್ಪು ಅನಿಸುತ್ತಿದೆ. ಅದು ಸರಿ ಇಲ್ಲವೆಂದು ನಿಮಗೆ ಅನಿಸುವುದಿಲ್ಲವೇ?

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಅದರಿಂದ ಜನರಿಗೆ ಆಡಳಿತ ಹತ್ತಿರವಾಗಿದೆ. ಮೊದಲು ಕುಮಾರ ಪಟ್ಟಂದವರು ಧಾರವಾಡಕ್ಕೆ ಬರಬೇಕಾದರೆ 188 ಕಿ.ಮೀ ಬರಬೇಕಾಗಿತ್ತು. ಈಗ ಅವರು ಹತ್ತಿರದಲ್ಲಿದ್ದಾರೆ. ಅವರಿಗೆ ಹಾವೇರಿ ಹತ್ತಿರಇದೆ. ಕೆಲಸ ಬೇಗ ಆಗುತ್ತವೆ. ಅಲ್ಲಿ ಹೋಗಿ ಅವರಿಗೆ ಅವರ ಹಾಗೆ ಮಾತನಾಡುತ್ತೀರಿ, ಇಲ್ಲಿ ಬಂದು ಹೀಗೆ ಮಾತನಾಡುತ್ತೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಮ್ಮ ಜಿಲ್ಲೆ ಅವಿಭಾಜ್ಯ ಬಿಜಾಪುರ ಜಿಲ್ಲೆ. ಹೊರಟ್ಟಿಯವರು ಕೂಡ ನಮ್ಮ ಜಿಲ್ಲೆಯವರೆ. ಅವಿಭಾಜ್ಯ ಜಿಲ್ಲೆ ವಿಭಜನೆಯಾಗಿ ಬಿಜಾಪುರ, ಬಾಗಲಕೋಟೆಯಾದ ಮೇಲೆ ಎರಡೂ ಜಿಲ್ಲೆಗಳು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿವೆ. ಸಾಕಷ್ಟು ಅಭಿವೃದ್ಧಿಪರವಾದಂಥ ಕೆಲಸಗಳು ಎರಡೂ ಜಿಲ್ಲೆಗಳಲ್ಲಾಗಿವೆ. ಎರಡೂ ಜಿಲ್ಲೆಗಳು ರಾಜ್ಯದ, ರಾಷ್ಟ್ರದ ಗಮನ ಸೆಳೆಯುವಷ್ಟು ಅಭಿವೃದ್ಧಿ ಹೊಂದುತ್ತಿವೆ. ವಿಭಜನೆಯಾಗುವುದಕ್ಕಿಂತ ಮುಂಚೆ ಮತ್ತು ಇಂದಿನ ವಿಚಾರ ನಾವು ತುಲನಾತ್ಮಕವಾಗಿ ನೋಡಿದರೆ ವಿಭಜನೆಯಾದ ನಂತರ ಎರಡೂ ಜಿಲ್ಲೆಗಳು ಪ್ರಾಮುಖ್ಯತೆಯನ್ನು ಪಡೆದಿವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹಾಗಾದರೆ ನಾಲ್ಕು ಡಿವಿಜನ್‌ಗಳನ್ನು ಬೇರೆ ಬೇರೆ ರಾಜ್ಯಗಳನ್ನಾಗಿ ಮಾಡಿಬಿಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಡಿವಿಜನ್ ಬೇರೆ, ರಾಜ್ಯ ಬೇರೆ.

**ಶ್ರೀ ಬಸವರಾಜ ಹೊರಟ್ಟಿ:–**ಮಾನ್ಯ ಸಭಾಪತಿಯವರೆ, ಅವರಿಗೆ ಹಾಗೆ ಆದರೆ ಅನುಕೂಲ, ಹೀಗೆ ಆದರೆ ಅನುಕೂಲ ಎಂದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅನುಕೂಲವಾಗುವ ಕಾರಣಕ್ಕೋಸ್ಕರ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಜಿಲ್ಲೆ ವಿಭಜನೆ ಮಾಡಿದರು. ವಿಭಜನೆಯಾದ ನಂತರ ಆಡಳಿತಾತ್ಮಕವಾಗಿ ಬಹಳಷ್ಟು ಅನುಕೂಲವಾಗಿದೆ. ಅದರ ಅರ್ಥ ನಾಲ್ಕು ಡಿವಿಜನ್ ನಾಲ್ಕು ರಾಜ್ಯ ಮಾಡಿ, ಅಥವಾ ಉತ್ತರ ಕರ್ನಾಟಕ ಒಂದು ರಾಜ್ಯ ಮಾಡಿ ಎಂದು ಅಲ್ಲ. ಹೊಸ ತಾಲ್ಲೂಕುಗಳನ್ನು ಏಕೆ ಮಾಡುತ್ತೇವೆ, ಆಡಳಿತಾತ್ಮಕವಾಗಿ ಜನರಿಗೆ ಅನುಕೂಲವಾಗಲಿ ಎಂದು ಮಾಡುತ್ತೇವೆ. ಆಡಳಿತ ಜನರ ಕೈಗೆ ಸಿಗಲಿ, ಜನಪ್ರತಿನಿಧಿಗಳು ಜನರಕೈಗೆ ಸಿಗಲಿ, ಅಭಿವೃದ್ಧಿಯಾಗಲಿ ಎನ್ನುವ ಉದ್ದೇಶದಿಂದ ಅದನ್ನೆಲ್ಲಾ ಮಾಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಬೆಂಗಳೂರಿನಲ್ಲಿ ಮೂರು ಜನ ಮೇಯರ್‌ಗಳನ್ನು ಮಾಡಿದರೆ ಹೇಗಾಗುತ್ತದೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಹೊರಟ್ಟಿಯವರು ವಿಕೇಂದ್ರೀಕರಣ ಬೇಡ ಎಂದು ಹೇಳುತ್ತಿದ್ದಾರೆ. ನೀವಿಬ್ಬರು ಹೇಗೂ ಅನೇಕ ವಿಚಾರಗಳಲ್ಲಿ ಒಂದಾಗಿದ್ದೀರಿ, ದಯಮಾಡಿ ನೀವಿಬ್ಬರು ಈ ರಾಜ್ಯದಲ್ಲಿ ಹೊಸ 40 ತಾಲ್ಲೂಕುಗಳನ್ನು ಮಾಡಬೇಕೆಂದು ಏನು ಇತ್ತು by mistake ನಾವು ಅನೌನ್ಸ್ ಮಾಡಿದ್ದೆವು, ನಾವು ಅದನ್ನು ಮಾಡುವುದಿಲ್ಲ, ನಾವು ಅದರ ವಿರುದ್ಧ ಇದ್ದೇವೆಂದು ದಯಮಾಡಿ ಹೇಳಿ. ನೀವು ಹೇಳುವುದೊಂದು ಮಾಡುವುದೊಂದು ಏಕೆ? ಅದನ್ನು ರಾಜ್ಯದ ಜನತೆಗೆ ಹೇಳಿ. We are not for new taluks ಎಂದು ಹೇಳಿ.

**(ಗೊಂದಲ)**

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನೀವು ಈಶ್ವರಪ್ಪನವರು ಸೇರಿ ಈ ಮಾತನ್ನು ಹೇಳಿದರೆ ನಿಜಕ್ಕೂ ನಿಮ್ಮಿಬ್ಬರನ್ನು ನಾವು ಮೆಚ್ಚಬಹುದು.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಕೆಲವೊಂದು ತಾಲ್ಲೂಕಿನವರು ಹೇಳುತ್ತಿದ್ದಾರೆ. ಅಳ್ನಾವರಕ್ಕೆ ಹೋಗಿ ಅವರು ಬೇಡಎಂದು ಹೇಳುತ್ತಿದ್ದಾರೆ. ಹಾಗೆ ಕೇಳಿಕೊಂಡು ಇರುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಯಾವಾಗಲು ಹೊಸದನ್ನು ಮಾಡುವಾಗ...

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಬೇಕಾದರೆ ಅದಕ್ಕೊಂದು ಸಮಿತಿಯನ್ನು ಮಾಡಿದ್ದರು. ಅವರು ರಿಪೋರ್ಟ್ ಮಾಡಿ ಅದರ ಬಗ್ಗೆ ಸರ್ಕಾರದಲ್ಲಿ ಚರ್ಚೆಯಾಗಿ ನಂತರ ತಾಲ್ಲೂಕುಗಳನ್ನು ಮಾಡಿದ್ದಾರೆ. ಇದಕ್ಕೆ ಯಾವ ರಿಪೋರ್ಟ್ ಕೂಡ ಇಲ್ಲ. ಇದು ಕೇವಲ ನಿಮ್ಮತೆವಲಿಗೆ ಮಾಡುತ್ತಿದ್ದೀರಿ. ಚುನಾವಣೆ ಮುಂದೂಡಿ ನಿಮ್ಮತೆವಲಿಗೆ ಇದನ್ನು ಮಾಡುತ್ತಿದ್ದೀರಿ. ನೀವು ಮಾಡಿರುವ ತಪ್ಪಿಗೆ ಅದಕ್ಕೂ ಇದಕ್ಕೂ ಏಕೆ ತಾಳೆ ಹಾಕುತ್ತಿದ್ದೀರಿ?

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ:–** ನೀವು ಕೂಡ ಮೂರು ವರ್ಷ ಕಳ್ಳತನದಿಂದ ಚುನಾವಣೆ ಮುಂದೂಡಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ಆಯಿತು ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಸೀತಾರಾಮ್‌ರವರೆ ನೀವು ಮಾತನಾಡಿದ್ದೀರಿ ಕುಳಿತುಕೊಳ್ಳಿ. ಅವರಿಗೆ ಅವರ ಮಾತುಗಳನ್ನು ಮುಕ್ತಾಯ ಮಾಡಲು ಬಿಡಿ. ವೀರಣ್ಣನವರ ಮಾತನಾಡಲಿ. ವೀರಣ್ಣನವರೆ ನೀವು ಮುಂದುವರೆಸಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಬೃಹತ್ ಬೆಂಗಳೂರು ನಗರಪಾಲಿಕೆ ಇಷ್ಟೊಂದು ಬೆಳೆದಿದೆಯಲ್ಲಾ ವಿಶ್ವದಲ್ಲಿಯೇ ಅತ್ಯಂತ ದೊಡ್ಡ ನಗರಗಳಲ್ಲಿ ... ಒಂದು ನಿಮಿಷ... ಗೋಲಗುಮ್ಮಟರವರೆ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆ ಒಂದು ಮಾತು ಇದೆ. ಅವರಿಗೆ ಗೊತ್ತಾಗುವುದಿಲ್ಲ. ನಿಮಗೆ ಗೊತ್ತಾಗುತ್ತದೆಯೇ ಗಡಿಬಿಡಿಯಲ್ಲಿ 6 ತಿಂಗಳಿನಲ್ಲಿ ಹಡೆದರು ಎಂದು ಹೇಳುತ್ತಾರೆ. ಅಂದರೆ ತರಾತುರಿಯಲ್ಲಿ 9 ತಿಂಗಳುಗಳ ಕಾಯವುದಕ್ಕೆ ಆಗಲಿಲ್ಲ, 6 ತಿಂಗಳಿಗೆ ಹಡೆದು ಬಿಟ್ಟರು ಎಂದು. ನಿಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಕಮಿಟಿ ಮಾಡಿ ಎರಡು ಮಧ್ಯಂತರ ವರದಿ ಬಂದಿದೆ. ಇನ್ನೊಂದು ಅಂತಿಮ ವರದಿ ಬರುವವರೆಗೆ ಸರ್ಕಾರ ಕಾಯವುದಕ್ಕೆ ತಯಾರಿಲ್ಲ. ಆರು ತಿಂಗಳಿಗೆ ಹಡೆಯಬೇಕೆನ್ನುತ್ತಾರೆ. ಇದು ಯಾವ ರೀತಿಯಾಗುತ್ತದೆ? ಇದು ಸರಿಯಲ್ಲ ವೀರಣ್ಣ ಮತ್ತಿಕಟ್ಟಿಯವರೆ, ಸರ್ಕಾರಕ್ಕೆ ನೀವು ಬುದ್ಧಿಯನ್ನು ಹೇಳಿ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಅರುಣ ಶಹಾಪುರ್‌ರವರೆ, ನಿಮಗೆ ಅರ್ಥವಾಗುವುದಿಲ್ಲ. ಸುಮ್ಮನೆ ಬಿಡಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, 60 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಆಳ್ವಿಕೆಯನ್ನು ಮಾಡಿದೆ ಎಂದು ಹೇಳುತ್ತೀರಲ್ಲಾ ನಾವು ಆರು ತಿಂಗಳಿಗೆ ಹಡೆದವರು. ನೀವು 3 ತಿಂಗಳಿಗೆ ಹಡೆದವರು, ನೀವು ನಮ್ಮದ್ದನ್ನು ಹುಡುಕುವುದಕ್ಕೆ ಹೋಗಬೇಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅಬಾರ್ಷನ್ ಆಗಬಾರದೆಂದು ಹೇಳುತ್ತಾರೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಅವರದು ಆಗಿದೆ. ಅವರ ಜೊತೆಯಲ್ಲಿ ಕೂಡಿ ಮಾನ್ಯ ಬಸವರಾಜ ಹೊರಟ್ಟಿಯದು ಕೂಡ ಆಗುತ್ತದೆ. ಶ್ರೀ ಬಸವರಾಜ ಹೊರಟ್ಟಿಯವರು ಶ್ರೀ ಯಂ.ಸಿ. ನಾಣಯ್ಯನವರ ನಂತರ ಬಹಳ ಎತ್ತರದ ನಾಯಕನಾಗಿ ಬೆಳೆದಿದ್ದಾನೆ. ಪಕ್ಷಾತೀತವಾಗಿ ನಿರ್ಧಾರ ಕೈಗೊಳ್ಳುತ್ತಾರೆ. ಯಾವುದು ಸತ್ಯ ಇರುತ್ತದೆ ಅದಕ್ಕೆ ಪ್ರತಿಪಾದನೆ ಮಾಡುತ್ತಾರೆ, ಬೆಂಬಲ ಮಾಡುತ್ತಾರೆ ಎನ್ನುವುಂತಹ ವಿಶ್ವಾಸ ನನಗೆ ಇದೆ. ನನ್ನಂತೆ ಇರುವಂತಹ ಬಹುಪಾಲು ಜನರಿಗೆ ಇದೆ. ಆದರೆ ಒಮ್ಮೊಮ್ಮೆ ಒತ್ತಡದಿಂದ ದಾರಿ ತಪ್ಪುತ್ತಿದ್ದಾರೆ ಎನ್ನುವಂತಹ ನೋವು ನಮಗೆ ಇದೆ. ಒಳ್ಳೆಯದಕ್ಕೆ ಬೆಂಬಲ ಮಾಡಬೇಕು. ಶ್ರೀ ವಿ. ಸೋಮಣ್ಣರವರು ಮತ್ತು ಶ್ರೀ ಅಶ್ವಥ ನಾರಾಯಣ ಅವರುಗಳು ಇಲ್ಲಿ ಕೆಲವು ವಿಚಾರಗಳನ್ನು ಮಾತನಾಡಿದರು. ಅವರುಗಳು ಮಾತನಾಡುವಾಗ ಅವರ ಹೆಸರುಗಳನ್ನು ಹೇಳಿ ಎಂದರೆ ನಿಮಗೆ ಗೊತ್ತಿದೆ ಎಂದು ಹೇಳಿದರೇ ಹೊರತು ಹೆಸರನ್ನು ಹೇಳಲಿಲ್ಲ.

**ಶ್ರೀ ಅರುಣ ಶಹಾಪುರ್:–** ಮಾನ್ಯ ಸಭಾಪತಿಯವರೆ, ಡಾ: ಮತ್ತಿಕಟ್ಟಿ ವೀರಣ್ಣನವರೆ, ಒಂದು ಮಾತು ಕರೆಕ್ಟ್ ಇದೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಅರುಣ ಶಹಪುರ್ ನೀನು ಸುಮ್ಮನೆ ಇರೋ. ನಿನಗೆ ಏನು ಗೊತ್ತಿದೆ. ನಿನ್ನ ಮಾತುಗಳನ್ನು ಕೇಳುತ್ತಾರೇನು? ಯಾವಾಗಲಾದರು ನಿನ್ನಕರೆದು ಮಾತನಾಡುತ್ತಾರೆಯೇ? ಅವರು ಇಲ್ಲಿ ಇದ್ದರಲಾ ್ಲಅವರೆಲ್ಲರೂ ಒಗ್ಗಟಾಗಿದ್ದಾರೆ. ನೀನು ಸುಮ್ಮನೆಇದ್ದು ಬಿಡು.

**ಶ್ರೀ ಅರುಣ ಶಹಾಪುರ್:–** ಅಣ್ಣಾವರೆ, ನೀವು ಹಿರಿಯರು ನಿಮ್ಮನ್ನು ಕರೆದು ಕೇಳಿಲ್ಲ. ನೀವು ತಿಳಿದುಕೊಂಡಿಲ್ಲ. ನೀವು ಸಭಾಪತಿಯವರಾಗಿದ್ದವರು. ನಿಮ್ಮ ಮಾತನ್ನು ಕೇಳಿದ್ದರೆ ಈ ತಿದ್ದುಪಡಿ ವಿಧೇಯಕವನ್ನು ತರುತ್ತಿರಲಿಲ್ಲ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ನಾನು ಮತ್ತು ನನ್ನಂತೆ ಇರುವಂತಹ ಹಲವಾರು ಹಿರಿಯರನ್ನು ಕರೆಯದೇ ಯಾವುದೇ ನಿರ್ಧಾರವನ್ನು ಈ ಸರ್ಕಾರ ಮಾಡಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಡಾ: ವೀರಣ್ಣ ಮತ್ತಿಕಟ್ಟಿಯವರನ್ನು ಕರೆಯುತ್ತಾರೆ. ಮೊದಲು ಯಾರು ಇವರನ್ನು ಕರೆಯುತ್ತಿರಲಿಲ್ಲ. ಸುಮ್ಮನೆ ಹೇಳಬೇಡಿ. ದೆಹಲಿಯಿಂದ ಹೇಳಿದರೆ ಮಾತ್ರ ಕರೆಯುತ್ತಿದ್ದರು. ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಇವರನ್ನು ಕರೆಯುತ್ತಿದ್ದಾರೆ. ಮೊದಲು ಕರೆಯುತ್ತಿರಲಿಲ್ಲ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಶ್ರೀ ಸಿದ್ದರಾಮಯ್ಯನವರು ನನ್ನನ್ನು ಕರೆಯುತ್ತಾರೆ. ಅದರಲ್ಲಿ ಎರಡು ಮಾತುಗಳಿಲ್ಲ. ಶ್ರೀ ಬಸವರಾಜ ಹೊರಟ್ಟಿಯವರನ್ನು ಕೂಡ ಕರೆದಿರುತ್ತಾರೆ. ಶ್ರೀ ಬಸವರಾಜ ಹೊರಟ್ಟಿಯವರ ಅಜೆಂಡಾನೇ ಬೇರೆ ಇರುತ್ತದೆ. ನನ್ನ ಅಜೆಂಡಾನೇ ಬೇರೆ ಇರುತ್ತದೆ. ನನ್ನ ಅಜೆಂಡಾ ಇಡೀ ರಾಜ್ಯದ ಹಿತದೃಷ್ಟಿಯಿಂದ ಇರುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಡಾ: ವೀರಣ್ಣ ಮತ್ತಿಕಟ್ಟಿಯವರನ್ನು ಕರೆಯುವುದಕ್ಕೆ ಮುಂಚೆಯೇ ಶ್ರೀ ಸಿದ್ದರಾಮಯ್ಯನವರು ನನ್ನನ್ನು ಕರೆದಿರುತ್ತಾರೆ.

**ಶ್ರೀ ಅರುಣ ಶಹಾಪುರ್:–** ಮಾನ್ಯ ಸಭಾಪತಿಯವರೆ, ಡಾ: ವೀರಣ್ಣ ಮತ್ತಿಕಟ್ಟಿಯವರು ಮಾಜಿ ಸಭಾಪತಿಯವರು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇವರದು ಏನು ಇಲ್ಲ, ಹೆಬ್ಬೆಟ್ಟು ಅಷ್ಟೇ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ನನ್ನದು ನೇರ, ಪಾರದರ್ಶಕ ಅಜೆಂಡಾ. ನನ್ನನ್ನು ಕರೆದು ಮಾತನಾಡಿ, ಎಲ್ಲರ ಎದುರಿಗೆ ನಮ್ಮ ಪಕ್ಷದ ಸೀನಿಯರ್ ಲೀಡರ್ಸ್, ಕಾರ್ಯಕರ್ತರು, ಹಿರಿಯ ಸಚಿವರ ಜೊತೆಯಲ್ಲಿ ಮಾತನಾಡುವಾಗ ನನ್ನನ್ನು ಕರೆಯುತ್ತಾರೆ. ಉಳಿದಿದ್ದು ನಿಮಗೆ ಗೊತ್ತಿದೆ. ಅದಕ್ಕೆ ಬಹಳ ಇದರ ಬಗ್ಗೆ ಮಾತನಾಡುವುದು ಬೇಡ. ಅದುದರಿಂದ ಇದನ್ನು ಇಲ್ಲಿಗೆ ಮುಗಿಸೋಣ. ಮುಂದಕ್ಕೆ ಹೋಗೋಣ.

**ಸಭಾಪತಿಯವರು:–** ಮುಂದಕ್ಕೆ ಹೋಗೋಣ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಶ್ರೀ ಬಸವರಾಜ ಹೊರಟ್ಟಿಯವರನ್ನು ಕೂಡಕರೆದು ಮಾತನಾಡಿಲ್ಲ. ನಿಮಗೆ ಅಜ್ಞೆ ಮಾಡಿದ್ದಾರೆ. ಶ್ರೀ ವಿ. ಸೋಮಣ್ಣನನ್ನಾಗಲಿ, ಇಲ್ಲಿ ಕೆಲವು ನಾಯಕರಾಗಲಿ ಇಲ್ಲಿ ವಿಚಾರ ಮಾತನಾಡಿ ಮಾಡಿಲ್ಲ. ಅದಕ್ಕೋಸ್ಕರವಾಗಿ ನಾವು ನೀವು ಮಾತನಾಡುವುದು ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಅದರೂ ಕೂಡ ಡಾ: ವೀರಣ್ಣ ಮತ್ತಿಕಟ್ಟಿಯವರನ್ನು ಮಂತ್ರಿಯನ್ನಾಗಿ ಮಾಡಿಲ್ಲ.

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಆದರೆ ಈಗ ಆ ವಿಷಯ ಅಪ್ರಸ್ತುತ.

**(ಗೊಂದಲ)**

**ಸಭಾಪತಿಯವರು:–** ಆಯಿತು ಈಗ ಮುಂದಕ್ಕೆ ಹೋಗಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಇಲ್ಲಿ ಸಂಕುಚಿತ ಭಾವನೆಇದೆ. ಇಲ್ಲಿ ಕ್ರಿಮಿನಲ್ action ಇದೆ. ಇಂತಹ ಮಾತುಗಳನ್ನು ಮಾತನಾಡುವುದು ಈ ಸದನದ ಗೌರವಾನ್ವಿತ ಸದಸ್ಯರುಗಳಿಗೆ ಶೋಭೆತರತಕ್ಕಂಥದ್ದಲ್ಲ. ದಯಮಾಡಿ ಇಲ್ಲಿ ಮೂಲಭೂತವಾಗಿ ನಿಮಗೆ ಗೊತ್ತಿದೆ. ಆರ್ಥಿಕ ವ್ಯವಹಾರ, ಆಡಳಿತದ ವೈಫಲ್ಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಶ್ವಾಸವನ್ನು ಕಳೆದುಕೊಂಡಿದೆ ಎನ್ನುವುದನ್ನು ಮಾನ್ಯ ಸದಸ್ಯರುಗಳು ಒಪ್ಪಿಕೊಳ್ಳುತ್ತಾರೆ ಮತ್ತು ಹಿರಿಯ ನಾಗರಿಕರು, ಜೀವನದ ವಿವಿಧ ರಂಗದಲ್ಲಿರುವಂತಹ ಹಿರಿಯರು, ಪ್ರಜ್ಞಾವಂತರು, ಅವರೆಲ್ಲರು ಹೇಳುವುದೇನೆಂದರೆ, ಇಲ್ಲಿ ನಡೆದಿರುವುದು ಬಹಳಷ್ಟು ಅಸಂತೋಷ ಜನರ ಮಧ್ಯೆ. ಆದರೆ ನಾನು ಹೇಳುತ್ತೇನೆ. ಒಮ್ಮೆಲೆ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೆಲವು ಜನರು ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು

ಎರಡು ವರ್ಷಗಳಾಯಿತು, ಈ ಅವ್ಯವಹಾರಗಳು ಗೊತ್ತಿದ್ದರೂ ಏಕೆ ಸುಮ್ಮನೆ ಇದ್ದರು ಎಂದು ಹೇಳಿದರು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ಅವ್ಯವಹಾರಕ್ಕೂ ಬಿಬಿಎಂಪಿ ಯನ್ನು ಡಿವಿಜನ್ ಮಾಡುವುದಕ್ಕೂ ಏನು ಸಂಬಂಧ? ಅವ್ಯವಹಾರವನ್ನು ತಡೆಯುವುದಕ್ಕೆ ನಿಮ್ಮ ಸರ್ಕಾರಕ್ಕೆ ದಮ್ಮು ಇಲ್ಲವೇ? ಅದನ್ನು ಒಡೆದು ಮಾಡಬೇಕೇ? Bifurcate ಮಾಡುತ್ತೀರಾ?

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರಕ್ಕೆ ದಮ್ಮು ಇದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರು ಮಾತನಾಡಲಿ ಬಿಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಭ್ರಷ್ಟಾಚಾರವನ್ನು ಮಾಡುತ್ತಿರುವುದರಿಂದ ಬಿಬಿಎಂಪಿ ಯನ್ನು ಒಡೆಯಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಇದೆ. ಭ್ರಷ್ಟಾಚಾರ ಮಾಡುವವರನ್ನು ತೆಗೆಯಲಿ ನೋಡೋಣ.

**Dr. MATTIKATTI VEERANNA:-** Don't interpret like this. ಒಂದು ನಿಮಿಷ. ನಾನು ಮೂರು ನಗರ ಪಾಲಿಕೆಯನ್ನಾಗಿ ಮಾಡಿದರೂ ಸಹಿತ ಬೆಂಗಳೂರಿನ ಹೆಸರಿಗೆ, ಬೆಂಗಳೂರಿನ ಬ್ರಾಂಡ್ ನೇಮ್‌ಗೆ ತೊಂದರೆಯಾಗುವುದಿಲ್ಲವೆಂದು ಹೇಳುತ್ತಿದ್ದೇನೆ. ಈಗ ಏಕೆ ಇದನ್ನು ಒಡೆಯುವುದಕ್ಕೆ ಹೋಗುತ್ತಿದ್ದೀರಿ, ಈಗ ಬಿಬಿಎಂಪಿ ಯನ್ನು ಸರ್ಕಾರ ಏಕೆ supersede ಮಾಡಿತು ಎಂದು ಹೇಳಿದ್ದಾರೆ. ಎರಡು ವರ್ಷಗಳಿಂದ ಈ ಸರ್ಕಾರ ಅಧಿಕಾರ ನಡೆಸುತ್ತಿದೆ. ನಿಮ್ಮ ಪಕ್ಷ ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಇದನ್ನು ಮಾಡಬೇಕಾಗಿತ್ತು ಎಂದು ಕೆಲವು ಸದಸ್ಯರುಗಳು ಹೇಳಿದ್ದಾರೆ. ಅಧಿಕಾರಕ್ಕೆ ಬಂದ ತಕ್ಷಣ ಮಾಡುವಂಥದ್ದು ಸರ್ಕಾರಕ್ಕೆ ಶೋಭೆಯನ್ನು ತರುವಂಥದ್ದಲ್ಲ. ಅದನ್ನು ಸಂಪೂರ್ಣವಾಗಿ ವಿಚಾರ ಮಾಡಬೇಕಾಗಿತ್ತು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರೆ ತಾವು ಬೇಜಾರು ಮಾಡಿಕೊಳ್ಳಬೇಡಿ. ಒಂದು ನಿಮಿಷ ಯೀಲ್ಡ್ ಆಗಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ, ತಾವು ಹಿರಿಯ ಸದಸ್ಯರು ತಾವು ಮಾತನಾಡುತ್ತಿರುವುದು ರೆಕಾರ್ಡ್‌ಗೆ ಹೋಗುತ್ತಿದೆ. ಒಂದು ಇವತ್ತು ಬೆಂಗಳೂರು ನಗರ ಸೂಕ್ಷ್ಮತೆ ಇದೆಯಲ್ಲಾ, ಇವತ್ತು ಹುಬ್ಬಳ್ಳಿ–ಧಾರವಾಡ ಎಷ್ಟು ವರ್ಷಗಳಿಂದ

ಒಂದಾಗಿದೆ? ಬೆಂಗಳೂರು ನಗರಕ್ಕೆ ನೂರಾರು ವರ್ಷಗಳ ಇತಿಹಾಸ ಇದೆ. ದಯಮಾಡಿ ತಾವು ಏನು ಬೇಕಾದರೆ ಹೇಳಿ ಒಬ್ಬರೇ ಮೇಯರ್‌ಅನ್ನು ಮಾಡುತ್ತೇವೆಂದು ಹೇಳಿಬಿಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿ. ಸೋಮಣ್ಣನವರೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ಸದಸ್ಯರು ಏನು ಬೇಕಾದರೂ ಹೇಳಬಹುದು, ನಮ್ಮ ಪಕ್ಷದವರು ಮಾತನಾಡಬಾರದಾ?

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ನಾನು ಏನು ಬೇಕಾದರೂ ಮಾತನಾಡುವುದಿಲ್ಲ. ನಾನು ಹೇಳಿದ್ದು ಏನೆಂದರೆ ಶ್ರೀ ವಿ. ಸೋಮಣ್ಣನವರು ಮಾತನಾಡುವಾಗ ಯಾರ್‍ಯಾರು ಏನೇನು ಮಾಡಿದರು ಎಂದು ಹೇಳುವಾಗ ಯಾರು ಮಾಡಿದ್ದು ಎನ್ನುವುದನ್ನು ಹೇಳಲಿಲ್ಲ. ಮಾನ್ಯ ವಿ. ಸೋಮಣ್ಣನವರೆ ನಾನು ಏನು ಬೇಕಾದರೂ ಮಾತನಾಡಿಲ್ಲ. ನೀವು ಎಲ್ಲಾ ವಿಚಾರವನ್ನು ಬಿಚ್ಚಿಡಲಿಲ್ಲ. ಕೆಲವೇ ಜನರ ಕೂಡಿ ವಿಚಾರಗಳನ್ನು ಹಂಚಿಕೊಂಡರು. ಈ ಮನೆಯ ಸದಸ್ಯರಾಗಿ ಎಲ್ಲವನ್ನು ಮುಕ್ತವಾಗಿ ಬಿಚ್ಚಿಟ್ಟಿದ್ದರೆ ಇನ್ನು ದೊಡ್ಡವರಾಗುತ್ತಿದ್ದಿರೆಂದು ಅಷ್ಟೇ ಹೇಳಿದ್ದೇನೆ. ಎರಡನೆಯದಾಗಿ ಮತ್ತೆ ಶ್ರೀ ಅಶ್ವಥ ನಾರಾಯಣ್‌ರವರು ಮಾತನಾಡುವಾಗ ಉತ್ತಮವಾದಂತಹ ವಿಚಾರಗಳನ್ನು ಹಲವಾರು ಹೇಳಿದ್ದಾರೆ. ಆದರೆ ಅವರೂ ಕೂಡ ವಿಚಾರವನ್ನು ಪ್ರತಿಪಾದನೆ ಮಾಡುವಾಗ ಕೆಲವು ಜನರ ಮುಖವನ್ನು ಮಾತ್ರ ನೋಡಿಕೊಂಡು ಮಾತನಾಡಿದರು. ಆದರೆ ನಾನು ಆ ರೀತಿಯಾಗಿ ಮಾಡುವುದಿಲ್ಲ. ಏಕೆಂದರೆ ನಾನು ಮತ್ತು ಶ್ರೀ ಬಸವರಾಜ ಹೊರಟ್ಟಿ ಬಹಳ ಆತ್ಮೀಯರು, ಆದರೂ ಕೂಡ ಏನು ಎನ್ನುವುದನ್ನು ನೇರವಾಗಿ ಎದುರಿಗೆ ಹೇಳಿಬಿಡುತ್ತೇನೆ. ಅವರು ಕೂಡ ನೇರವಾಗಿಯೇ ಹೇಳಿಬಿಡುತ್ತಾರೆ. ಹೌದೋ ಅಲ್ಲವೋ ಎನ್ನುವುದನ್ನು ಶ್ರೀ ಬಸವರಾಜ ಹೊರಟ್ಟಿ ಹೇಳಬೇಕು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ನಾನು ಎಲ್ಲರ ಮುಖವನ್ನು ಕೂಡ ನೋಡಿಕೊಂಡು ಮಾತನಾಡಿದ್ದೇನೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಮುಖವನ್ನು ಕೂಡ ನೋಡಿಕೊಂಡು ಮಾತನಾಡಿದ್ದೇನೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಈಗ ಅದಕ್ಕೆ ನಾನು ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಿ. ಸೋಮಣ್ಣನವರಿಗೆ ಬೆಂಗಳೂರಿನ ವಿಚಾರ ಬಹಳ ಸೂಕ್ಷ್ಮವಾದದ್ದು ಬಹಳ ಮಹತ್ವಪೂರ್ಣವಾದದ್ದು ಎಂದು ಹೇಳಿದ್ದಾರೆ. ಅದನ್ನು ನಾನು ಕೂಡ ಒಪ್ಪುತ್ತೇನೆ. ಈ ನಗರವನ್ನು ಪ್ರತಿಷ್ಠಾಪನೆ ಮಾಡಿದಂತಹ ನಾಡಪ್ರಭು ಕೆಂಪೇಗೌಡರ ವಿಚಾರದಲ್ಲಿಯೂ ಕೂಡ ಬೆಂಗಳೂರು ಇಷ್ಟೊಂದು ಬೃಹತ್ ಅಗಿ ಬೆಳೆಯಬಾರದು, 439 ವರ್ಷಗಳ ಹಿಂದೆ ಬೆಂಗಳೂರು ಸ್ಥಾಪನೆಯಾಯಿತು. ಈ 439 ವರ್ಷಗಳಲ್ಲಿ ಅಂದಿನ ಬೆಂಗಳೂರಿಗಿಂತಲೂ ಈಗಿನ ಬೆಂಗಳೂರು 400 ಪಟ್ಟು ದೊಡ್ಡದಾಗಿದೆ. ಆಗ ಅವರ ವಿಚಾರಧಾರೆ, ಅವರ ಮುನ್ಸೂಚನೆ, ಅವರ ಬುದ್ಧಿಶಕ್ತಿಗೆ ಗೌರವವನ್ನು ನೀವು ಕೊಡುವುದಾದರೆ ಬೆಂಗಳೂರನ್ನು ಅವರು ಏನು ಬೆಂಗಳೂರಿನ ನಾಲ್ಕು ಗಡಿ ಗೋಪುರಗಳನ್ನು ನಿರ್ಮಾಣ ಮಾಡಿದ್ದಾರೆ ಅಷ್ಟಕ್ಕೆ ಸೀಮಿತಗೊಳಿಸಬೇಕಾಗಿತ್ತು. ನೀವು ಮಾತನಾಡುವಾಗ ನಾಡಪ್ರಭು ಕೆಂಪೇಗೌಡರ ಬಗ್ಗೆ ಗೌರವ, ಭಕ್ತಿ ಎಲ್ಲಾ ಇದೆ. ಆದರೆ ತಪ್ಪು ಕಲ್ಪನೆಯ, ತಪ್ಪು ಸಂದೇಶ ಹೋಗಬಾರದು. ಆದರೆ ಈಗ ಈ ಬೆಂಗಳೂರು ಹಿಂದೆ ಯಾವ ರೀತಿಯಾಗಿ ಇದು ಮಾಹಿತಿ ತಂತ್ರಜ್ಞಾನದ ರಾಜಧಾನಿಯಾಗಿತ್ತು. ಮುಂಬಯಿ ನಂತರ ಆರ್ಥಿಕ ಡೆವಲಪ್‌ಮೆಂಟ್, economic movements, ಇದೆಲ್ಲಾ ಹೆಚ್ಚು ವ್ಯವಸ್ಥಿತವಾಗಿ, ಅಭಿವೃದ್ಧಿ ಪರವಾಗಿ ನಡೆಯುತ್ತಿದ್ದ ನಗರ ಯಾವುದಾದರೂ ಇದ್ದರೆ ಅದು ಬೆಂಗಳೂರು ನಗರ. ಅದಕ್ಕೆ ಈ ರೀತಿಯ ಹೆಸರು ಮತ್ತು ಗೌರವ ಇದೆ. ಆಗಲೇ ಮಾನ್ಯ ಸಭಾಪತಿಯವರು ಹೇಳಿದಂತೆ ವಿಶ್ವದ ಯಾವುದೇ ಸಂಘಟನೆ ಇರಲಿ, ಯಾವುದೇ ದೇಶದ ರಾಷ್ಟ್ರಪತಿಯಾಗಲಿ, ಪ್ರಧಾನ ಮಂತ್ರಿಯಾಗಲಿ ಬಂದರೆ ಬೆಂಗಳೂರು ಮಹತ್ತರವಾದ, ಅತ್ಯಂತ ಉನ್ನತವಾದಂತಹ ಮಾನವ ಸಂಪನ್ಮೂಲ ಇರುವಂತಹ ನಗರವೆಂದು ಅನ್ನುತ್ತಿದ್ದರು.

**(6–00 ಗಂಟೆ)**

**ಶ್ರೀ ಬಸವರಾಜ ಹೊರಟ್ಟಿ:–** ಅಂತಹ ಬೆಂಗಳೂರು ನಗರವನ್ನು ಒಡೆಯಬೇಡಿರಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಅದು ಆ ರೀತಿ ಅಲ್ಲ, ನೀನು ಸುಮ್ಮನೆ ಯಾರದಾದರೂ ಫೋನ್ ಬಂದ ಕೂಡಲೇ ಬದಲಾವಣೆ ಮಾಡಿಬಿಡುತ್ತೀಯ. ದಯಮಾಡಿ ಆ ರೀತಿ ಮಾಡಬೇಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಹಕ್ಕುಚ್ಯುತಿ ಪ್ರಸ್ತಾವವನ್ನು ಮಂಡಿಸಬೇಕಾಗುತ್ತದೆ, ಅವರು ಏನೇನೋ ಹೇಳುತ್ತಾರೆ ನೋಡಿ. ಯಾರದೋ ಫೋನ್ ಬಂತು, ಏನೋ ಬಂತು ಎಂದು ಹೇಳಿದರೆ ಹೇಗೆ?

**ಸಭಾಪತಿಯವರು:–** ಅದು ಅವರು ಸ್ನೇಹದಲ್ಲಿ ಏಕವಚನದಲ್ಲಿ ಹೇಳಿದ್ದು, ಅದನ್ನೆಲ್ಲಾ ನೀವು ಗಂಭೀರವಾಗಿ ತೆಗೆದುಕೊಳ್ಳುವಂತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಫೋನ್ ಕಾಲ್ ಬರುವುದೇ ಇಲ್ಲ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಈ ಸದನ ಬೆಳಿಗ್ಗೆ 11.00 ಗಂಟೆಗೆ ಸೇರಬೇಕೆಂದಿತ್ತಲ್ಲಾ, ನಾವು ಹೊರಟ್ಟಿಯವರನ್ನು ಹುಡುಕುತ್ತಿದ್ದೆವು, ಅವರು ಇವತ್ತು ಬರುವುದಿಲ್ಲ ಎಂದು ನಮ್ಮ ಸ್ನೇಹಿತರು ಹೇಳಿದರು. ಆಮೇಲೆ ಅವರು ದಿಢೀರನೆ ಸಂಜೆ ನಾಲ್ಕು ಗಂಟೆಗೆ ಪ್ರತ್ಯಕ್ಷರಾಗಿಬಿಟ್ಟರು. ಆಮೇಲೆ ನಾವು ಈ ವಿಧೇಯಕವನ್ನು ಅನುಮೋದನೆ ಮಾಡೋಣ, ಇದು ರಾಜ್ಯದ ಹಿತದೃಷ್ಟಿಯಿಂದ, ಬೆಂಗಳೂರಿನ ಹಿತದೃಷ್ಟಿಯಿಂದ ಇದೆ. ಬೆಂಗಳೂರಿನ ಹೆಸರಿಗೆ ಕೆಟ್ಟ ಹೆಸರು ಬರಬಾರದು, ಬೆಂಗಳೂರನ್ನು Garbage City ಮಾಡದೆ, ಅತ್ಯಂತ ಅಭಿವೃದ್ಧಿಪರವಾದ, ಜನಪರವಾದಂತಹ ನಗರವನ್ನಾಗಿ ನಿರ್ಮಾಣ ಮಾಡಬೇಕು ಎನ್ನುವ ದೃಷ್ಟಿಯಿಂದ ...

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನನ್ನನ್ನು ಅಲ್ಲಿಯೇ 4.00 ಗಂಟೆಗೆ ಬಿಟ್ಟು ನೀವು ಬೆಂಗಳೂರಿಗೆ ಹೋದಿರಲ್ಲಾ ...

**ಡಾ: ಮತ್ತಿಕಟ್ಟಿ ವೀರಣ್ಣ:–** ನಾನು ಅದೇ ವಿಚಾರಕ್ಕೆ ಬರುತ್ತಿದ್ದೇನೆ, ನಮ್ಮ ವಿಚಾರಧಾರೆಯಂತೆಯೇ ಮಾನ್ಯ ಹೊರಟ್ಟಿಯವರು ಸಹ ವಿಚಾರ ಮಾಡುತ್ತಾರೆ ಎನ್ನುವ ವಿಶ್ವಾಸ ನಮಗೆ ಈಗಲೂ ಇದೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ, ಅವರು ಆ ರೀತಿ ನಮಗೆ ಬೆಂಬಲ ಕೊಡುತ್ತಾರೆ, ಈ ಉತ್ತಮ ಕಾರ್ಯಕ್ಕೆ ಸಂಪೂರ್ಣವಾಗಿ ಗಟ್ಟಿಯಾಗಿ ನಿಲ್ಲುತ್ತಾರೆ ಎಂದು ನಾವೂ ನಿರೀಕ್ಷೆಯಲ್ಲಿದ್ದೆವು. 6.00 ಗಂಟೆಯ ನಂತರ ಬದಲಾವಣೆ ಆಯಿತು, ಈಗಲಾದರೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ...

**ಸಭಾಪತಿಯವರು:–** ಈಗ ಮತ್ತೆ 6.00 ಗಂಟೆಯಾಯಿತು, ಮತ್ತೆ ಬದಲಾವಣೆ ಮಾಡಿಸಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಈಗಲಾದರೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಸೋಮಣ್ಣನವರು, ಸನ್ಮಾನ್ಯ ರಾಮಚಂದ್ರಗೌಡರು, ಸನ್ಮಾನ್ಯ ಹೊರಟ್ಟಿಯವರು, ಶ್ರೀಮತಿ ವಿಮಲಾಗೌಡರಿಗೆ ವಿನಂತಿಸುತ್ತೇನೆ, ಮಾನ್ಯ ಗಣೇಶ್ ಕಾರ್ಣಿಕ್‌ರವರು ಸಹ ಬಹಳ ವಿಚಾರವಾದಿಗಳು, ಅವರನ್ನು ಪ್ರತಿನಿಧಿಸುವಂತಹ ಆ ಭಾಗದ ಅಧಿನಾಯಕರಾಗಿ ಈ ಹಿಂದೆ ಡಾ: ವಿ.ಎಸ್. ಆಚಾರ್ಯ ಅವರಿದ್ದರು. ಅವರಿದ್ದರೆ ನಿಮ್ಮನ್ನು ಇವತ್ತು ಒಪ್ಪಿಸಿಬಿಡುತ್ತಿದ್ದರು. ಅವರು

ಯಾವಾಗಲೂ ಬಹಳ ದೊಡ್ಡ ವಿಚಾರವಂತರು, ಸರಳತೆ ಮತ್ತು ಸಜ್ಜನಿಕೆಯ ವ್ಯಕ್ತಿತ್ವದವರು. ಸನ್ಮಾನ್ಯ ಕೋಟ ಶ್ರೀನಿವಾಸ ಪೂಜಾರ್‌ರವರು ಅದನ್ನು ಒಪ್ಪುತ್ತಾರೆ. ಅವರು ಸಹ ಅದೇ ರೀತಿಯಾಗಬೇಕೆಂಬುದು ನಮ್ಮ ಆಕಾಂಕ್ಷೆ. ತಾವು ಸಹ ವಿಶಾಲ ಹೃದಯದ ಉತ್ತಮ ಪ್ರಗತಿಪರ ವಿಚಾರಗಳನ್ನು ಬೆಂಬಲಿಸುತ್ತೀರಿ ಎನ್ನುವುದು ನಮ್ಮ ನಂಬಿಕೆಯಾಗಿದೆ. ಅದಕ್ಕಾಗಿಯೇ ಹಲವಾರು ಸಂದರ್ಭಗಳಲ್ಲಿ ನಾನು ತಮ್ಮನ್ನು ಅಭಿನಂದಿಸಿದ್ದೇನೆ. ಆ ರೀತಿ ಎಲ್ಲ ನಾಯಕರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಿಮಗೆ ಕಾಂಗ್ರೆಸ್‌ನವರು ದಾರಿ ತಪ್ಪಿಸುತ್ತಾರೆ ಎಂದು ಮಾನ್ಯ ಸಿದ್ದರಾಮಯ್ಯನವರಿಗೆ ಏನು ಹೇಳಿದರು, ಇದು ದುರ್ದೈವದ ಸಂಗತಿ. ಹಾಗೆನ್ನುವವರು ಅವರೇ ದಾರಿ ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, original Congress ನವರು ದಾರಿ ತಪ್ಪಿಸುತ್ತಾರೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ತಾವು ಆಮೇಲೆ ಮಾತನಾಡಿ, ಇವರು ಮಾತನಾಡಿದ್ದನ್ನೆಲ್ಲಾ ತಾವೂ ಕೇಳಿದ್ದೀರಿ. ಮಾನ್ಯ ಸಿದ್ದರಾಮಯ್ಯನವರು ಯಾರೇ ಹೇಳಿದರೂ, ದಾರಿ ತಪ್ಪುವ ವ್ಯಕ್ತಿತ್ವದ ನಾಯಕನಲ್ಲ. ರಾಜಕೀಯದಲ್ಲಿ 45 ವರ್ಷಗಳ ಕಾಲ ಧೀರ ಹೋರಾಟ ಮಾಡಿ ಪಟ್ಟಭದ್ರ ಹಿತಾಸಕ್ತಿಗಳು ದಾರಿತಪ್ಪಿಸಲು ಪ್ರಯತ್ನ ಪಟ್ಟಂತಹ ಮಹತ್ತರ ಶಕ್ತಿಗಳನ್ನು ವಿರೋಧಿಸಿ ಜನಪರವಾಗಿ ಬೆಳೆದು ಬಂದಂತಹ ಒಬ್ಬ ನಾಯಕ. ಕಾಂಗ್ರೆಸ್‌ನ ವಿಚಾರಧಾರೆ, ಅದರ ತತ್ವನಿಷ್ಠೆ, ಅದೆಲ್ಲಾ ಇವತ್ತು ಯಾವುದನ್ನು ನಿಮ್ಮ ಜೊತೆ ಇದ್ದಾಗ ಸಾಧಿಸಲಿಕ್ಕಾಗಲಿಲ್ಲ, ಅದನ್ನು ಈ ರಾಜ್ಯದ ಜನತೆಗೆ ಅನುಕೂಲವಾಗುವಂತೆ ಜಾರಿಗೊಳಿಸಬೇಕು, ಈ ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿಯತ್ತ ಒಯ್ಯಬೇಕು, ಯಾವ ವರ್ಗ ಶೋಷಿತವಾಗಿದೆ, ಒಂದು ಹೊತ್ತಿನ ಊಟಕ್ಕೂ ದಿಕ್ಕಿಲ್ಲದ ಜನರಿಗೆ ನಾನು ಶಕ್ತಿಯನ್ನು ಕೊಡಬೇಕು, ಒಂದು ಸಮಾಜ ಮುಂದುವರೆಯಬೇಕಾದರೆ ವಿದ್ಯೆ ಬಹಳ ಮುಖ್ಯವಾಗಿರುವುದರಿಂದ ಅವರಿಗೆ ಉತ್ತಮವಾದ ಶಿಕ್ಷಣವನ್ನು ಕೊಡಬೇಕು ಎನ್ನುವ ಕಾರಣಕ್ಕಾಗಿಯೇ ಸಮಾಜ ಕಲ್ಯಾಣ ಇಲಾಖೆಗೆ ರೂ. 16000 ಕೋಟಿಗಳಿಗೂ ಹೆಚ್ಚು ಹಣವನ್ನು ಖರ್ಚು ಮಾಡುವ ಮೂಲಕ ಆ ವರ್ಗದ ಜನತೆಗೆ ಅನುಕೂಲವಾಗುವಂತಹ ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ.

**ಶ್ರೀ ನಾರಾಯಣ ಸಾ. ಬಾಂಡಗೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿಯವರು ಬಜೆಟ್ ಮೇಲೆ ಭಾಷಣ ಮಾಡುತ್ತಿದ್ದಾರೆಯೋ ಅಥವಾ ಸರ್ಕಾರ ತಂದಿರುವ ವಿಧೇಯಕದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಯೋ?

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಹೇಳಬಯಸುವುದೇನೆಂದರೆ, ದಯಮಾಡಿ ಅವರು ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಈ ರೀತಿ ಮಾತನಾಡುವುದು ಸರಿಯಲ್ಲ. ಯಾರೋ ಆಡುವ ಹುಡುಗರು ಅಥವಾ ಹೊಸದಾಗಿ ರಾಜಕೀಯಕ್ಕೆ ಬಂದವರಾದರೆ ಕೇಳಬಹುದು. ಮಾನ್ಯ ಸಿದ್ದರಾಮಯ್ಯನವರು ತನ್ನದೇ ಆದಂತಹ ವ್ಯಕ್ತಿತ್ವದ ಮೇಲೆ 45 ವರ್ಷಗಳ ಕಾಲ ದಿಟ್ಟ ರಾಜಕೀಯ ಮಾಡಿ ತನ್ನ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ. ಅಂತಹವರನ್ನು ಬೇರೆ ಯಾರೂ ಸಹ ದಾರಿ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಇವರೀಗ ದಾರಿ ತಪ್ಪಿಸುವುದಕ್ಕೆ ಏನು ಪ್ರಯತ್ನ ಪಡುತ್ತಿದ್ದಾರೆ, ಅವರ ಪ್ರಯತ್ನಗಳು ಖಂಡಿತವಾಗಿಯೂ ಫಲಪ್ರದವಾಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ನಾವು ಏನು ಹೇಳುತ್ತೇವೆಂದರೆ, 'ನಮ್ಮ ಹೋರಿ ಯಾರ ಹೊಲದಲ್ಲಿಯಾದರೂ ಮೇಯಲಿ, ಮೇಯಲೊಲ್ಲದೇಕೆ' ಎಂದು ಬಿಟ್ಟಿದ್ದೇವೆ.

**(ಗೊಂದಲ)**

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಇವರ ವ್ಯಕ್ತಿತ್ವ, ಚಿಂತನೆ ...

**(ಗೊಂದಲ)**

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲಿ ಹೋರಿ ಪ್ರಶ್ನೆ ಇಲ್ಲ, ಇವರ ಹೋರಿ ಎಲ್ಲಿ ಬೇಕಾದರೂ ಹೋಗಲಿ, ನಮಗೇನಾಗಬೇಕಾಗಿದೆ? ಮನುಷ್ಯತ್ವ, ಮಾನವೀಯತೆ ಇರುವ ಒಬ್ಬ ನಾಯಕರನ್ನು ಇವರು ಹೋರಿಗೆ ಹೋಲಿಸುತ್ತಿದ್ದಾರೆ. ಈ ರೀತಿ ಮಾಡಿ ದಾರಿ ತಪ್ಪಿಸುವವರು ಇವರೇ, 30 ವರ್ಷ ಅವರನ್ನು ದಾರಿ ತಪ್ಪಿಸಿದರು. ಅವರ ಹೆಸರಿನಲ್ಲಿ ಮತಗಳನ್ನು ಗಳಿಸಿದಿರಿ; ಅಧಿಕಾರಕ್ಕೆ ಬಂದಿರಿ; ಅವರನ್ನೇ ತುಳಿದಿರಿ, ಆದರೆ ನಾವು ಆ ರೀತಿ ಮಾಡಿಲ್ಲ. ಇದು ಐತಿಹಾಸಿಕ ದಾಖಲೆ.

**(ಆಡಳಿತ ಪಕ್ಷದ ಸದಸ್ಯರು ಡಾ: ಮತ್ತಿಕಟ್ಟಿ ವೀರಣ್ಣನವರ ಮಾತುಗಳನ್ನು ಮೇಜು ತಟ್ಟುವ ಮೂಲಕ ಸ್ವಾಗತಿಸಿದರು)**

ನಾವು ಕರೆದುಕೊಂಡು ಬಂದೆವು, ನಮ್ಮ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮಾಡಿದೆವು. ಈ ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ಮಾಡಿದೆವು. ಅವರ ಆಸೆ–ಆಕಾಂಕ್ಷೆಗಳು, ಅವರ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದು ಕರ್ನಾಟಕವನ್ನು ಸಮೃದ್ಧ ಕರ್ನಾಟಕ, ಶೋಷಣೆರಹಿತ ಕರ್ನಾಟಕವನ್ನಾಗಿ ಮಾಡಿ ಸಮಾಜದ ಎಲ್ಲ ಜನಾಂಗಗಳು ಅತ್ಯಂತ ಪ್ರೀತಿ ವಿಶ್ವಾಸದಿಂದ ಜೀವಿಸುವಂತಹ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ದಾರಿ ತಪ್ಪಿಸುತ್ತಿರುವುದು ಕಾಂಗ್ರೆಸ್ ಪಕ್ಷವಲ್ಲ, ...

**ಶ್ರೀ ನಾರಾಯಣ ಸಾ. ಬಾಂಡಗೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಬಜೆಟ್ ಮೇಲೆ ಚರ್ಚೆ ಮಾಡುತ್ತಿದ್ದಾರೆಯೆ?

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಿದ್ದರಾಮಯ್ಯನವರನ್ನು ಕೈಹಿಡಿದೆತ್ತಿಕೊಂಡಿದ್ದು ಕಾಂಗ್ರೆಸ್, ದಾರಿ ತಪ್ಪಿಸುವವರು ನೀವು. ಆದ್ದರಿಂದ ಇನ್ನು ಮೇಲೆ ಈ ರೀತಿಯೆಲ್ಲಾ ಹೇಳುವುದಕ್ಕೆ ಹೋಗಬೇಡಿ. ಆ ರೀತಿ ನೀವೇನಾದರೂ ಹೇಳಿದರೂ ಅದಕ್ಕೆ ಮಹತ್ವ ಇರುವುದಿಲ್ಲ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಕಾಂಗ್ರೆಸ್ ಪಕ್ಷದವರಿಗೆ ಲೀಡರ್ ಇರಲಿಲ್ಲವೆಲ್ಲಾ ಅದಕ್ಕೆ ಅವರನ್ನು ಲೀಡರ್ ಮಾಡಿಕೊಂಡಿದ್ದೀರಿ.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಕಡೆ ಮುಖ್ಯಮಂತ್ರಿ ಆಗುವವರು ಯಾರೂ ಇರಲಿಲ್ಲ, ಅದಕ್ಕೆ ಅವರನ್ನು ಅನಿವಾರ್ಯವಾಗಿ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೀರಿ. ನಿಮ್ಮಲ್ಲಿ ಮುಖ್ಯಮಂತ್ರಿಯಾಗುವಂತಹ ಅಭ್ಯರ್ಥಿ ಯಾರೂ ಇರಲಿಲ್ಲ, ಇದ್ದರೆ ಒಬ್ಬರ ಹೆಸರನ್ನು ಹೇಳಿ, ನೋಡೋಣ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ನಿಮ್ಮ ಪಾರ್ಟಿಯಲ್ಲಿ ಬೇರೆ ಯಾರಿಗೂ ಜಾಗವೇ ಇಲ್ಲ. ಒಂದೇ ಮನೆಯವರು ಮುಖ್ಯಮಂತ್ರಿಗಳಾಗಬಯಸುತ್ತಾರೆ, ಬೇರೆ ಯಾರಿಗೂ ಜಾಗವೇ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಿದ್ದರಾಮಯ್ಯನವರನ್ನು ಬಿಟ್ಟು ನಿಮ್ಮ ಪಾರ್ಟಿಯಲ್ಲಿ ಇನ್ನೊಬ್ಬರ ಹೆಸರನ್ನು ಹೇಳಿ. ಯಾರೂ ಇಲ್ಲವೇ ಇಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಬೇಕಾದಷ್ಟು ಜನರಿದ್ದಾರೆ, ಆದರೆ ನಿಮ್ಮ ಪಾರ್ಟಿಯಲ್ಲಿ ಬೇರೆ ಯಾರಿಗೆ ಅವಕಾಶವಿದೆ? ನಮ್ಮ ಪಾರ್ಟಿಯಲ್ಲಿ ಎಷ್ಟು ಜನರಿದ್ದಾರೆ, ನಿಮ್ಮಲ್ಲಿ ಯಾರಿದ್ದಾರೆ?

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಾರ್ಟಿಯಲ್ಲಿ ಮುಖ್ಯಮಂತ್ರಿಗಳಾಗುವ ಅಭ್ಯರ್ಥಿಗಳು ಯಾರೂ ಇಲ್ಲದ ಕಾರಣ ಬೇರೆ ಪಕ್ಷದಿಂದ ಇವರು ಆಮದು ಮಾಡಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ನಮ್ಮ ಪಾರ್ಟಿಯಲ್ಲಿ ಬೇಕಾದಷ್ಟು ಜನರಿದ್ದಾರೆ, ನಿಮ್ಮಲ್ಲಿ ಯಾರಿದ್ದಾರೆ? ನಿಮ್ಮ ಪಾರ್ಟಿಯಲ್ಲಿ ಬೇರೆ ಯಾರಿಗೂ ಜಾಗವೇ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ರೇವಣ್ಣನವರೇ, ನಾನು ತಮ್ಮನ್ನು appreciate ಮಾಡುತ್ತೇನೆ, ಏಕೆಂದರೆ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆದುಕೊಂಡು ಹೋಗಿದ್ದು ತಾವೇ. ತಾವೇ ಅವರನ್ನು ಕರೆದುಕೊಂಡು ಹೋಗಿ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೀರಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಹೊರಟ್ಟಿ, ನೀನು ಒಂದು ಬಾವಿಯಲ್ಲಿದ್ದೀಯ, ಆ ಬಾವಿಯನ್ನು ಬಿಟ್ಟು ಹೊರಗಡೆ ಬರಬೇಕು. ಬಾವಿಯಲ್ಲೇನಿರುತ್ತದೆ, ಅದರಂತೆ ನೀ. ಆ ಬಾವಿಯನ್ನು ಬಿಟ್ಟು ಈಜುವುದು ನಿನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸದನವನ್ನು ಪ್ರವೇಶಿಸಿದರು)**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ ಬಂದರು ನೋಡಿ, ಈ ಚರ್ಚೆ ಇಲ್ಲಿಗೆ ಸಾಕು ಬಿಡಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನಮ್ಮ ಕಾಂಗ್ರೆಸ್ ಪಕ್ಷದಿಂದ ಮಾನ್ಯ ನಿಜಲಿಂಗಪ್ಪನವರನ್ನು, ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು, ಮಾನ್ಯ ಎಸ್.ಎಂ. ಕೃಷ್ಣ ಅವರನ್ನು, ಮಾನ್ಯ ದೇವರಾಜ ಅರಸು ಅವರನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೇವೆ. ಆದರೆ ಈ ರೀತಿ ದಾರಿ ತಪ್ಪಿಸುವಂತಹ ಕೆಲಸವನ್ನು ನಾವು ಮಾಡುತ್ತಿಲ್ಲ, ಆ ಕೆಲಸವನ್ನು ತಾವು ಮಾಡಿದ್ದೀರಿ. ಅವರ ಹೆಸರಿನ ಮೇಲೆ ಮತಗಳನ್ನು ಗಳಿಸಿದಿರಿ, ಅಧಿಕಾರಕ್ಕೆ ಬಂದಿರಿ. ಈಗ ನೀವು ಎಲ್ಲಿದ್ದೀರಿ? ಅದಕ್ಕೋಸ್ಕರ ...

**ಸಭಾಪತಿಯವರು:–** ಆಯಿತು, ಈಗ ಆ ಬಗ್ಗೆ ಚರ್ಚೆ ಸಾಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನೇತಾರರಿಲ್ಲದಿದ್ದಾಗ ಮಾನ್ಯ ಸಿದ್ದರಾಮಯ್ಯನವರು ಬಂದು ಕಾಂಗ್ರೆಸ್ ಪಕ್ಷದ ನೇತೃತ್ವವನ್ನು ತೆಗೆದುಕೊಂಡರು.

**ಸಭಾಪತಿಯವರು:–** ಆಯಿತು, ಈಗ ಅದರ ಬಗ್ಗೆ ಚರ್ಚೆ ಬೇಡ, ಇನ್ನೂ ಎಷ್ಟು ಹೊತ್ತು ಅದೇ ವಿಚಾರದ ಬಗ್ಗೆ ಮಾತನಾಡುತ್ತೀರಿ, ಸಾಕು ಕುಳಿತುಕೊಳ್ಳಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಯಾರೂ ಸಹ ತಪ್ಪು ಕಲ್ಪನೆಗಳಿಗೆ ಮಹತ್ವ ಕೊಡಬಾರದು. ಈ ಎಲ್ಲ ದೃಷ್ಟಿಯಿಂದ ಮುಖ್ಯವಾಗಿ ಬೆಂಗಳೂರಿನ ಜನರಿಗೆ ಒಳ್ಳೆಯದಾಗುವಂತಹ ಕೆಲಸ, ಅವರ ನೋವು, ಆಸೆ–ಆಕಾಂಕ್ಷೆಗಳಿಗೆ ಸ್ಪಂದಿಸುವ ಸಲುವಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆ. ಅದಕ್ಕಾಗಿ ತಮಗೂ ವಿನಂತಿ ಮಾಡಿಕೊಳ್ಳುತ್ತೇನೆ, ತಾವೆಲ್ಲಾ ಸೇರಿ ಈ ವಿಧೇಯಕವನ್ನು ಅನುಮೋದಿಸಬೇಕಾಗುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರ ಮೊದಲ ವಿಚಾರ ಏನಿತ್ತು, ಆ ಪ್ರಕಾರ ತಾವೂ ಈ ವಿಧೇಯಕಕ್ಕೆ ಒಪ್ಪಿಗೆ ಸೂಚಿಸಬೇಕೆಂದು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಒಂದು ಕಮಿಟಿ ಮಾಡಿಬಿಡಿ. ನಿಮಗೆ ಎಲ್ಲವೂ ಗೊತ್ತಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ, ಮಾನ್ಯ ಮುಖ್ಯಮಂತ್ರಿಯವರು ಬೆಳೆಹಾನಿ ಪರಿಹಾರದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲಾಗಿದ್ದ ವಿಚಾರವಾಗಿ ಒಂದು ಹೇಳಿಕೆ ಮಾಡುವುದಾಗಿ ಸಮಯ ಕೋರಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಮುಖ್ಯಮಂತ್ರಿಯವರೇ, ತಾವು ಒಳ್ಳೆಯ ಸ್ಟೇಟ್‌ಮೆಂಟ್ ಮಾಡಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):–** ನಾವು ಯಾವಾಗಲೂ ಒಳ್ಳೆಯದನ್ನೇ ಮಾಡುವುದು. ರಾಜ್ಯದ ಹಿತದೃಷ್ಟಿಯಿಂದ ಮತ್ತು ನಿಮ್ಮ ಹಿತದೃಷ್ಟಿಯಿಂದ ನಾವು ಯಾವಾಗಲೂ ಒಳ್ಳೆಯ ಸ್ಟೇಂಟ್‌ಮೆಂಟ್‌ನ್ನೇ ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಒಳ್ಳೆಯದು, ಧನ್ಯವಾದಗಳು.

**ಶ್ರೀ ಸಿದ್ದರಾಮಯ್ಯ:–** ನೀವು ನಿಮ್ಮ ಜೀವಮಾನದಲ್ಲಿ ಅವೆಲ್ಲಾ ಮಾಡುವುದಿಲ್ಲ ಬಿಡಿ.

## 3. ಸಚಿವರ ಹೇಳಿಕೆ

ವಿಷಯ : **ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಏಪ್ರಿಲ್ 2015 ರಲ್ಲಿ ಅಕಾಲಿಕ ಆಲಿಕಲ್ಲು ಮಳೆಯಿಂದ ಹಾನಿಯಾಗಿರುವ ಬಗ್ಗೆ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಡನೆ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

"
- ದಿನಾಂಕ 8 ರಿಂದ 16 ನೇ ಏಪ್ರಿಲ್‌ವರೆಗೆ ರಾಜ್ಯದ ಉತ್ತರ ಕರ್ನಾಟಕದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು, ಕಲಬುರ್ಗಿ, ಯಾದಗಿರಿ, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಕಾಲಿಕ ಮಳೆ ಹಾಗೂ ಆಲಿಕಲ್ಲು ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿ ಜೀವಹಾನಿ, ಜಾನುವಾರು ಹಾನಿ, ಮನೆಹಾನಿ ಹಾಗೂ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ.

- ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಈ ಅವಧಿಗೆ ಈ ಭಾಗದಲ್ಲಿ 6 ರಿಂದ 7 ಮಿಮಿ ರಷ್ಟು ವಾಡಿಕೆ ಮಳೆಯಾಗಬೇಕಾಗಿದ್ದು, ಪ್ರಸ್ತುತ ಈ ಅವಧಿಯಲ್ಲಿ 50–150 ಮಿಮಿ ಮಳೆಯಾಗಿದೆ. ಈ ಮಳೆ ಪ್ರಮಾಣವು ವಾಡಿಕೆ ಮಳೆಗೆ ಹೋಲಿಸಿದಾಗ ಶೇ.1000 ರಷ್ಟು ಅಧಿಕವಾಗಿರುತ್ತದೆ.

- ಈ ಭಾರಿ ಪ್ರಮಾಣದ ಮಳೆಯು ಕೇವಲ 1/2 ಗಂಟೆಯಿಂದ 1 ಗಂಟೆ ಅವಧಿಯಲ್ಲಿ ಸುರಿದಿದೆ. ಇದರ ತೀವ್ರತೆಯು ಗಂಟೆಗೆ 50–100 ಮಿಮಿ ಅಧಿಕವಾಗಿರುತ್ತದೆ. ಕೆಲವೆಡೆ ಈ ಮಳೆಯೊಂದಿಗೆ ಆಲಿಕಲ್ಲು ಸುರಿದು ಹೆಚ್ಚಿನ ಅನಾಹುತ ಉಂಟಾಗಿದೆ.

- ಅಕಾಲಿಕ ಆಲಿಕಲ್ಲು ಮಳೆ ಹಾಗೂ ವೇಗವಾಗಿ ಬೀಸಿದ ಗಾಳಿಯಿಂದಾಗಿ ರಾಜ್ಯದ ಉತ್ತರ ಕರ್ನಾಟಕದ ಜಿಲ್ಲೆಗಳ ಪೈಕಿ ಕೊಪ್ಪಳ, ರಾಯಚೂರು, ಕಲಬುರ್ಗಿ, ಯಾದಗಿರಿ, ಬಳ್ಳಾರಿ, ಬೀದರ್, ವಿಜಯಪುರ ಮತ್ತು ಗದಗ ಜಿಲ್ಲೆಗಳಲ್ಲಿ ಕಟಾವು ಹಂತದಲ್ಲಿದ್ದ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿರುತ್ತದೆ. ಈ 8 ಜಿಲ್ಲೆಗಳಲ್ಲಿ ಒಟ್ಟು 64,462 ಹೆಕ್ಟೇರ್ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ.

- ಹಾನಿಯ ಪ್ರಮಾಣವು ಈ ಕೆಳಕಂಡಂತಿವೆ:- ದಿನಾಂಕ 8 ರಿಂದ 16 ನೇ ಏಪ್ರಿಲ್‌ವರೆಗೆ.

  1. 14 ಜೀವಹಾನಿ
  2. 112 ಜಾನುವಾರು ಹಾನಿ.
  3. 1,038 ಮನೆಗಳ ಹಾನಿ (ಪೂರ್ಣ ಹಾಗೂ ಭಾಗಶಃ ನಷ್ಟ).
  4. 63,029 ಹೆಕ್ಟೇರ್ ಕೃಷಿ ಬೆಳೆ ಹಾನಿ.
  5. 1,433 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿ.
  6. ರೂ. 12.00 ಲಕ್ಷ ಮೊತ್ತದ ವಿದ್ಯುತ್ ಉಪಕರಣಗಳಿಗೆ ಹಾನಿ.

- ಸಮೀಕ್ಷೆ ಪ್ರಕಾರ ಕೃಷಿ ಬೆಳೆಯ ಹಾನಿಯ ಅಂದಾಜು ಮೊತ್ತ ರೂ. 400.81 ಕೋಟಿಯಾಗಿರುತ್ತದೆ ಹಾಗೂ ತೋಟಗಾರಿಕೆ ಬೆಳೆಯ ಅಂದಾಜು ಮೊತ್ತ ರೂ.15.00 ಕೋಟಿಯಾಗಿರುತ್ತದೆ. ಈ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ಒಟ್ಟು ರೂ.422.36 ಕೋಟಿ ನಷ್ಟ ಉಂಟಾಗಿದೆ.

- ಜೀವ ಹಾನಿ, ಜಾನುವಾರು ಹಾನಿ ಹಾಗೂ ಮನೆಹಾನಿ ಪ್ರಕರಣಗಳಿಗೆ ಸಂಬಂದಿಸಿದಂತೆ ಕೇಂದ್ರ ಸರ್ಕಾರವು ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಬಗ್ಗೆ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಪರಿಹಾರ ಧನವನ್ನು ವಿತರಿಸುವಂತೆ ಈಗಾಗಲೇ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿದೆ.

- ದಿನಾಂಕ:20-4-2015ರಂದು ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಹಾನಿಯ ಬಗ್ಗೆ ಸಮೀಕ್ಷೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿಗಿಂತ ಹೆಚ್ಚುವರಿಯಾಗಿ ವಿಶೇಷ ಪ್ಯಾಕೇಜ್‌ನ್ನು ನೀಡುವ ಬಗ್ಗೆ ರಾಜ್ಯ ಸರ್ಕಾರವು ಘೋಷಿಸುವುದಾಗಿ ಆಶ್ವಾಸನೆ ನೀಡಿದ್ದೇವೆ. ಇದೀಗ ಸರ್ವೇ ಕಾರ್ಯ ಪೂರ್ಣಗೊಂಡಿದ್ದು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಮೊಮೊರಾಂಡಮ್ ಈಗಾಗಲೇ ಸಿದ್ದವಾಗಿದೆ. ರಾಜ್ಯಸರ್ಕಾರವು ಪರಿಹಾರ ಧನವನ್ನು ಪ್ರತಿ ಹೆಕ್ಟೇರ್‌ಗೆ ರೂ.25,000/-ದಂತೆ ಪಾವತಿಸಲು ನಿರ್ಣಯ ತೆಗೆದುಕೊಂಡಿದ್ದು ಈ ಮೊತ್ತವು ಎಸ್.ಡಿ.ಆರ್.ಎಫ್ ಮಾರ್ಗಸೂಚಿಯಲ್ಲಿ

ಪ್ರತಿ ಹೆಕ್ಟೇರ್‌ಗೆ ನಿಗಧಿಪಡಿಸಿರುವ ಮೊತ್ತ ರೂ.13,500/– ಕ್ಕಿಂತ ಸರಿ ಸುಮಾರು ಎರಡು ಪಟ್ಟು ಹೆಚ್ಚುವರಿಯಾಗಿ ಆಗಿರುವುದಾಗಿ ಗೌರವಾನ್ವಿತ ಸದಸ್ಯರಿಗೆ ತಿಳಿಸಲು ಹರ್ಷಿಸುತ್ತೇನೆ.

- ಎಸ್‌ಡಿಆರ್‌ಎಫ್/ ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ರೂ.83.58 ಕೋಟಿ (ಕೃಷಿ ಬೆಳೆ – ರೂ.78.79ಕೋಟಿ, ತೋಟಗಾರಿಕೆ ಬೆಳೆ – ರೂ.2.27ಕೋಟಿ, ಇತರೆ ನಷ್ಟ– ರೂ.2.52 ಕೋಟಿ) ನೆರವು ಪಡೆಯಲು ಅವಕಾಶವಿದೆ, ಬೆಳೆ ಪರಿಹಾರ ಮೊತ್ತವನ್ನು ಪ್ರತಿ ಹೆಕ್ಟೇರ್‌ಗೆ ರೂ.25,000/–ದಂತೆ ಹೆಚ್ಚಿಸಿದ್ದಲ್ಲಿ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.68.50ಕೋಟಿ (ಕೃಷಿ ಬೆಳೆ – ರೂ.67.00ಕೋಟಿ, ತೋಟಗಾರಿಕೆ ಬೆಳೆ – ರೂ.1.50ಕೋಟಿ) ಮೊತ್ತವನ್ನು ರಾಜ್ಯ ಸಂಪನ್ಮೂಲದಿಂದ ಭರಿಸಲಾಗುವುದು. ಇದರಿಂದಾಗಿ ಸಂತ್ರಸ್ಥರಿಗೆ ರೂ. 152.00 ಕೋಟಿ ಪರಿಹಾರ ಪಾವತಿ ಮಾಡಲಾಗುವುದು.
- ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಕೃಷಿ ರಾಜ್ಯ ಸಚಿವರು ನವದೆಹಲಿಗೆ ತೆರಳಿ ದಿನಾಂಕ: 24.04.2015 ರಂದು ಕೇಂದ್ರ ಸರ್ಕಾರದ ಮಾನ್ಯ ಕೃಷಿ ಸಚಿವರನ್ನು ಭೇಟಿ ಮಾಡಿ ಮೆಮೊರಾಂಡಮ್ ಸಲ್ಲಿಸಲಿದ್ದಾರೆ. ”

**ಸಭಾಪತಿಯವರು:–** ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:27–4–2015ನೇ ಸೋಮವಾರ ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)**